
ಕಲ್ಯಾಣ ಕಿರಣ

ಜನವರಿ - 2002

ಬೆಲೆ : ರೂ. 5-00



ವಿಶ್ವಗುರು ಬಸವಣ್ಣನವರು



ಓಂ ಶ್ರೀ ಗುರುಬಸವಲಿಂಗಾಯ ನಮಃ
86666

ಶರಣ ಮೇಳಕೆ ಬಂದು ಪಾವನನಾಗು

ಬಾ ಬಾ ಬಾ ಎಲೆ ಶರಣ ನೀನು ....
ಶರಣ ಮೇಳಕೆ ಬಂದು ಪಾವನನಾಗು ॥ ಪ ॥
ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ ॥
ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚೆಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ತ್ವ ಜೋಗುಳ ಹಾಡಿ ಶರಣರ ಶಿಶುಗಳ ತೂಗಿ ॥ 1 ॥
ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥
ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚನ್ನಣ್ಣ ನಾಗಲೆಯು ಕಾದಿದರು ॥ 3 ॥
ಶರಣರ ಕರುಳಿನ ಕರೆಯು ತಾ ಕೇಳಿಸದೆ ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ ? ॥ 4 ॥
ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥
ದೇವನೊಬ್ಬನೆ ತಂದೆ ಮನುಜರೆಲ್ಲರೂ ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೇ ಆಗು
ಬಸವ ಕಿರಣವೇ ಆಗಿ ತತ್ತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯ ಕರೆಯಿದು ॥ 6 ॥

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

www.Lingayathism.com

ಕಲ್ಯಾಣ ಕಿರಣ

ಸಂಪುಟ 32	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 1	ಜನವರಿ 2002	ವಾರ್ಷಿಕ ಚಂದಾ 50/- ರೂ.

ರಕ್ಷಾಪುಟ : ಬೆಂಗಳೂರು ಬಸವ ಮಂಟಪದಲ್ಲಿ ಇರುವ ವಿಶ್ವಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿ

★ ವೆಬ್ ಸೈಟ್‌ನಲ್ಲಿ ಕಲ್ಯಾಣಕಿರಣ ★
www.Lingayathism.com

KALYAN KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ : ಬಸವ ಮಂಟಪ, 2035 20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335/3322790

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ


ಓಂ ಶ್ರೀ ಗುರುಬಸವಲಿಂಗಾಯ ನಮಃ
86666



ಧರ್ಮಗುರು ಬಸವಣ್ಣ

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹದಿನೈದನೆಯ

ಶರಣ ಮೇಳ



ಗಣ ಧ್ವಜ

2002ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988 ಜನವರಿ 14, 15 ರಿಂದ 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನೈದನೆಯ ಶರಣ ಮೇಳವು 2002ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ , ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ' ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ದಿ. 11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ - ಧರ್ಮಗಳಿಗೆ ಸಂಬಂಧಪಟ್ಟಂತೆ

ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ(ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1.ಮಹಾಪೋಷಕರು	:5000ರೂ.ಮತ್ತು ಮೇಲೆ ಕೊಟ್ಟವರು.	4. ಹಿತೈಷಿಗಳು	: 500ರೂ
2.ಪೋಷಕರು	:2000ರೂ.ಮತ್ತು ಮೇಲೆ ಕೊಟ್ಟವರು.	5. ಸ್ವಾಗತ ಸಮಿತಿ ಸದಸ್ಯತ್ವ	: 250ರೂ
3.ದಾನಿಗಳು	:1000ರೂ.ಮತ್ತು ಮೇಲೆ ಕೊಟ್ಟವರು.	6. ಪ್ರತಿನಿಧಿ ಶುಲ್ಕ:	: 150ರೂ

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ - ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ.ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಶರಣ ಮೇಳ ಉತ್ಸವ ಸಮಿತಿ(ರಿ)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು- 560010
ದೂರವಾಣಿ: 080-3325335/ 3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂರವಾಣಿ : 08351-58038/58007

ಶರಣ ಮೇಳ
ಯಾರಿಂದ, ಯಾರಿಗಾಗಿ, ಯಾರದ್ದು?

1. ಕಾಗೆಯೊಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ ! -ಬ.ವ.ದೀಪ್ತಿ ೪೩೫

2. ಕರ್ಮವೆಂಬ ಅಂಕದೊಡನೆ ತೊಡರಿದೆ ; ಬಿನ್ನಪವ ಅವಧಾರು! ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ, ಕಿಡಹುವೆನಂಕವ ನಡುವೆ ಓಸರಿಸಿದೊಡೆ ನಿಮ್ಮಾಳಲ್ಲ!
ಶಿವ ಶರಣೆಂಬ ದಂಡೆಯ ಹೂಡಿ
ಗಣ ಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ ! -ಬ.ವ.ದೀಪ್ತಿ ೬೯೭

3. ಶ್ರೀ ವಿಭೂತಿಯ ಪೂಸದವರ, ಶ್ರೀ ರುದ್ರಾಕ್ಷಿಯ ಧರಿಸದವರ
ನಿತ್ಯ ಲಿಂಗಾರ್ಚನೆಯ ಮಾಡದವರ, ಜಂಗಮವೇ ಲಿಂಗವೆಂದರಿಯದವರ
ಸದ್ಭಕ್ತರ ಸಂಗದಲ್ಲಿ ಇರದವರ, ಎನಗೊಮ್ಮೆ ತೋರದಿರಯ್ಯ ಲಿಂಗದೇವಾ
ಸೆರಗೊಡ್ಡಿ ಬೇಡುವೆ! -ಬ.ವ.ದೀಪ್ತಿ ೪೫೨

ಶರಣ ಬಂಧುಗಳೇ,

ಗಣ ಧರ್ಮವನ್ನು ಬೋಧೆ ಮಾಡಿದ ಧರ್ಮಪಿತ ಬಸವಣ್ಣನವರು ಧರ್ಮದ ಗುರಿ ಕೇವಲ ಸಂಸ್ಕಾರವೊಂದೇ ಅಲ್ಲ ಸಮಾಜ ನಿರ್ಮಾಣ, ಸಮಾಜ ಸಂಘಟನೆ ಕೂಡ ಎಂದು ಮನಗಂಡು ಭಕ್ತಿಪಕ್ಷ ಅದರಲ್ಲಿ ನಡೆಯುವ ಗಣಮೇಳಾಪಕ್ಕೆ ಬಹುಮುಖ್ಯ ಸ್ಥಾನ ಕೊಟ್ಟರು. ಅಷ್ಟಾವರಣ ಧಾರಣೆಯಷ್ಟೇ ಶರಣರ ಸಂಗದಲ್ಲಿ ಒಡನಾಡುವುದು ಅತ್ಯಂತ ಅನಿವಾರ್ಯ ಅಗತ್ಯ ಎಂದು ಘೋಷಿಸಿದರು.

ಧರ್ಮಕರ್ತ ಬಸವತಂದೆಯವರ ಅಂತರಂಗದ ಆಶಯ ಅವರ ಆತ್ಮಕಥೆ, ದಿನಚರಿಯಂತೆ ಬರೆಯಲ್ಪಟ್ಟ ವಚನಗಳ ಮೂಲಕ ಅಭಿವ್ಯಕ್ತವಾಗಿರುವ ಆದೇಶವನ್ನು ಗ್ರಹಿಸಿಕೊಳ್ಳಲು ಆಗದೆ ೮೦೦ ವರ್ಷ ಅಂಧಕಾರದಲ್ಲಿ ಇದ್ದುದಾಗಿದೆ. ಆ ಕತ್ತಲೆಯ ಕೂಪದಿಂದ ಹೊರಬಂದು ಈಗ ತಾನೆ ಕಣ್ಣು ತೆರೆಯುತ್ತಿದ್ದೇವೆ. ಆದ್ದರಿಂದ ಲಿಂಗದೇವನಿಗೆ ಶರಣಾಗಿ ಬಸವ ಗುರುವಿನ ಕಾರಣಿಕತ್ವದಲ್ಲಿ ನಂಬಿಕೆ ಇಟ್ಟ ಎಲ್ಲರೂ ಇದೀಗ ಭಕ್ತಿಪಕ್ಷವಾಗಿ ಒಟ್ಟಾಗಬೇಕಾಗಿದೆ; ಗಣ ಮೇಳಾಪವನ್ನು ನಡೆಸಬೇಕಾಗಿದೆ. ಇದೇ ಉದ್ದೇಶದಿಂದ ಹುಟ್ಟಿದ್ದು ಶರಣ ಮೇಳ.

ಶರಣ ಮೇಳ - ನಿಮ್ಮ ಮೇಳ

ಇದು ಶರಣರ ಮೇಳ, ಶರಣರಿಂದ ಶರಣರಿಗಾಗಿ ಶರಣರೇ ನಡೆಸುವ ಧಾರ್ಮಿಕ ಸಮಾವೇಶ. ಆದ್ದರಿಂದ ಇದರಲ್ಲಿ ನಿಮ್ಮೆಲ್ಲರ ಪಾಲುದಾರಿಕೆ, ಭಾಗೀದಾರತ್ವವಿದೆ. ಶರಣ ಮೇಳ ಜಾತ್ರೆಯಲ್ಲ, ಸಂತೆಯಲ್ಲ, ಜನರು ದುಡು ದುಡು ಬಂದು ದಡದಡ ಓಡುವ ಜಾತ್ರೆಯಲ್ಲ, ಬಸವ ಮಾರ್ಗಕ್ಕೆ ವ್ಯಕ್ತಿಯನ್ನು ಅಣಿಗೊಳಿಸುವ ಕಾರ್ಯಾಗಾರ. ಭಾರತೀಯರು ಮುಖ್ಯವಾಗಿ ಹಿಂದುಗಳು ಉತ್ಸವ ಪ್ರಿಯರು, ತತ್ತ್ವಪ್ರಿಯರಲ್ಲ. ಗುಡಿ-ಗುಂಡಾರ, ತೀರ್ಥಯಾತ್ರೆ, ಪ್ರವಾಸ ಕೈಗೊಳ್ಳುವರಾದರೂ ಹೋದಾಗ ಹೇಗಿರುವರೋ ಬರುವಾಗಲೂ ಹಾಗೆಯೇ ಇರುವರು. ಶರಣಮೇಳ ಅಂಥ ಒಂದು ಯಾಂತ್ರಿಕ ಸಮಾವೇಶವಾಗಬಾರದು. 'ಬೆಳೆಯುವ ಭೂಮಿಯಲ್ಲಿರುವ ಪ್ರಳಯಾಂತಕ ಕಸವನ್ನು ತೆಗೆದು

ಸಸಿಯು ಸುಳಿದೆಗೆದು ಬೆಳೆವಂತೆ ಮಾಡು' ಎಂದು ಧರ್ಮಕರ್ತರು ಲಿಂಗದೇವರಲ್ಲಿ ಬೇಡುವಂತೆ, ಶರಣ ಮೇಳದ ಐದು ದಿನದ ಕಮ್ಮಟದಲ್ಲಿ ಭಾಗಿಗಳಾದವರು ಹೊಸ ಚೈತನ್ಯ, ಹೊಸ ವ್ಯಕ್ತಿತ್ವ ಪಡೆದು ಹೋಗುವಂತಾಗಬೇಕು.

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು

ಬಸವ ಕ್ರಾಂತಿ ದಿನ-ಅದು ಬಸವ ಧರ್ಮ ಸಂಸ್ಥಾಪನಾ ದಿನವೂ ಅಹುದು. ಅಗ್ರಹಾರದ ಪುರೋಹಿತಶಾಹಿ, ದೇವಾಲಯದ ದೇಗುಲಶಾಹಿ ಎರಡನ್ನೂ, ಅಂದು ಧರ್ಮಕರ್ತ ಬಸವಣ್ಣನವರು ಜನಸಾಮಾನ್ಯರನ್ನು, ಮುಗ್ಧ ಭಕ್ತರನ್ನು ದೇಗುಲದ ಗರ್ಭಗುಡಿಯೊಳಗೆ ಕರೆದೊಯ್ದು ಪ್ರತಿಭಟಿಸಿದ ದಿನ, ಕೇವಲ ಪ್ರತಿಭಟನೆಯಷ್ಟೇ ಆಗಿ ನೆಗೆಟಿವ್ ರಿಸಲ್ಟ್ ಉಳಿಯಲಿಲ್ಲ. ಅಂದೇ ಅವರಿಗೆ ಇಷ್ಟಲಿಂಗದ ಪರಿಕಲ್ಪನೆ ಉಂಟಾಗಿ, ದಾರ್ಶನಿಕ ದಿಗ್ಗಜ ಧರ್ಮಪಿತ ಬಸವಣ್ಣನವರು ಇಷ್ಟಲಿಂಗವನ್ನು ಗಣಲಾಂಛನವನ್ನಾಗಿ ಮಾಡಿ ಲೋಕಕ್ಕೆ ಹೊಸಧರ್ಮವನ್ನು ನೀಡಿದರು.

ಶರಣ ಬಂಧುಗಳೇ, ಆ ದಿನ ನಮ್ಮ ನಿಮ್ಮೆಲ್ಲರ ಜೀವನದ ಮಾತ್ರವಲ್ಲ; ಜಗತ್ತಿನ ಭಾಗ್ಯದ ಬಾಗಿಲು ತೆರೆದ ದಿನ. ಅಂದು ಸಂಗನ ಬಸವರಸ ಶ್ರೀಗುರು ಬಸವಲಿಂಗ ಆದ ದಿನ ಇದರ ಮಹತ್ವವನ್ನು ಅರಿಯುವ ದಾರ್ಶನಿಕ ದೃಷ್ಟಿಯನ್ನು ಬೆಳೆಸಿಕೊಳ್ಳಿ. ಹೀರಾದ ಗುಹೆಯಲ್ಲಿ ಮಹಮ್ಮದರಿಗೆ ಆದ ದಿವ್ಯ ಅನುಭವ ಅವರನ್ನು ಪ್ರವಾದಿಯನ್ನಾಗಿ ಮಾಡಿತು. ಜಾನ್ ದಿ ಬ್ಯಾಪ್ಟಿಸ್ಟ್‌ನಿಂದ ಜೋರ್ಡಾನ್ ನದಿಯ ದಂಡೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ನಜರೇತಿನ ಏಸುವನ್ನು ಜೀಸಸ್ ದಿ ಕ್ರೈಸ್ಟ್ ಎಂಬ ಪ್ರವಾದಿಯನ್ನಾಗಿ ಮಾಡಿತು. ಬೋಧಿವೃಕ್ಷದ ಅಡಿಯಲ್ಲಿ ಸಿದ್ಧಾರ್ಥ ಕಂಡ ಬೆಳಕು ಗೌತಮ ಬುದ್ಧನನ್ನಾಗಿ ಮಾಡಿತು. ಅದೇ ದೇವಕೃಪೆ, ದಿವ್ಯಾನುಭವ ಬಾಗೇವಾಡಿಯ ಬಸವರಸನನ್ನು ಕಾರಣಿಕ ವಿಭುವನ್ನಾಗಿ, ವಿಶ್ವವಿಭೂತಿಯನ್ನಾಗಿ ಮಾಡಿತು. ಆದ್ದರಿಂದ ಇದರ ಮಹತ್ವವನ್ನರಿತು ಆ ಸೃಷ್ಟಿಕರ್ತ ಲಿಂಗದೇವನನ್ನು ಧರ್ಮಕರ್ತ ಬಸವಣ್ಣನನ್ನು ನಾವು ನೀವು ಒಂದಾಗಿ ಕೃತಜ್ಞತೆಯಿಂದ ಕೊಂಡಾಡೋಣ ಬನ್ನಿರಿ.

ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು

ಬಸವ ಧರ್ಮದ ಕಿರಣಗಳಾಗಿ ಎಲ್ಲರೂ ಸಾಗಬೇಕು, ಪುನಃ ಆ ಬೆಳಕನ್ನು ಹಬ್ಬಿಸುತ್ತಾ ಹೋಗಬೇಕು. ಶರಣ ಮೇಳವು ಒಂದು ತತ್ತ್ವದ ಸೂತ್ರ ಹಿಡಿದು, ಎಲ್ಲರನ್ನೂ ಬಂಧಿಸುವ, ಬೆಸೆಯುವ ಸಾಧನವಾಗಬೇಕು. ಜಾತ್ರೆಯಲ್ಲಿ ಸೇರುವಂತೆ ಭಿನ್ನಭಿನ್ನ ವಿಚಾರದವರು ಒಂದು ಕಡೆ ಸೇರಿ, ಮತ್ತೆ ಚದುರಿದರೆ ಸಾಲದು. ನ್ಯೂಕ್ಲಿಯಸ್ಸಾಗಿ ಬಸವ ಗುರುವನ್ನು ಇರಿಸಿಕೊಂಡು, ಅವರ ಸುತ್ತಲೂ ಬೆಳೆಯುತ್ತಾ ಬಲಗೊಳ್ಳುತ್ತಾ ಹೋಗಬೇಕು. ಅದು ನಿಜವಾದ ಬೆಳವಣಿಗೆ, ಅದರಲ್ಲಿ ಸಂಘಟನೆ ಮತ್ತು ಸಂಘಟನೆಯ ಪ್ರತಿಫಲವಾಗಿ ಅದಮ್ಯ ಶಕ್ತಿ ಸಂಚಯವಾಗುತ್ತದೆ.

ಯಾರಿಗಾಗಿ ಬರಬೇಕು?

ಯಾವ ವ್ಯಕ್ತಿಗಾಗಿಯೂ ಅಲ್ಲ, ಒಂದು ತತ್ತ್ವಕ್ಕಾಗಿ ನೀವೆಲ್ಲರೂ ಬರಬೇಕು. ಅಪ್ಪ ಬಸವಣ್ಣನ ಕರುಳ ಕರೆಗೆ ಓಗೊಟ್ಟು ಬರಬೇಕು. ಶರಣರ ತ್ಯಾಗವನ್ನು ಸ್ಮರಿಸಿಕೊಂಡು ನಿಮ್ಮ ಹೃದಯ ಮಿಡಿದು ಬರಬೇಕು. ಇದು ಎಂದೋ ಆಗಬೇಕಿತ್ತು. ಈಗ ಆಗಿದೆ, ಆಗುತ್ತಿದೆ. ಆದಿ ಶರಣರು, ಧರ್ಮಕರ್ತರು ಕಲ್ಯಾಣದಿಂದ ನಿರ್ಗಮಿಸಿದ 770 ವರ್ಷಗಳ ನಂತರ, 13 ಬಾರಿಗೆ ಆನಂದ ನಾಮ ಸಂವತ್ಸರ ಸರಿದು ಹೋದ ಮೇಲೆ ಬರುವುದಾಗಿ ಏಕೆ ಸಂಕಲ್ಪಿಸಿದರೋ ಗೊತ್ತಿಲ್ಲ. ಆ ಕಾಲವೀಗ ಕೂಡಿ ಬಂದಿದೆ. ಆದ್ದರಿಂದ ಬಸವಾದಿ ಪ್ರಮಥರ ಕರುಳಿನ ಕರೆ ನಿಮ್ಮನ್ನೀಗ ತಟ್ಟಿ, ಎಬ್ಬಿಸಿ ಕರೆತರಬೇಕಾಗಿದೆ. ಒಂದು ಆನೆ ಬಿದ್ದರೆ

ಅದನ್ನು ಎತ್ತಲು ದೊಡ್ಡ ಕ್ರೇನ್ ಬೇಕು; ಅದೇ ಆನೆಯಲ್ಲಿ ಚೈತನ್ಯಶಕ್ತಿ ಇದ್ದರೆ ಎಷ್ಟು ಸುಲಭವಾಗಿ ಎದ್ದು ನಿಲ್ಲಬಲ್ಲದು, ಓಡಬಲ್ಲದು; ಹಾಗೆಯೇ ಬಸವ ತತ್ತ್ವಾನುಯಾಯಿಗಳ ಲಿಂಗಾಯತ ಸಮಾಜವು ಈಗ ರೋಗಗ್ರಸ್ತವಾಗಿ ಬಿದ್ದಿರುವ ಆನೆಯ ದೇಹದಂತಿದೆ. ಅದರೊಳಗೆ ಧಾರ್ಮಿಕ ಸತ್ವ, ತತ್ತ್ವನಿಷ್ಠೆ, ಧರ್ಮಗುರು ಶ್ರದ್ಧೆ ಮುಂತಾದವು ಮೈಗೂಡಿದರೆ ಒಂದು ಅಸೀಮ ಬಲದಿಂದ ಎದ್ದು ನಿಲ್ಲುವುದು. ಆದ್ದರಿಂದ ಧಾರ್ಮಿಕ ಶ್ರದ್ಧೆ-ತತ್ತ್ವನಿಷ್ಠೆ ನಿಮ್ಮಲ್ಲಿ ಪುಟದೇಳಬೇಕು.

ಮಲಮಕ್ಕಳು

ಇಂದು ಈ ದೇಶ ಬ್ರಹ್ಮದೇಶ; ಮೂಲತಃ ಪಶುಪತಿ ನಾಥ, ಶಿವನ ಸಂತತಿಯಾಗಿ ಈ ನೆಲದ ಮಕ್ಕಳು ಜನಿಸಿದರೂ ಕಾಲಾನಂತರ ಪರಕೀಯ ಸಂಸ್ಕೃತಿಯ ದಬ್ಬಾಳಿಕೆಗೆ ಒಳಗಾಗಿ ಅವರು ದುರ್ಬಲರಾದರು. ವೈದಿಕ ಧರ್ಮವು ಇನ್ನಿತರ ಎಲ್ಲ ಧರ್ಮ-ಸಂಸ್ಕೃತಿಗಳನ್ನು ತುಳಿದು ಆಳುತ್ತಿದೆ. ಪ್ರಸಾರ ಮಾಧ್ಯಮಗಳೆಲ್ಲ ಕೆಲವೇ ಕೆಲವರ ಹಿಡಿತದಲ್ಲಿವೆ. ಧ್ರುವ ಹಿರಿಯ ಹೆಂಡತಿಯ ಮಗ; ಅಪ್ಪನು ಕಿರಿಯ ಹೆಂಡತಿಯ ಕೈಗೊಂಬೆ. ಆಗ ಪ್ರೀತಿಯಿಂದ ಬಂದು ಅಪ್ಪನ ತೊಡೆಯ ಮೇಲೆ ಕುಳಿತ ಮಗನನ್ನು, ಮಲತಾಯಿ ಬಂದು ಕೆಳಗಿಳಿಸಿದಳು. ಅದೇ ರೀತಿ ಇಂದು ವೈದಿಕ ಸಂಸ್ಕೃತಿ ಎಂಬ ಮಲತಾಯಿ ವೈದಿಕೇತರ ಎಲ್ಲ ಸಂಸ್ಕೃತಿಗಳನ್ನು ಬದಿಗೆ ಒತ್ತುತ್ತಿದೆ. ಇದನ್ನರಿಯುವ ಬುದ್ಧಿಯಾಗಲೀ, ಪ್ರತಿಭಟಿಸುವ ತಾಕತ್ತಾಗಲಿ ಅಸಂಘಟಿತ ಸಮಾಜಗಳಿಗಿಲ್ಲ. ಭಾರತ ದೇಶವು ತನ್ನ ದೋಷವನ್ನು ಕಳೆದುಕೊಂಡು ಸರ್ವಾಂಗೀಣವಾಗಿ ಬೆಳೆಯಬೇಕೆಂದು ಶ್ರಮಿಸಿದ ಪ್ರಗತಿಪರ ಚಿಂತಕ, ಸಮಾಜ ಸುಧಾರಕ ಬಸವಣ್ಣನಂತಹವರ ಪ್ರಗತಿಪರ, ಪ್ರಖರ ವಿಚಾರಗಳು ಬೆಳಕಿಗೆ ಬರಬಾರದು, ಪ್ರಚಾರಗೊಳ್ಳಬಾರದು ಎಂದು ಬಯಸುವ ಪುರೋಹಿತಶಾಹಿ ಬಹು ಶಕ್ತಿಶಾಲಿಯಾಗಿದೆ. ಶ್ರೀ ಸಾಮಾನ್ಯನ ಹಿತ ಸಂರಕ್ಷಿಸುವ, ಅವನ ಹಕ್ಕುಗಳಿಗಾಗಿ ಹೋರಾಡುವ ಬಸವ ಧರ್ಮಕ್ಕೆ ತನ್ನ ಹುಟ್ಟಿನಿಂದ ಈವರೆಗೂ ರಾಜಾಶ್ರಯ ಸಿಗಲಿಲ್ಲ. ಮಾಡಬಾರದ ಕುಕರ್ಮಗಳನ್ನು ಮಾಡಿದರೂ ರಾಜನನ್ನು ಭೂಲೋಕದ ದೇವತೆ ಎಂದು ಹೊಗಳುವ ಜನರಿಗೆ, ಅಂಥ ವಾದಸರಣಿಗೆ ಸಿಕ್ಕ ಪ್ರೋತ್ಸಾಹ "ಜಂಗಮವೇ ಲಿಂಗ, ಅಂದರೆ ಮಾನವನ ಆತ್ಮವೇ ಮಹಾದೇವನ ಚೈತನ್ಯ" ಎಂದು ಶ್ರೀಸಾಮಾನ್ಯನ ಉದ್ಧಾರಕ್ಕೆ ಟೊಂಕಕಟ್ಟಿ ನಿಂತ ಬಸವಣ್ಣನ ಧರ್ಮಕ್ಕೆ ಸಿಗಲಿಲ್ಲ. ಆದರೆ ಎಂತೆಂತಹ ಸಂಕಷ್ಟಗಳ ಮಧ್ಯದಲ್ಲಿಯೂ ಬಸವ-ಶಿಶುವಾದ ಲಿಂಗಾಯತ ಧರ್ಮವು ಬದುಕಿ ಬಂದಿದೆ. ಈಗ ದಷ್ಟಪುಷ್ಟವಾಗಿ ಬೆಳೆಯಬೇಕಾಗಿದೆ. ಅದು ಹುಟ್ಟಿದಾಗಿನಿಂದಲೂ ಪೋಷಿಸಿ, ಅದರ ಧಾರ್ಮಿಕ ಸಂವಿಧಾನಕ್ಕೆ ಸಂಕಷ್ಟ ಬಂದಾಗ ರಕ್ಷಿಸಿದವನು ಶ್ರೀಸಾಮಾನ್ಯನೇ ! ಆದ್ದರಿಂದ ಇಂದು, ಮುಂದು, ಎಂದೆಂದೂ ಇದರ ಪೋಷಣೆ, ರಕ್ಷಣೆ ನಿಮ್ಮ ಮೇಲಿದೆ. ಜನ ಬದುಕಲೆಂದು ಜಗ ಬದುಕಲೆಂದು ಕೊಡಲ್ಪಟ್ಟ ಈ ಧರ್ಮ ಮತ್ತು ಸಾಹಿತ್ಯಗಳು ಲೋಕ ಸಂಜೀವಿನಿಯಾಗಿವೆ. ಆದ್ದರಿಂದ ನೀವು ಶರಣ ಮೇಳದ ಮಹತ್ವ ಕುರಿತು ಪ್ರಚಾರವನ್ನು ನೀವು ನೀವೇ ಮಾಡಬೇಕು. ತನ್ನ ಅಂತಃಶಕ್ತಿಯಿಂದಲೇ ಶರಣ ಮೇಳ ಬಲಗೊಂಡು ಬೆಳೆಯಬೇಕು. ಬಹುಪಾಲು ವಾರ್ತಾ ಪತ್ರಿಕೆಗಳು ಸುಳ್ಳು ಸುದ್ದಿಗಳನ್ನು ಹಬ್ಬಿಸಲು, ವಾದ ಸೃಷ್ಟಿಸಲು, ನಟ-ನಟಿಯರ ಬಗ್ಗೆ ಹರಟೆ ಮಲ್ಲಿಗಳಾಗಿ ಕೆಲಸ ಮಾಡಲು, ರಾಜಕೀಯ ಪಕ್ಷಗಳ ಗ್ಗೆ ದ್ವೇಷ ಇಲ್ಲವೇ ಮಮಕಾರಗಳಿಂದ ವರ್ತಿಸಲು ತೋರುವಷ್ಟು ಆಸಕ್ತಿಯನ್ನು ಶರಣ ಮೇಳ ಪ್ರಚಾರದಲ್ಲಿ ತೋರಲಿಕ್ಕಿಲ್ಲ. ಜನರು ಈಗ ಪ್ರಬುದ್ಧರಾಗುತ್ತಿದ್ದಾರೆ. ಆಧ್ಯಾತ್ಮಿಕವಾಗಿ ಹಸಿದಿದ್ದಾರೆ. ಸಂಘಟಿತರಾಗಲು ಆತುರರಾಗಿದ್ದಾರೆ. ಆದ್ದರಿಂದ ಅಂತಹ ಆಸಕ್ತರಿಗೆ ಶರಣ ಮೇಳದ ಮಾಹಿತಿ ನೀಡುವ ಪವಿತ್ರ ಕರ್ತವ್ಯ ಮಾಡಿರಿ. ನಿಮ್ಮ ತನುಮನಗಳೆರಡನ್ನು ಈ ಪ್ರಚಾರ ಕಾರ್ಯದಲ್ಲಿ ತೊಡಗಿಸಿರಿ.

ಧನ ಸಂಗ್ರಹಣೆ

ಬಸವ ಪ್ರಣೀತ ಲಿಂಗಾಯತ ಧರ್ಮದ ಒಂದು ಪವಿತ್ರ ಕಾರ್ಯ ಅನ್ನ ದಾಸೋಹ. ಜ್ಞಾನ

ದಾಸೋಹವು ಐದು ದಿವಸಗಳ ಕಾಲ ನಿರಂತರವಾಗಿ ಇದ್ದೇ ಇರುತ್ತದೆ. ಇದರ ಜೊತೆಗೆ ಅನ್ನ ದಾಸೋಹವು ನಡೆಯಲೇಬೇಕು. ಧರ್ಮಪಿತರು ಅನ್ನದಾಸೋಹಕ್ಕೆ ಪ್ರಸಿದ್ಧರಾದವರು. ಆದ್ದರಿಂದ ಈ ಪವಿತ್ರ ಕಾರ್ಯ ನಡೆಯಬೇಕಾದರೆ

1. ನೀವು ಸ್ವತಃ ಧನ-ಧಾನ್ಯ ಕೊಡಬೇಕು.
2. ನಿಮ್ಮ ಮಿತ್ರರು, ಪರಿಚಿತರು, ಬಂಧು-ಬಳಗದವರಿಂದ ಸಂಗ್ರಹಿಸಿಕೊಡಬೇಕು.
3. ನೀವು ಸ್ವತಃ ನೀಲಾಂಬಿಕಾ ದಾಸೋಹ ಮಂಟಪದಲ್ಲಿ ನಿಂತು ಬಂದ ಶರಣರಿಗೆ ಪ್ರಸಾದ ಎಡೆಮಾಡಿ ಸಂತೋಷಿಸಬೇಕು. ಈಗ ನಮಗೆ ಧರ್ಮಪಿತ ಬಸವಣ್ಣನವರಿಗೆ ಉಣ್ಣಿಸಬೇಕು, ಉಪಚರಿಸಬೇಕು ಎಂಬ ಆಸೆ ಇರುವುದು ಎಂದುಕೊಳ್ಳೋಣ. ಹೇಗೆ ಮಾಡಲು ಸಾಧ್ಯ? ಬಸವ-ಕಿರಣಗಳಾಗಲು ಇಲ್ಲಿ ಬಂದ ಶರಣರಿಗೆ ಉಣ್ಣಿಸಿ, ಉಪಚರಿಸಿದರೆ ಆಗ ಅದು ಬಸವಸೇವೆ ಆಗುವುದು. ಅದನ್ನೇ ಧರ್ಮಪಿತರು 'ಲಿಂಗದ ಬಾಯಿ ಜಂಗಮ' ಎಂದರು; ಜಂಗಮ ನೆನೆದರೆ (ತಣಿದರೆ)ಸ್ಥಾವರ ತಣಿಯಿತ್ತು ಎಂದು ಹೇಳಿರುವರು.

ಯಾರೂ ಯಾರಿಂದ ಸೇವೆ ನಿರೀಕ್ಷಿಸದೆ ಎಲ್ಲರೂ ಸೇವೆ ಮಾಡಲು ಸನ್ನದ್ಧರಾಗಬೇಕು. ಸ್ವಾಗತ ಕೋಣೆಯಲ್ಲಿ ಕುಳಿತ ಕೆಲವು ಶರಣ ಕಾರ್ಯಕರ್ತರಿಗೆ ಎಂಥ ಒತ್ತಡ ಇರುತ್ತದೆ ಎಂಬುದು ಊಹಿಸಲು ಅಸದಳ. ಆಗ ಕೆಲವರು ಬಂದು ಅವರ ಮೇಲೆ ಜೋರು ಮಾಡುತ್ತಾರೆ. ಜನರನ್ನೂ ಕರೆತಂದು ನಮಗೆ ಅದಿಲ್ಲ ಇದಿಲ್ಲ ಎಂದು ಗಲಾಟೆ ಮಾಡುತ್ತಾರೆ. ಇದು ಶರಣ ಸಂಸ್ಕೃತಿಗೆ ಸೂಕ್ತವಲ್ಲ. ಏಕೆಂದರೆ ಅದು ಇವರೂ ಮಾಡಬೇಕಾದ ಕರ್ತವ್ಯವಲ್ಲವೇ? ಊಟ ನಿದ್ರೆಯಿಲ್ಲದೆ ಕೆಲವರು 24 ಗಂಟೆ ಕೌಂಟರಿನಲ್ಲಿ ಕೂತಿರುತ್ತಾರೆ. ಮಾನಸಿಕ-ಬೌದ್ಧಿಕ ತರಬೇತಿ ಇಲ್ಲದ ಆಗಂತುಕರು ಗಲಾಟೆ ಮಾಡುತ್ತಿದ್ದರೂ, ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು, ಆಗಂತುಕರಿಗೆ ಸಮಾಧಾನ ಹೇಳಿ ಇದು ಪರಿಶ್ರಮದ ಕೆಲಸ, ಸ್ವಲ್ಪ ಸಮಾಧಾನವಿರಲಿ ಎಂದು ಹೇಳಬೇಕು. ಒಂದು ವೇಳೆ ಕಾರ್ಯಕರ್ತರು, ''ಇದು ನನ್ನದಷ್ಟೇ ಅಲ್ಲ; ನಿನ್ನದೂ ಕೆಲಸ, ನೀನೂ ಬಂದು ಇಲ್ಲಿ ಕುಳಿತುಕೋ ಅಯ್ಯಾ'' ಎಂದೆನ್ನುವುದರಲ್ಲಿ ತಪ್ಪಿಲ್ಲವಲ್ಲವೆ? ಅದಕ್ಕೆ ಧರ್ಮಗುರುವು ಹೀಗೆ ಆದೇಶಿಸಿದ್ದಾರೆ.

ಭಕ್ತ ಭಕ್ತನ ಮನೆಗೆ ಬಂದಡೆ ಭೃತ್ಯಾಚಾರವ ಮಾಡಬೇಕು
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ ಹಿಂದೆ ಮಾಡಿದ ಭಕ್ತಿಗೆ ಹಾನಿ
ಲಕ್ಷ್ಯಗಾವುದ ದಾರಿಯ ಹೋಗಿ ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಲಿಂಗದೇವನು. -ಬ.ವ.ದೀಪ್ತಿ ೨೪೮

ಲಕ್ಷ್ಯ ಗಾವುದ ದೂರವಾದರೂ ಸರಿಯೆ ಶರಣ ಬಂಧುಗಳು ಹೋಗಿ ಪರಸ್ಪರ ಭೇಟಿಯಾಗಬೇಕು; ಕುಶಲವನ್ನು ವಿಚಾರಿಸಬೇಕು, ಪರಸ್ಪರ ಸೇವೆಯನ್ನು ಮಾಡಬೇಕು. ಇಂತಹ ಸಹೋದರತ್ವ ಸಾಧನೆ ಬಹಳ ಮುಖ್ಯ. ಅದೀಗ ಶರಣ ಮೇಳದ ಮೂಲಕ ಸುಲಭ ಸಾಧ್ಯವಾಗಿದೆ. ಶರಣ ಮೇಳದ ಕಲ್ಪನೆ ಧರ್ಮಪಿತರ ವಚನದಲ್ಲಿ ಹೀಗೆ ಮೂಡಿ ನಿಂತಿದೆ.

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ ತನು ಮನ ಧನವಲಸದಂತೆ ಮಾಡಯ್ಯಾ
ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ ಮನ ದಾಸೋಹಕ್ಕೆ ಲೀಯವಹಂತೆ ಮಾಡಯ್ಯಾ
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ
ಪರಿಣಾಮಿಸುವಂತೆ ಮಾಡು ಲಿಂಗದೇವಾ. -ಬ.ವ.ದೀಪ್ತಿ. ೪೫೬

ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟಗಳನ್ನು ಎಡೆಮಾಡಲು ಬೇರೆ

ಬೇರೆ ರಾಷ್ಟ್ರೀಯ ಬಸವ ದಳಗಳವರು ಬೇರೆ ಬೇರೆ ತಂಡಗಳನ್ನು ರಚಿಸಬೇಕು. ಅಂದರೆ ಮಾತ್ರ ಎಲ್ಲ ರಾಷ್ಟ್ರೀಯ ಬಸವ ದಳದವರಿಗೆ ಒಂದು ಹೊತ್ತಿನ ಸೇವೆ, ಉಳಿದಂತೆ ಕಾರ್ಯಕ್ರಮ ಪ್ರಾಪ್ತಿಯಾಗುತ್ತದೆ. ದೇಣಿಗೆ ನೀಡಿಕೆ, ದೇಣಿಗೆ ಸಂಗ್ರಹ ಸ್ವಯಂ ಪ್ರೇರಣೆಯ ಕರ್ತವ್ಯವಾಗಬೇಕು. ದಿ. 14-10-1995ರ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಚಿತ್ರದುರ್ಗ ರಾಷ್ಟ್ರೀಯ ಬಸವ ದಳದ ಶರಣ ಲಿಂಗಣ್ಣನವರು, ''ಇಂಥ ಊರಿನಿಂದ ಇಷ್ಟು ತರಬೇಕು ಎಂದು ಖರ್ಚಿನ ಅಂದಾಜು ಮಾಡಿ, ನಮಗೆಲ್ಲ ಆದೇಶಿಸಬೇಕು'' ಎಂದು ಹೇಳಿದರು. ಆಗ ನಾನು ಹೇಳಿದೆ ''ನಾನು ಆ ರೀತಿ ಆದೇಶಿಸುವುದಿಲ್ಲ. ಶರಣ ಮೇಳ ಎಲ್ಲರ ಕಾರ್ಯಕ್ರಮ. ಸ್ವಯಂ ಪ್ರೇರಣೆಯಿಂದ ಯಾರು ಎಷ್ಟು ಬೇಕಾದರೂ ಮಾಡಬಹುದು, ಮಾಡದೆ ಇರಬಹುದು. ಲೆಕ್ಕ ಕೊಡಬೇಕಾದುದು ನನಗಲ್ಲ, ಧರ್ಮಪಿತ ಬಸವಣ್ಣನವರಿಗೆ. ಮನೆಯ ಮಕ್ಕಳಾಗಿ ಎಲ್ಲರೂ ಅವರ ಅಂತಃಸಾಕ್ಷಿಯಾಗಿ ಮಾಡಬೇಕು. ಮಾಡದೆ ಇದ್ದರೆ ಅವರ ಕರ್ತವ್ಯದಲ್ಲಿ ಚ್ಯುತಿಯಾಗುವುದು ಎಂಬ ಪ್ರಜ್ಞೆ ಎಲ್ಲರಲ್ಲಿ ಮೊಳೆಯಬೇಕು. ಕಾರ್ಯ ಮಾಡಿಸಿಕೊಳ್ಳುವವರು ಧರ್ಮಪಿತರೇ, ನಾವು ನಿಮಿತ್ತ ಮಾತ್ರರು; ನೀವೂ ನಿಮಿತ್ತ ಮಾತ್ರರು. ಇಂಥ ಸೌಭಾಗ್ಯ , ಸದವಕಾಶ ಸಿಕ್ಕುದಕ್ಕೆ ನಮಗೆ ಸಂತೋಷವಾಗಬೇಕು.'' ಎಂದು ಹೇಳಿದೆ.

ವ್ಯಕ್ತಿ ಪ್ರೇಮ ಬೇಡ, ತತ್ತ್ವ ಪ್ರೇಮ ಬೆಳೆಯಲಿ

ಪೂಜ್ಯ ಅಪ್ಪಾಜಿ ಮತ್ತು ನಾವು ಎಂದಿನಿಂದಲೂ ಹೇಳುತ್ತಿದ್ದೇವೆ. ನಾವು ಕುದುರೆಯಾಗಿ ಬಸವ ಗುರುವನ್ನು ಹೊತ್ತು ಮೆರೆಸಬೇಕೇ ವಿನಾ ಬಸವ ತತ್ತ್ವವನ್ನು ಕುದುರೆ ಮಾಡಿಕೊಂಡು ತಾವು ಹತ್ತಿ ಮೆರೆಯುವವರಾಗಬಾರದು ಎಂದು. ಆರ್.ಸಿ.ಸಿ. ಮೌಲ್ಡ್ ಹಾಕುವಾಗ ಸೆಂಟ್ರಿಂಗ್ ಹಾಕುತ್ತೇವೆ. ನಂತರ ಸೆಂಟ್ರಿಂಗ್ ತೆಗೆದು ಆರ್.ಸಿ.ಸಿ. ಮೌಲ್ಡ್ ಉಳಿಸಿಕೊಳ್ಳುತ್ತೇವೆ. ಕೆಲವು ಆಕೃತಿ ತೆಗೆಯುವಾಗ ಮೌಲ್ಡ್ ಮಾಡಲಾಗುವುದು. ಮೌಲ್ಡ್ ಸಹಾಯ ಸಾಧನ ಮಾತ್ರ. ಹಾಗೆಯೇ ಪೂಜ್ಯ ಅಪ್ಪಾಜಿಯವರ, ನಮ್ಮ, ಪೂಜ್ಯ ಗಂಗಾ- ಮಾತಾಜಿ ಮುಂತಾದವರ ಪ್ರವಚನಗಳು ಸೆಂಟ್ರಿಂಗ್ ತರಹ ಕೆಲಸ ಮಾಡಿ, ಅಲ್ಲಿ ಬಸವ ತತ್ತ್ವದ ಆರ್.ಸಿ.ಸಿ. ಗಟ್ಟಿಗೊಳಿಸುತ್ತವೆ. ಅಲ್ಲಿ ಸೃಷ್ಟಿಕರ್ತ ಲಿಂಗದೇವನನ್ನು, ಗುರು ಬಸವಣ್ಣನವರನ್ನು, ಜಂಗಮ ಜ್ಯೋತಿಗಳಾದ ಶರಣರನ್ನು ಪ್ರತಿಷ್ಠಾಪಿಸುತ್ತೇವೆ. ಇದೇ ಶರಣ ಮೇಳವು ನಮ್ಮ ಪ್ರಯತ್ನ, ಪರಿಶ್ರಮ ಪ್ರಭಾವದಿಂದ ಆರಂಭವಾಗಿ ನಡೆದರೂ,ಆ ಭಾರವನ್ನು ತಮ್ಮ ಹೆಗಲಿಗೆ ವರ್ಗಾಯಿಸಿಕೊಂಡು ಶರಣ ಬಂಧುಗಳೇ, ಶರಣ ಮೇಳವನ್ನು ನಡೆಸಿಕೊಂಡು ಹೋಗುವಂತಾಗಬೇಕು. ಈ ಉದ್ದೇಶದಿಂದಲೇ ೧. ಬಸವ ಧರ್ಮ ಪೀಠ, ೨. ಶರಣ ಮೇಳ ಉತ್ಸವ ಸಮಿತಿ ಟ್ರಸ್ಟ್ ೩. ಶರಣ ಮೇಳ ಉತ್ಸವ ಸಂಚಾಲಕ ಸಮಿತಿ ಮಾಡಲಾಗಿದೆ. ಈ ಸಮಿತಿಗೆ ಸ್ವಯಂ ಪ್ರೇರಣೆಯಿಂದ ಹೆಸರು ಬರೆಯಿಸಿ ಸದಸ್ಯರಾಗಲು ಆಸಕ್ತರಿಗೆ ಅವಕಾಶ ಉಂಟು. ಅವರಿಗೆ ರಸೀತಿ ಪುಸ್ತಕ ಕಳಿಸುತ್ತೇವೆ. ದೇಣಿಗೆ ಸಂಗ್ರಹಿಸಿಕೊಡಬೇಕು.

ಶರಣ ಮೇಳಕ್ಕೆ ಯಾವ ಸ್ವಾಮಿಗಳು, ಯಾವ ಗಣ್ಯರು, ಯಾವ ರಾಜಕೀಯ ಪಟುಗಳು, ಮಂತ್ರಿವರ್ಯರು ಬರುತ್ತಾರೆ ಎಂಬುದು ಮುಖ್ಯವಲ್ಲ. ನೀವು (ಶರಣರು)ಬರುತ್ತೀರೆಂಬುದು ಬಹಳ ಮುಖ್ಯ. ಏಕೆಂದರೆ, ಹಿಂದು ಸಮಾಜದ ಒಂದು ದೌರ್ಬಲ್ಯವೆಂದರೆ, ಒಂದೊಂದು ವ್ಯಕ್ತಿಯ ಕಾಲಕ್ಕೆ ಏನೋ ಅದ್ಭುತವಾದುದು ಆಗಿ, ನಂತರ ಎಲ್ಲ ಬರಡಾಗುವುದು ಇಲ್ಲಿ ಬಲು ಸಹಜ. ''ನ ಭೂತೋ ನ ಭವಿಷ್ಯತಿ'' ಎಂಬುದು ಇಲ್ಲಿ ಪ್ರಚಲಿತವಾದ ಒಂದು ಮಾತು. ಹಿಂದಾಗಿಲ್ಲ, ಮುಂದಾಗುವುದಿಲ್ಲ ಎಂದು ಇದರ ಅರ್ಥ. ಈ ಉಕ್ತಿ ನನಗೆ ಬಹಳ ಸಿಟ್ಟು ಬರಿಸುತ್ತದೆ. ಯಾವುದಾದರೊಂದು ಕಾರ್ಯಕ್ರಮ ಅಭೂತಪೂರ್ವವಾಗಿ ನಡೆದಾಗ ಇಂಥದು ಹಿಂದೆ ಆಗಿಲ್ಲ ಎಂಬುದು ಸೂಕ್ತ. ಆದರೆ ಮುಂದೆ ಇದಕ್ಕೂ ಮಿಗಿಲಾಗಿ ಆಗಬಾರದೇಕೆ? ಯಾವುದೂ ಸಣ್ಣದ್ದರಿಂದ ದೊಡ್ಡದು ಆಗುತ್ತಾ ಹೋಗಬೇಕು. ಅದು ನಿಸ್ಸೀಮವಾಗಿ ದಶದಿಕ್ಕುಗಳನ್ನೂ ವ್ಯಾಪಿಸುತ್ತಾ ಬೆಳೆಯಬೇಕು.

ಅನೇಕ ಮಠ-ಪೀಠಾಧೀಶರು ಶರಣ ಮೇಳದ ಯಶಸ್ಸಿನ ಬಗ್ಗೆ ಕರುಬುವುದಲ್ಲದೆ ಮೊದಲನೆಯ ಶರಣ ಮೇಳದಿಂದಲೂ ಪ್ರತಿ ವರ್ಷವೂ ಅಪಪ್ರಚಾರ ಮಾಡುತ್ತಾರೆ. ಈ ಸಲ ನಡೆಯುವುದೇ ಇಲ್ಲ ಎಂದು ಸುಳ್ಳು ಸುದ್ದಿ ಹರಡುತ್ತಾರೆ; ಅಲ್ಲೇನೋ ರಕ್ತಪಾತವಾಗುತ್ತದೆ ಎಂದು ಭಯ ಹುಟ್ಟಿಸಲು ಯತ್ನಿಸುತ್ತಾರೆ. ಜನರು ಮುಖ್ಯವಾಗಿ ತಮ್ಮ ಭಕ್ತವೃಂದ ಶರಣ ಮೇಳದತ್ತ ಆಕರ್ಷಿತರಾಬಾರದು ಎಂದು ಅವರವರ ಮಠಗಳಲ್ಲಿ ಅದೇ ಸಮಯದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ. ಹಲವಾರು ಬಗೆಯ ಕುತಂತ್ರಗಳನ್ನು ಕೆಲವು ಮಠ-ಪೀಠಾಧೀಶರು ಮಾಡುತ್ತಲೇ ಇದ್ದರೂ, ಅವರೊಡನೆ ಹಿಮ್ಮೇಳ ಹಾಡುತ್ತ ಕೆಲವು ವೀರಶೈವವಾದಿ ಸಂಘ-ಸಂಸ್ಥೆಗಳು ಅಪಪ್ರಚಾರ ಮಾಡುತ್ತಲಿದ್ದರೂ, ನಿಜ ಬಸವ ಭಕ್ತರ ನಿಷ್ಠಾವಂತ ಪ್ರಾಮಾಣಿಕ ಪ್ರಯತ್ನದಿಂದ ಶರಣ ಮೇಳ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಲಿದೆ. ಜನಪ್ರಿಯತೆ ಪಡೆಯುತ್ತಲಿದೆ.

''ಶರಣ ಮೇಳ'' ಒಂದು ರೀತಿಯ ರಾಶಿಯ ಕೆಲಸವಿದ್ದಂತೆ. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿರುವ ಸಭಾ ಮಂಟಪವೇ ಕಣ. ಧರ್ಮಗುರು ಬಸವಣ್ಣನೇ ಮೇಟಿಗೂಟ, ಇಲ್ಲಿ ಉಪನ್ಯಾಸ-ಪ್ರವಚನ ಮಾಡುವವರೆಲ್ಲ ತುಳಿಸುವ ಎತ್ತುಗಳು; ವಚನ ಸಾಹಿತ್ಯ ಸಂವಿಧಾನವೇ ಇವರೆಲ್ಲರನ್ನು ಬಿಗಿದ ಕಣ್ಣಿಯ ಹಗ್ಗ; ಜ್ಞಾನದ ಗಾಳಿಯಲ್ಲಿ ತೂರುವುದು, ಕೇರುವುದು ಉಂಟು. ಜೊಳ್ಳೆಲ್ಲ ಹಾರಿ ಹೋಗಿ, ಗಟ್ಟಿಕಾಳು ಉಳಿಯುವುದು. ತಾತ್ತ್ವಿಕವಾಗಿ ಸಂಸ್ಕರಣಗೊಂಡು ಉಳಿಯುವ ಕಾಳು ಇವು ಸಾಮಾನ್ಯವಲ್ಲ; **ಬಿತ್ತುವ ಕಾಳಿನಂತೆ ವಿಶೇಷ.** ಈ ಶರಣ-ಬಿತ್ತು ಕಾಳುಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಹೋಗಿ ಪುನಃ ಬೆಳೆ ತೆಗೆಯುವುವು. ಹೊಸ ಹೊಸ ತಲೆಗಳು ಮತ್ತೆ ಮುಂದಿನ ಶರಣ ಮೇಳದಲ್ಲಿ ಶುದ್ಧೀಕರಣಗೊಳ್ಳುವುವು.

ಮೊದಲ ಶರಣ ಮೇಳಕ್ಕೆ ಒಮ್ಮೆಲೇ ಬೃಹತ್ತಾಗಿ ಜನರು ಬಂದರು. ಅದರಲ್ಲಿ ವೀರಶೈವವಾದಿಗಳು, ಬಿ.ಪಿ.(ಬಸವ ಪೂರ್ವದಲ್ಲಿ ಈ ಧರ್ಮವಿತ್ತು ಎನ್ನುವವರಿಗೆ ಪೂಜ್ಯ ಅಪ್ಪಾಜಿ ಕರೆಯುತ್ತಿದ್ದ ಹೆಸರು)ಯವರು ಕೂಡಿದ್ದರು. ಆ ಶರಣ ಮೇಳದಲ್ಲಿ ಷಟ್ ಸೂತ್ರಗಳನ್ನು ನಾವು ಘೋಷಿಸುತ್ತಲೇ ಅಂಥವರು ಮುನಿದು ಬರುವುದು ಬಿಟ್ಟರು. ನಾವೇನೂ ಚಿಂತಿಸಲಿಲ್ಲ. ಅಂಥವರಿಗಾಗಿ ತತ್ತ್ವಗಳಲ್ಲಿ ಯಾವ ರಾಜಿಯನ್ನೂ ಮಾಡಿಕೊಳ್ಳಲಿಲ್ಲ. ಆದರೆ ಕಾಲಕ್ರಮೇಣ ತತ್ತ್ವಗಳಿಗೆ ಬದ್ಧರಾದ ಶರಣರ ಸಂಖ್ಯೆ ಈಗ ವರ್ಧಿಸುತ್ತಾ ಬರುತ್ತಿದೆ.

ಲಿಂಗದೇವ ವಚನಾಂಕಿತ ಪ್ರಸಂಗ

ವೀರಶೈವವಾದಿಗಳು ಮತ್ತು ನಮ್ಮ ಬಗ್ಗೆ ಹಲವಾರು ಬಗೆಯ ಮಾತ್ಸರ್ಯ-ಈರ್ಷೆ ಇರುವವರು ಕೆಲವು ವರ್ಷಗಳಿಂದ ''ಲಿಂಗದೇವ'' ಪ್ರಸಂಗವನ್ನು ತೆಗೆದುಕೊಂಡು ಶರಣಮೇಳಕ್ಕೆ ಹಿನ್ನಡೆಯುಂಟು ಮಾಡಬೇಕೆಂದು ಪ್ರಯತ್ನಿಸುತ್ತಿರುವರು. ಇದರಿಂದ ನಿಷ್ಠಾವಂತ ಬಸವ ಭಕ್ತರು ನಿರುತ್ಸಾಹಿತರಾಗಬೇಕಾಗಿಲ್ಲ ಅಥವಾ ಉದ್ವಿಗ್ನರೂ ಆಗಬೇಕಾಗಿಲ್ಲ. ಶರಣ ಮೇಳವನ್ನು ನಡೆಸುವುದು ನಮ್ಮ-ನಿಮ್ಮ ಶಕ್ತಿಯಲ್ಲ; ಧರ್ಮಪಿತ ಬಸವಣ್ಣನವರ ಸತ್‌ಸಂಕಲ್ಪ ಸೃಷ್ಟಿಕರ್ತ ಲಿಂಗದೇವನ ಅನುಗ್ರಹ, ಆದಿ ಶರಣರ ಆಶಯದಿಂದ.

''ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ''

ಎಂದು ಶರಣ ಮಡಿವಾಳ ಮಾಚಿತಂದೆಗಳು ನುಡಿದರು. ''ಕೃಷ್ಣಾನದಿಯ ದಕ್ಷಿಣ ದಂಡೆಯ ಮೇಲೆ ಬೃಹತ್ ಸಮಾವೇಶವಾಗಿ ಜನರು ನೆರೆಯುವರು'' ಎಂಬುದು ಶರಣರು ಕಂಡ ಕನಸು. ಇದಕ್ಕೆ ಬಸವ ಭಕ್ತರನ್ನು **''ಕರೆವರು''** ಎಂದು ನಮ್ಮ-ನಿಮ್ಮ ಮೇಲೆ ಒಂದು ಭಾರಿ ಹೊಣೆ ಹೊರಿಸಿದ್ದಾರೆ. ಆದ್ದರಿಂದ ನಾವು-ನೀವು ಶರಣ ಬಂಧುಗಳನ್ನು ಕರೆಯಬೇಕಾಗಿದೆ.

ಅನುಭಾವ ದರ್ಶನಶಾಸ್ತ್ರ ತಾತ್ತ್ವಿಕ ಚಿಂತನೆಯ ಆಳವು ಇಲ್ಲದೆ ಇರುವ ಕೆಲವರು, ''ಮಾತಾಜಿ ಹೀಗೆ ಮಾಡಿದ್ದಾರೆ, ನಾವು ಶರಣ ಮೇಳಕ್ಕೆ ದೇಣಿಗೆ ಕೊಡುವುದಿಲ್ಲ'' ಎನ್ನಬಹುದು. ಇದರಿಂದ ನೀವು ವಿಚಲಿತರಾಗಬೇಡಿರಿ, ಅವಮಾನವಾಯಿತೆಂದು ನೊಂದುಕೊಳ್ಳಬೇಡಿ, ದೇಣಿಗೆ ಕೊಡದವರ ಮೇಲೆ ಕೋಪಗೊಳ್ಳಬೇಡಿರಿ. ಧರ್ಮಗುರು ಬಸವಣ್ಣನವರ ಸತ್ಸಂಕಲ್ಪ ಪೂರೈಸುವ ಶರಣ ಮೇಳದ ಪವಿತ್ರ ದಾಸೋಹಕ್ಕೆ ದೇಣಿಗೆ ನೀಡುವ ಪುಣ್ಯವನ್ನು ಅಂಥವರು ಕಳೆದುಕೊಂಡರು ಎಂದು ಭಾವಿಸಿರಿ; ಪ್ರವಾದಿ ಏಸುಕ್ರಿಸ್ತರು ತನ್ನನ್ನು ದ್ವೇಷಿಸಿ ಹಿಂಸಿಸಿದ ಜನರನ್ನು ಕುರಿತು ದೇವರಲ್ಲಿ ಪ್ರಾರ್ಥಿಸಿದರಂತೆ, ''ದೇವರೇ, ಇವರು ಏನು ತಪ್ಪು ಮಾಡುತ್ತಿದ್ದಾರೆಂದು ಅರಿಯರು, ಅವರನ್ನು ಕ್ಷಮಿಸು.''ಎಂದು. ಬಸವ ಭಕ್ತರಲ್ಲದವರು, ಬಸವ ದ್ವೇಷಿಗಳು ಅತ್ತಲಿರಲಿ. ಅವರು ನೆರೆಮನೆಯವರಾಗಿರಲಿ; ಬಸವ ಭಕ್ತರೆಂದುಕೊಂಡೂ ಶರಣ ಮೇಳಕ್ಕೆ ಅಡೆತಡೆಯೊಡ್ಡುವವರು, ದ್ವೇಷಿಸುವವರು ಮತ್ತು ಅಸಹಕಾರ ಮಾಡುವವರು ತಾವು ಏನು ತಪ್ಪು ಮಾಡುತ್ತಿರುವರೆಂಬುದನ್ನರಿಯರು. ಕಾಲವೇ ಅವರನ್ನು ಪರಿವರ್ತಿಸುತ್ತದೆ ; ಇಲ್ಲವೇ ತಿರಸ್ಕರಿಸಿ, ಬಿಸುಟುತ್ತದೆ.

ದೆಹಲಿಯಲ್ಲಿ **ಬಹಾಉಲ್ಲಾ** ಎಂಬುವವರ ಸ್ಮರಣಾರ್ಥ ಕಟ್ಟಿಸಿದ ಕಮಲ ದೇಗುಲ (Lotus temple) ಇದೆ. ಅಂಥ ೮-೧೦ ಸ್ಮಾರಕ ಮಂದಿರಗಳು ಜಗತ್ತಿನ ತುಂಬ ಇವೆ. ಬಹಾಉಲ್ಲಾರ ಭಕ್ತರಿಂದ ಮಾತ್ರ ಆ ಸ್ಮಾರಕಕ್ಕೆ ದೇಣಿಗೆ ಪಡೆದಿದ್ದಾರೆ. ಸಾರ್ವಜನಿಕ ವಂತಿಗೆ ಅವರು ಸ್ವೀಕರಿಸುವುದೇ ಇಲ್ಲವಂತೆ, ಅದರಂತೆಯೇ ನಿಷ್ಠಾವಂತ ಬಸವಭಕ್ತರು ಕೊಡುವ ದೇಣಿಗೆಯಿಂದಲೇ ಶರಣ ಮೇಳ ನಡೆಸೋಣ; ಕೊಡುವುದಿಲ್ಲ ಎನ್ನುವವರ ಜೊತೆ ವಾದಕ್ಕಿಳಿದು ಸಮಯ ಹರಣ ಮಾಡದೆ ನಿಮ್ಮ ಸಮಯವನ್ನು ಬೇರೆ ಕಡೆ ಸಾರ್ಥಕ ಪಡಿಸಿಕೊಳ್ಳಿರಿ. ಕೆಲವರ ಹೃದಯ-ಮನ-ಬುದ್ಧಿಗಳು ಕಾಡಿಗೆ ಕಟ್ಟಿರುತ್ತವೆ. ಅವರಿಗೆ ಸತ್ಯವನ್ನು ಅರಿತುಕೊಳ್ಳುವಷ್ಟು ಸಹನೆಯಾಗಲಿ, ಸಹೃದಯತೆಯಾಗಲೀ ಇರುವುದಿಲ್ಲ. ವೈಯಕ್ತಿಕ ರಾಗ-ದ್ವೇಷ, ಮದ-ಮತ್ಸರಗಳಿಂದ ಮಾಡಬಾರದ ಪಾಪ ಕಾರ್ಯಗಳನ್ನು ಮಾಡುತ್ತಿರುತ್ತಾರೆ. ಇಂತಹವರು ಜಗತ್ತಿನಲ್ಲಿ ಎಂದಿನಿಂದಲೂ ಇದ್ದಾರೆ, ಇರುತ್ತಾರೆ. ಅಂಥವರ ಬಗ್ಗೆ ತಲೆ ಕೆಡಿಸಿಕೊಳ್ಳದೆ ನಾವಿಟ್ಟುಕೊಂಡ ಸತ್ಯದ ಗುರಿಯ ಕಡೆಗೆ ನಾವು ಸಾಗಬೇಕು.

ಕೆಲವೊಂದು ಅನಿವಾರ್ಯ ಕಷ್ಟಗಳು

ಶರಣ ಮೇಳಕ್ಕೆ ವರ್ಷದಿಂದ ವರ್ಷಕ್ಕೆ ಜನಸಂಖ್ಯೆ ಹಿರಿದಾಗುತ್ತಿದೆ. ಆಗಬೇಕೆಂಬುದೇ ನಮ್ಮ ಸಂಕಲ್ಪ. ಶರಣ ಕಾರ್ಯಕರ್ತರ ಅವಿಶ್ರಾಂತ ಪರಿಶ್ರಮದಿಂದ ಊಟದ ವ್ಯವಸ್ಥೆಗೆ ತೊಂದರೆಯಾಗದು. ವಸತಿಗೆ ಮಾತ್ರ ತಾತ್ಕಾಲಿಕ ಶಾಮಿಯಾನ, ಟೆಂಟ್, ಪೆಂಡಾಲ್ ಮುಂತಾದವು ಇರುತ್ತವೆ. ಸ್ವತಂತ್ರ ವಾಹನಗಳ ಅನುಕೂಲವಿರುವವರು ಆಲಮಟ್ಟಿ, ಹುನಗುಂದ, ಇಳಕಲ್, ಬಾಗಲಕೋಟೆಗಳ ಪ್ರವಾಸಿ ಮಂದಿರ, ಲಾಡ್ಜಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಬೆಳಗ್ಗೆ ಸ್ನಾನ ಪೂಜೆ ಮುಗಿಸಿ ಬಂದುಬಿಟ್ಟರೆ ಸಾಕು, ಇಲ್ಲಿ ಉಪಾಹಾರ, ಊಟಗಳ ವ್ಯವಸ್ಥೆ ಇರುತ್ತದೆ. ರಾತ್ರಿ ಕಾರ್ಯಕ್ರಮ ಮುಗಿದ ಬಳಿಕ ರಾತ್ರಿಯ ಊಟ ಮುಗಿಸಿ ತಮ್ಮ ವಾಸ್ತವ್ಯಕ್ಕೆ ತೆರಳಬಹುದು. ಉಳಿದವರಿಗೆ ಶಾಮಿಯಾನಾ ಕೊಠಡಿ ಇರುತ್ತದೆ. ಶರಣರು ಪಂಚತಾರಾ ಹೋಟಲ್ಲಿನ ಸೌಕರ್ಯ ಬಯಸಬಾರದು, ಇಂಥ ಕುಗ್ರಾಮದಲ್ಲಿ ಅದನ್ನು ನಿರೀಕ್ಷಿಸಲು ಸಾಧ್ಯವೇ? ಕೇವಲ ಸ್ವಲ್ಪ ಚಳಿ ತಡೆಯಬೇಕು. ಈ ವರ್ಷ ಅದೂ ಸಹ ಕಮ್ಮಿ. ಹವೆಯು ಬಹಳ ಹಿತಕರವಾಗಿದೆ. ಇಂಥ ಭೌತಿಕ ಅನುಕೂಲತೆ ನಿರೀಕ್ಷಿಸಿ ಶರಣ ಮೇಳಕ್ಕೆ ಬರದೆ ಮನೆಯಲ್ಲಿ ಕುಳಿತುಕೊಳ್ಳುವವರು ಆದಿ ಶರಣರ ಹೋರಾಟದ ಬದುಕನ್ನು ನೆನಪಿಸಿಕೊಳ್ಳಬೇಕು. ಸಹ್ಯಾದ್ರಿಯ ಕಾಡಿನಲ್ಲಿ ಅಲೆದು ವಚನ ಸಾಹಿತ್ಯ ಸಂರಕ್ಷಿಸಿ, ಆ ಮಳೆಗಾಳಿ ಚಳಿಯಲ್ಲಿ ಘಾಸಿಯಾಗಿ, ನೊಂದು, ನಲುಗಿ, ಗಿಡಗಳಿಗೆ ತೊಟ್ಟಿಲು ಕಟ್ಟಿಕೊಂಡು ಮಲಗಿ, ಅಂಥ ಸಂಕಷ್ಟಗಳನ್ನೂ ಅನುಭವಿಸಿ ಪ್ರಾಣಬಿಟ್ಟ ಆ ಮಹಾನ್ ತ್ಯಾಗಿಗಳನ್ನು ನೆನಪು ಮಾಡಿಕೊಂಡು ನಮ್ಮ ಕರುಳು ಚುರುಕ್ ಎನ್ನಬೇಕು. ಹೃದಯ ಮಮ್ಮಲ

ಮರುಗಬೇಕು. ಅವರ ತ್ಯಾಗ, ಪರಿಶ್ರಮದ ಒಂದುಸಾವಿರದಲ್ಲಿ ಒಂದು ಅಂಶದಷ್ಟೂ ನಮಗೆ ಶ್ರಮವಿಲ್ಲ. ಅವರ ಋಣದಿಂದ ನಾವು ಮುಕ್ತರಾಗಬೇಕಾದರೆ ಯಾವ ರೀತಿ ದುಡಿದು ಹಣ್ಣಾದರೂ ಸಾಲದು. ಕಲ್ಯಾಣ ಕ್ರಾಂತಿ ; ಗಡಿಪಾರು ಎಲ್ಲ ಆದ ಮೇಲೆ ಧರ್ಮಪಿತರು ನೋವೇ ಹೆಪ್ಪುಗಟ್ಟಿ ನುಡಿದಿರುವ ಈ ವಚನವನ್ನಿಷ್ಟು ಅರ್ಥ ಮಾಡಿಕೊಳ್ಳಿರಿ.

ಬಿತ್ತಿತ್ತು ಬೆಳೆಯಿತ್ತು ಕೆಯ್ಯ ಕೊಯ್ಯಿತ್ತು ಗೂಡು ಮುರಿಯಿತ್ತು
ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು ; ಸಲಗೆ ತುಂಬಿತ್ತು
ಲಿಂಗದೇವಯ್ಯಾ ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ (ಬ.ವ.ದೀಪ್ತಿ.೧೩೭೮)

ಅಂದು ಧರ್ಮಗುರುವು ತತ್ವದ ಬೀಜಗಳನ್ನು ಅನುಭವ ಮಂಟಪ ಎಂಬ ಕೂರಿಗೆ ಮೂಲಕ ಬಿತ್ತಿದರು. ಶರಣ ಚೇತನಗಳೆಂಬ ಬೆಳೆ ಬೆಳೆದರು. ನಂತರ ಮೇಟಿ (ಗುರು ಬಸವಣ್ಣನವರ ಗಡಿಪಾರು) ಕಿತ್ತಿತು. ಕಣ (ಕಲ್ಯಾಣ ಕಾರ್ಯಕ್ಷೇತ್ರ) ಮಸಣ ಸದೃಶವಾಯಿತು. ಅನಿರೀಕ್ಷಿತ ಅವಗಡ ಎದುರಾಯಿತು. ಆದಿ ಪ್ರಮಥ ಬಸವಣ್ಣನವರು ಆದಿಯಾಗಿ ಅನೇಕ ಶರಣರು ನಮ್ಮ ಮೇಲೆ ಅಂದರೆ ನಂತರ ಬರುವ ಪೀಳಿಗೆಯ ಮೇಲೆ ಭರವಸೆ ಇಟ್ಟುಕೊಂಡು ಸಮಾಧಾನಪಟ್ಟುಕೊಂಡು ಹೋಗಿದ್ದಾರೆ. ಕಾಲಜ್ಞಾನ ವಚನಗಳು ಆದಿ ಶರಣರ ಉಯಿಲು (will), ಇಚ್ಛಾ ಪತ್ರಗಳಂತಿವೆ. ಅವರು ನಮ್ಮನ್ನು ಬರಿದಾಗಿ ಬಿಟ್ಟು ಹೋಗಿಲ್ಲ. ವಚನ ವಾಙ್ಮಯ ಸಂಪತ್ತಿಗೆ ವಾರೀಸುದಾರರನ್ನಾಗಿ ಮಾಡಿಹೋಗಿದ್ದಾರೆ. ಈ ಸಂಪತ್ತನ್ನೂ ಪಡೆದು ನಾವು ಆದಿ ಶರಣರ ಇಚ್ಛೆಯನ್ನು ಪೂರ್ತಿ ಮಾಡಲು ಸನ್ನದ್ಧರಾಗಬೇಕಾಗಿದೆ.

ಬನ್ನಿ ಶರಣ ಬಂಧುಗಳೇ, ಲಿಂಗಾಯತ ಸಮಾಜ ಎಂಬ ಕಣವನ್ನು ಸರಿಪಡಿಸಲಾಗುತ್ತಿದೆ. ಪುನಃ ಧರ್ಮಗುರು ಬಸವಣ್ಣ ಎಂಬ ಮೇಟಿಯನ್ನು ನೆಡಲಾಗಿದೆ. ಆದಿ ಶರಣರು ರಾಜಶಾಹಿ, ಪುರೋಹಿತಶಾಹಿ ಎರಡರ ವಿರುದ್ಧ ಹೋರಾಡಬೇಕಾಗಿತ್ತು. ನಮಗೆ ಇವೆರಡರ ಕಾಟವಿಲ್ಲ (ಸ್ವಲ್ಪ ಕಿರಿಕಿರಿ ಇರಬಹುದು); ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ. ಪ್ರಜಾಪ್ರಭುತ್ವವು ಈ ದೇಶದಲ್ಲಿ ಬರುವುದನ್ನು ಆದಿ ಶರಣರು ತಿಳಿದೇ ೭೭೦ ವರ್ಷಗಳ ಬಳಿಕ ಬರುವ ಸಂಕಲ್ಪ ಮಾಡಿರಬಹುದು (೧೯೪೭ ಸ್ವಾತಂತ್ರ ಬಂದ ವರ್ಷ ಹಿಂದೆ ಹತ್ತು (೧+೯) ಮುಂದೆ ಹನ್ನೊಂದು (೪+೭) ಎಂಬುವ ಶರಣರ ಲೆಕ್ಕಾಚಾರವು ಇಲ್ಲಿ ತಾಳೆಯಾಗುತ್ತಿದೆ) ನಮ್ಮ ಕೈಗಳು ಕಟ್ಟಲ್ಪಟ್ಟಿಲ್ಲ ಮುಕ್ತವಾಗಿವೆ.

ವಚನ ಸಾಹಿತ್ಯ ಸಲಗೆ (ಕಣಜ)ಯಲ್ಲಿ ಇರುವ ವಿನೂತನ ಸಂದೇಶಗಳ ಬೀಜಗಳನ್ನು ನಾವು-ನೀವೆಲ್ಲ ಕೂಡಿ ಶರಣ ಮೇಳದ ಮೂಲಕ ಬಿತ್ತೋಣ ಬನ್ನಿ.

ಬಸವ ಗುರುವಿನ ತತ್ತ್ವ ಲೋಕದಿ ಹಬ್ಬಲಿ ; ಮನುಜ ಕಲ್ಪಿತ ಜಾತಿ ಹೆರೆ ತೊಲಗಿ ಹೋಗಲಿ
ವಿಶ್ವಮಾನವ ಪ್ರೀತಿ ಹೊನಲಾಗಿ ಹರಿಯಲಿ ; ಸೃಷ್ಟಿಕರ್ತನ ಕರುಣೆ ಎಮ್ಮ ಕಾಪಾಡಲಿ ॥

ಹೀಗಾಗಿ ಶರಣ ಬಂಧುಗಳೇ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳವು, ನಿಮ್ಮಿಂದ, ನಿಮಗಾಗಿ, ನಿಮ್ಮದೇ !

ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ
ರಾಜಾಜಿನಗರ, 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 3325335/3322790

ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ - ೫೮೭೧೧೫
ತಾ-ಹುನಗುಂದ, ಜಿ-ಬಾಗಲಕೋಟೆ
ದೂರವಾಣಿ : 58038/58007/58140

ನೀವು ಸಲ್ಲಿಸುವ ಎಲ್ಲ ದಾಖಲೆಗಳಲ್ಲಿ ಧರ್ಮ ಕಾಲಂದಲ್ಲಿ
ಕೇವಲ 'ಲಿಂಗಾಯತ' ಎಂದೇ ಬರೆಸಿರಿ.

ಕಲ್ಯಾಣದಲ್ಲೊಂದು ಬಸವ ಮಹಾಮನೆ ನಿರ್ಮಿಸಲು ರೂಪುರೇಷೆ

-ಬಸವಾತ್ಮಜೆ

ಕಲ್ಯಾಣವೆಂಬುದಿನ್ನಾರಿಗೂ ಹೋಗಬಾರದು ಅಸಾಧ್ಯವಯ್ಯ !
ಆಸೆ ಆಮಿಷವನಳಿದವರಿಗಲ್ಲದೆ
ಕಲ್ಯಾಣದತ್ತಲಡಿಯಿಡಬಾರದು.
ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ
ಹೋಗಬಾರದು. ನಾನೆಂಬುದ ಹರಿದವರಿಗಲ್ಲದೆ
ಕಲ್ಯಾಣವ ಹೋಗಬಾರದು. ಒಳಗೆ ತಿಳಿದು
ಚನ್ನಮಲ್ಲಿಕಾರ್ಜುನಂಗೊಲಿದು ಉಭಯಲಜ್ಜೆಯಳಿದೆನಾಗಿ
ಕಲ್ಯಾಣವ ಕಂಡು ನಮೊ ನಮೋ ಎನುತಿರ್ದೆನು. -ಮ. ಅ. ವ 177

ಕಲ್ಯಾಣ ಕೈಲಾಸವೆಂಬ ನುಡಿ ಹುಸನಾಯಿತ್ತು
ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ ;
ಇದರಂತುವನಾರು ಬಲ್ಲರಯ್ಯಾ ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ ;
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ
ತವಕವೆನಗಾಯಿತ್ತು ಕೇಳಾ ಚನ್ನಮಲ್ಲಿಕಾರ್ಜುನ ! -ಮ.ಅ.ವ. 203

"ಎಲ್ಲ ರಸ್ತೆಗಳು ರೋಂ ಪಟ್ಟಣವನ್ನು ಸೇರುತ್ತವೆ ". ಎಂಬಂತೆ 12 ನೆಯ ಶತಮಾನದಲ್ಲಿ ಕಲ್ಯಾಣವು ಕೈಲಾಸವನ್ನು ನಾಚಿಸುವಂತೆ 36 ವರ್ಷ ಕಾಲ ವಿಕ್ರಮನಾಮ ಸಂವತ್ಸ (ಕ್ರಿ.ಶ.1160)ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ವಿಜೃಂಭಿಸಿತು.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತಿರ್ದುದಯ್ಯಾ ಶಿವನ ಪ್ರಕಾಶ !
ಆ ಬೆಳಗಿನೊಳಗೊಪ್ಪುತಿರ್ದರಯ್ಯ ಅಸಂಖ್ಯಾತ ಭಕ್ತ ಮಹಾಗಣಂಗಳು !
ಶಿವಭಕ್ತರಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೇ ?
ಶಿವಭಕ್ತರಿರ್ದ ದೇಶವು ಪಾವನವೆಂಬುದು ಹುಸಿಯೇ ?
ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಗುರು
ಸಂಗನ ಬಸವಣ್ಣನ ಮಹಿಮೆ ನೋಡಾ ಸಿದ್ಧರಾಮಯ್ಯ! -ಅ.ಪ್ರ.ವ 823

ಕಲ್ಯಾಣವೇ ಪ್ರಣತೆಯಾಯಿತು ಭಕ್ತಿರಸವೇ ತೈಲವಾಯಿತು. ಸದಾಚಾರವೇ ಬತ್ತಿಯಾಗಿ ಬಸವಣ್ಣನೆಂಬ ಜ್ಯೋತಿ ಸ್ಪರ್ಶಿಸಲು ದೈವೀ ಪ್ರಕಾಶವು ತೊಳಗಿ ಬೆಳಗಿತು. ಆ

ಬೆಳಕಿನಲ್ಲಿ ತಮ್ಮ ಬಾಳ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭೂಭಾಗದಿಂದೆಲ್ಲ ಸತ್ಯದ ಸಾಧಕರು, ಶೋಧಕರು, ಸಿದ್ಧಪುರುಷರು ಆಗಮಿಸಿದರು.

ಇಂಥ ಬಸವ ಕಲ್ಯಾಣದಲ್ಲಿ ಒಂದು ಧರ್ಮ ಪ್ರಚಾರಕ ಕೇಂದ್ರವನ್ನು ತೆರೆಯಬೇಕೆಂಬುದು ಲಿಂ|| ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಅಪೇಕ್ಷೆಯಾಗಿತ್ತು. 1957 ರಲ್ಲಿಯೇ ಆ ಆಸೆ ಮೊಳಕೆಯೊಡೆದಿತ್ತು. 1986 ರಲ್ಲಿ ಅದು ಹೂ ಬಿಟ್ಟಿತ್ತು. ಇದೀಗ 2001ನೆಯ ಇಸವಿಯಲ್ಲಿ ಅದು ಸಿದ್ಧಿಸುತ್ತಲಿದೆ, 2002 ರಲ್ಲಿ ಫಲಕೊಡುತ್ತಲಿದೆ.

ಬೀದರ್ ಜಿಲ್ಲೆಯ ಜನರಲ್ಲಿ ಗುರು ಬಸವಣ್ಣನವರಲ್ಲಿ ಅಚಲವಾದ ನಂಬಿಕೆ ಮಾತ್ರವಲ್ಲ ತಮ್ಮನ್ನು ತಾವು ಸಮರ್ಪಿಸಿಕೊಂಡು ದುಡಿಯುವುದರಲ್ಲಿ ಅಪಾರ ಆಸಕ್ತಿ. ಅವರು ಕೂಡಲ ಸಂಗಮದಲ್ಲಿ ನಮ್ಮ ಟ್ರಸ್ಟ್ ಕೈಗೊಂಡ ಯೋಜನೆಗಳಿಗೆ, ಶರಣ ಮೇಳಕ್ಕೆ ಸಹಕಾರ ನೀಡುತ್ತಲೇ ಬಂದಿದ್ದಾರೆ. ಅವರೆಲ್ಲರಿಗೆ ಒಂದು ಕೊರಗು ಇತ್ತು. '' ಮಾತಾಜಿಯವರು ಕೂಡಲ ಸಂಗಮಕ್ಕೆ ಮಾತ್ರ ಗಮನ ಕೊಡುತ್ತಿದ್ದಾರೆ; ಬಸವ ಕಲ್ಯಾಣ ಕುರಿತು ಮಾತಾಜಿಯವರಿಗೆ ಆಸಕ್ತಿ(ಪ್ರೀತಿ) ಇಲ್ಲ. '' ಇದನ್ನು ಹಲವು ಬಾರಿ ಆಡಿ ತೋರಿಸಿದ್ದರು. ನಮ್ಮನ್ನು ದ್ವೇಷಿಸುವವರು ಅಭಿಮಾನಿಗಳ ಮನಸ್ಸನ್ನು ಒಡೆಯಲು ಇದೇ ಅಸ್ತ್ರ ಬಳಸುತ್ತಿದ್ದರು. ಯಾರ ಸುದ್ದಿ ಏನೇ ಇರಲಿ ಆ ಅಪ್ಪ-ಧರ್ಮಗುರು ಬಸವಣ್ಣನವರಿಗೆ ನಮ್ಮ ಋಣ ತೀರಿಸಲು, ಈ ಅಪ್ಪ (ಪೂಜ್ಯ ಗುರುಗಳು)ಗಳ ಸಂಕಲ್ಪ ಪೂರೈಸುವುದು ಬಸವ ಸಂತಾನವಾದ ನಮ್ಮ ಹಂಬಲ ಮತ್ತು ಕರ್ತವ್ಯವಾಗಿತ್ತು. ಒಂದು ದಿವಸ ಇದ್ದಕ್ಕಿದ್ದಂತೆಯೇ ಪ್ರೇರಣೆ ಉತ್ಕಟವಾಗಿ ದಿ.11-12-2001 ರಂದು ಬಸವ ಕಲ್ಯಾಣಕ್ಕೆ ಹೊರಟೆವು. ಹೈದರಾಬಾದ್ ಮತ್ತು ಬೀದರ್ ಶರಣರಿಗೆ ದೂರವಾಣಿಯ ಮೂಲಕ ತಿಳಿಸಲಾಗಿ ಅವರುಗಳು ಬಸವ ಕಲ್ಯಾಣಕ್ಕೆ ಬಂದರು. ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇರುವ 3 ಎಕರೆ ಜಮೀನನ್ನು ಖರೀದಿಸಲು ಇಚ್ಛಿಸಿ ದಿ.13-12.2001 ಪ್ರಭುವಾರದಂದು ಒಪ್ಪಂದ ಮಾಡಿಕೊಂಡು ಬಂದೆವು. ಬೀದರಿನ ಕೆಲವು ಶರಣರಿಗೆ ತಿಳಿಸುತ್ತಲೇ ಅವರು ಹರ್ಷೋದ್ವಿಗ್ನರಾದರು. ಹಣ ಹೊಂದಿಸುವುದು ದುಸ್ತರವಾದ ಕೆಲಸ. ''ಸದ್ಯದಲ್ಲಿ ಸಾಲ ರೂಪದಲ್ಲಿ ಹಣ ಕೊಟ್ಟರೆ ನಂತರ ಸದ್ಭಕ್ತರಿಂದ ಕಾಣಿಕೆ ಸಂಗ್ರಹಿಸಿ ಸಾಲವನ್ನು ಮುಟ್ಟಿಸಬಹುದು.'' ಎಂಬ ಸೂಚನೆ ಮುಂದಿಡುತ್ತಲೇ ಅನೇಕ ಶರಣರು ಸಂತೋಷದಿಂದ ಒಪ್ಪಿದರು. ಗುರು ಬಸವಣ್ಣನವರ ಕಾರ್ಯಕ್ಕೆ, ಶರಣರ ಸಂಕಲ್ಪ ಪೂರೈಕೆಗೆ ಜನರು ನಮಗೆ ''ಹೆಗಲು ಕೊಡಲು'' ಸದಾ ಉತ್ಸುಕರಾಗಿ ಇರುವುದನ್ನು ಕಂಡಾಗ ಹೃದಯವು ತುಂಬಿ ಬರುತ್ತದೆ. ಸಮಯವು ಬಹಳ ಕಡಿಮೆ ಇತ್ತು. ಕೇವಲ ಫೋನ್ ಮೂಲಕ ಸಂಪರ್ಕಿಸಿದಾಗ ಶರಣ ಬಂಧುಗಳು ತಾವು ತಾವೇ ಹಣವನ್ನು ಕಳಿಸಲು ಏರ್ಪಾಡು ಮಾಡಿದರು. ಭದ್ರಾವತಿ, ಚಿತ್ರದುರ್ಗ, ಧಾರವಾಡ-ಹುಬ್ಬಳ್ಳಿ, ಹೈದರಾಬಾದ್, ಬೀದರ - ನಾವು ಸಂಪರ್ಕಿಸಿದ್ದು ಇಷ್ಟು ಊರು ಮಾತ್ರ. ಅಗತ್ಯವಿದ್ದಷ್ಟು ಹಣ ಸಂಗ್ರಹವಾಯಿತು.

ಮಾತೃ(ಶುಕ್ರ)ವಾರ ದಿ. 21-12-2001ರಂದು ನೋಂದಣಿ ಕಾರ್ಯ ಪೂರ್ಣಗೊಂಡಿತು. ಕೆಲಸವಾಗುವ ಮೊದಲೇ ಮಾತನಾಡುವುದು ಬೇಡ, ಏಕೆಂದರೆ ಕ್ರಾಂತಿ ಕವಿ ಸರ್ವಜ್ಞ ಹೇಳುತ್ತಾನೆ.

ಆಡದೆ ಮಾಡುವನು ರೂಢಿಯೊಳಗುತ್ತಮನು
ಆಡಿ ಮಾಡುವವ ಮಧ್ಯಮನು ! ಅಧಮ ತಾ
ನಾಡಿ ಮಾಡದವ ಸರ್ವಜ್ಞ

ಆಡದೆ ಮಾಡುವುದು ಉತ್ತಮಿಕೆ ಎಂದು ಎಷ್ಟೋ ಜನರಿಗೆ ತಿಳಿಸಿರಲಿಲ್ಲ. ಅದಕ್ಕಾಗಿ ಬೀದರಿಗೆ ಹೋಗಿ, ಬಸವ ಮಂಟಪದ ಶರಣ ಸಂಗಮ (ವಾರದ ಪ್ರಾರ್ಥನೆಯಲ್ಲಿ)ದಲ್ಲಿ ಭಾಗಿಯಾಗಿ, ವಿಷಯ ತಿಳಿಸಿದಾಗ ಎಲ್ಲರೂ ಸಂತೋಷಪಟ್ಟರು. ನಂತರ ಹೈದರಾಬಾದ್ ಶರಣರಿಗೂ ವಿಷಯ ತಿಳಿಸಿದಾಗ ಅವರೂ ಸಂತೋಷಪಟ್ಟರು. ಬಹುದಿನದ ಬಹುಜನರ ಅಪೇಕ್ಷೆ ಈಡೇರಿಸುವ ಸದವಕಾಶವೀಗ ಬಂದಿದೆ. ಸಾಲ ತೀರಿಸುವ ಜವಾಬ್ದಾರಿ ಹಿರಿದಾಗಿದ್ದರೂ ಶರಣ ಬಂಧುಗಳ ಜಂಗಮ ಶಕ್ತಿ ಜೊತೆಗೆ ಇರುವುದರಿಂದ ಚಿಂತೆ ಏನಿಲ್ಲ.

ಕೊಳವೆ ಭಾವಿಯನ್ನು ತೋಡಿಸುವ ಕೆಲಸ ಕೈಕೊಳ್ಳಬೇಕಾಗಿರುವುದರಿಂದ ಒಂದು ಶಾಖಾ ಕಾರ್ಯಾಲಯವನ್ನು ದಿ.22-12-2001ರಂದು ಬಸವ ಕಲ್ಯಾಣದಲ್ಲಿ ತೆರೆಯಲಾಗಿದೆ. ಆದ್ದರಿಂದ ಆಸಕ್ತ ಶರಣ ಬಂಧುಗಳು ಸಂಪರ್ಕಿಸಬಹುದು. ಶರಣೆ. ನಿಶ್ಚಲಾಂಬ ಎನ್ನುವವರು ಅಲ್ಲಿ ನೋಡಿಕೊಳ್ಳುತ್ತಿದ್ದಾರೆ.

ವಿಳಾಸ : ಬಸವ ಧರ್ಮ ಪೀಠ, ಶಾಖಾ ಕಾರ್ಯಾಲಯ
'ಸಂತೋಷ ನಿಲಯ', ವಿದ್ಯಾಶ್ರೀ ಕಾಲೋನಿ
JBK ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ
ತ್ರಿಪುರಾಂತ ಐ.ಬಿ. ಹಿಂಭಾಗ, ಬಸವ ಕಲ್ಯಾಣ-585 327
ಜಿಲ್ಲೆ-ಬೀದರ್, ದೂರವಾಣಿ : 08481-52856

1. ಬೆಂಗಳೂರಿನಿಂದ ಬಸವ ಕಲ್ಯಾಣಕ್ಕೆ (ಮಧ್ಯಾಹ್ನ 1-00 ಗಂಟೆಗೆ ಎಕ್ಸ್‌ಪ್ರೆಸ್ ವಯಾ-ಬಳ್ಳಾರಿ ಮತ್ತು 3.30ಕ್ಕೆ ಹೈಟೆಕ್ ಬಸ್ ವಯಾ-ಹೈದ್ರಾಬಾದ್) ಮತ್ತು ಕೂಡಲಸಂಗಮದಿಂದ ಬಸವಕಲ್ಯಾಣಕ್ಕೆ ನೇರ ಬಸ್ ಸಂಪರ್ಕವಿದೆ ಎಂದು ಹೇಳಲು ಹರ್ಷಿಸುತ್ತೇವೆ.

2. ಬಸವ ಕಲ್ಯಾಣದಲ್ಲಿ ವಾಸ್ತವ್ಯ ಮಾಡಿ ಶರಣರ ಸ್ಥಾನಗಳನ್ನು ಸಂದರ್ಶಿಸುವ ಹಂಬಲ ಉಳ್ಳವರಿಗೆ ಸಹಾಯ ಬೇಕಾಗಿದ್ದರೆ ಬೆಂಗಳೂರಿನ ವಿಳಾಸ, ದೂರವಾಣಿಗೆ ಸಂಪರ್ಕಿಸಬಹುದು. ಬಸವ ಕಲ್ಯಾಣದಲ್ಲಿರುವ ನಮ್ಮ ಶಾಖೆಯ ಕಾರ್ಯಾಲಯಕ್ಕೂ ಸಂಪರ್ಕಿಸಬಹುದು. ■

> ಆಡಿಕೊಂಡಿಹರೆಂದು ಅಂಜಲದೇಕೆ ? ನಾಸ್ತಿಕವಾಡಿಹರೆಂದು ನಾಚಲದೇಕೆ ?
> ಆರಾದೊಡಾಗಲಿ ಶ್ರೀ ಮಹದೇವಂಗೆ ಶರಣೆನ್ನಿ

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಹುಬ್ಬಳ್ಳಿ

ಸಂಖ್ಯೆ: ವಾಕರಸಾ: ಕೇಕ :ಹು:ಸಂ:ಕಾ: 3333 : ದಿನಾಂಕ: 8:12:2001

ಕಾರ್ಯದರ್ಶಿ
ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587 115

ಮಾನ್ಯರೆ,

ವಿಷಯ: ಬಾಗಲಕೋಟೆ ಜಿಲ್ಲೆ ಕೂಡಲಸಂಗಮದಲ್ಲಿ ದಿನಾಂಕ: 11-1-2002 ರಿಂದ 15-1-2002 ರವರೆಗೆ ನಡೆಯುವ "ಶರಣ ಮೇಳ" ಕ್ಕೆ ವಿಶೇಷ ಬಸ್ ವ್ಯವಸ್ಥೆ ಮಾಡುವ ಕುರಿತು.

ನಿಮ್ಮ ಪತ್ರ ದಿನಾಂಕ: 18-11-2001 ರಲ್ಲಿ ಕೋರಿದಂತೆ, ದಿನಾಂಕ: 10-1-2002 ರಿಂದ ದಿನಾಂಕ : 16-1-2002 ರ ವರೆಗೆ ಬಾಗಲಕೋಟೆ ಜಿಲ್ಲೆ ಕೂಡಲಸಂಗಮದಲ್ಲಿ ನಡೆಯುವ "ಶರಣ ಮೇಳ" ಕ್ಕೆ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಯಾಣಿಕರ ಜನದಟ್ಟಣೆ ಅನುಸರಿಸಿ, ವಿಶೇಷ ಸಾರಿಗೆಯನ್ನು ಎಲ್ಲಾ ವಿಭಾಗ ಕೇಂದ್ರಗಳಿಂದ ಓಡಿಸಲು, ವಾಕರಸಾ: ಸಂಸ್ಥೆ ವ್ಯಾಪ್ತಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಹಾಗೂ ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮ ಕ್ರಾಸ್ ದಿಂದ ಕೂಡಲಸಂಗಮ ಕ್ಷೇತ್ರದವರೆಗೆ ಹೆಚ್ಚಿನ ಸಾರಿಗೆ ಓಡಿಸುವಂತೆ ವಿಭಾಗೀಯ ನಿಯಂತ್ರಣಾಧಿಕಾರಿ, ಬಾಗಲಕೋಟೆ ರವರಿಗೆ ತಿಳಿಸಲಾಗಿದೆ.

ಅಲ್ಲದೆ, ಕೂಡಲಸಂಗಮ ಕ್ರಾಸ್ ಮುಖಾಂತರ ಹಾದು ಹೋಗುವ ಎಲ್ಲಾ ಸಾರಿಗೆಗಳಿಗೆ ಕೂಡಲಸಂಗಮ ಕ್ರಾಸ್‌ದಲ್ಲಿ ತಾತ್ಕಾಲಿಕವಾಗಿ ನಿಲುಗಡೆ ಒದಗಿಸುವಂತೆಯೂ ಸಹ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಚಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-, ಮುಖ್ಯ ಸಂಚಾರ ವ್ಯವಸ್ಥಾಪಕರು
ವಾಕರಸಾ ಸಂಸ್ಥೆ : ಕೇಂದ್ರ ಕಛೇರಿ : ಹುಬ್ಬಳ್ಳಿ

ಬಸವ ಮಂಟಪದಿಂದ ಶರಣ ಮೇಳಕ್ಕೆ ಹೈಟೆಕ್ ಬಸ್ ವ್ಯವಸ್ಥೆ

ಬೆಂಗಳೂರು ರಾಜಾಜಿನಗರದ ಎರಡನೆಯ ಬ್ಲಾಕಿನ 20ನೆಯ ಮುಖ್ಯ ರಸ್ತೆಯಲ್ಲಿರುವ ಬಸವ ಮಂಟಪದಿಂದ ಶರಣ ಮೇಳಕ್ಕೆ ಹೋಗುವವರಿಗಾಗಿ ಹೈಟೆಕ್ ಬಸ್ಸನ್ನು ಏರ್ಪಡಿಸಿದ್ದು ಬಸ್ ದಿ. 10-1-2002ರಂದು ಸಂಜೆ 6 ಗಂಟೆಗೆ ಬೆಂಗಳೂರಿನಿಂದ ಹೊರಡುತ್ತದೆ. ಪುನಃ 15-1-2002ರಂದು ಕೂಡಲಸಂಗಮದಿಂದ ಸಂಜೆ ಹೊರಡುತ್ತದೆ. ಬಸ್ ಜನರನ್ನು ಕರೆದೊಯ್ದು ಬಿಟ್ಟು, ಪುನಃ ದಿ.15ರಂದು ಬೆಂಗಳೂರಿಗೆ ಜನರನ್ನು ಕರೆತರುವ ಕಾರಣ ಹಾಲ್ಟಿಂಗ್ ಚಾರ್ಜು ಮುಂತಾದ್ದು ಏನೂ ಇರುವುದಿಲ್ಲ. ಆಸಕ್ತರು ಬೇಗನೇ ಸಂಪರ್ಕಿಸಬೇಕು.

ವ್ಯವಸ್ಥಾಪಕರು

ಎಲ್ಲ ಊರುಗಳಲ್ಲಿಯೂ ದಿ. 14-1-2002, ಬಸವ ಧರ್ಮ ಸಂಸ್ಥಾಪನಾ ದಿನದಂದು

ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಪಠಣ

ಶರಣ ಬಂಧುಗಳೇ,

ಪ್ರತಿ ವರ್ಷವೂ ಜನವರಿ 14 ರಂದು ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣಗಳು ಧಾರ್ಮಿಕ ವಿಧಿಯಾಗಿ ನಡೆಯುತ್ತಲಿವೆಯಷ್ಟೆ ? ಕೆಲವರಿಗೆ ಆರೋಗ್ಯದ ನಿಮಿತ್ತವೋ ಅಥವಾ ಮತ್ತಾವುದೋ ಅನಾನುಕೂಲತೆಯಿಂದ ಕೂಡಲ ಸಂಗಮದ ಶರಣ ಮೇಳದ ಸಮುದಾಯ ಪ್ರಾರ್ಥನೆ - ವಚನ ಪಠಣದಲ್ಲಿ ಭಾಗಿಗಳಾಗಲು ಸಾಧ್ಯವಾಗುವುದಿಲ್ಲ. ಅಂಥ ಎಲ್ಲರೂ ಮತ್ತು ಇನ್ನಿತರ ಧರ್ಮಬಂಧುಗಳು ಸದಾಕಾಲ ವಾರದ ಪ್ರಾರ್ಥನೆ ನಡೆಸುವಲ್ಲಿಯೇ ಬೆಳಗ್ಗೆ 11ಕ್ಕೆ ಸಾಮೂಹಿಕ ಪ್ರಾರ್ಥನೆ ಮತ್ತು ವಚನ ಪಠಣ ನಡೆಸಿ, ನಂತರ ದಾಸೋಹದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಬೇಕು. ಕುಸುರೆಳ್ಳು-ಬೆಲ್ಲ ಹಂಚುವ ಪರಿಪಾಠವಿದ್ದವರು ಅಲ್ಲಿಯೇ ತಂದು ಮೊದಲು ಹಂಚಬೇಕು.

ದಿ. 14 ಬಸವ ಧರ್ಮ ಸಂಸ್ಥಾಪನೆಯಾದ ದಿನ ಮತ್ತು ಶ್ರೀ ಸಿದ್ಧರಾಮೇಶ್ವರರ ಜಯಂತಿ. ಆದ್ದರಿಂದ ಅಂದು ಗಣ ದಾಸೋಹ ಮಾಡುವುದು ಅತ್ಯಂತ ಪವಿತ್ರ ಕಾರ್ಯ. ಆದ್ದರಿಂದ ತಪ್ಪದೆ ಸಮುದಾಯ ಪ್ರಾರ್ಥನೆ-ವಚನ ಪಠಣ-ಪ್ರಸಾದ ದಾಸೋಹ ಏರ್ಪಡಿಸಿ ಎಲ್ಲರೂ ಭಾಗಿಗಳಾಗಬೇಕೆಂದು ಸೂಚಿಸುತ್ತೇವೆ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಊಟದ ತಟ್ಟೆ - ಲೋಟಗಳ ದಾನ

ಶರಣ ಮೇಳವು ಪ್ರಾರಂಭವಾದ ನಂತರ ಕಾರ್ಯಕ್ರಮದಲ್ಲಿ ಅಗತ್ಯವಿದೆ ಎಂದು ತಿಳಿಸಲು ಅನೇಕ ಊರುಗಳ ಶರಣ ಬಂಧುಗಳು ಊಟದ ತಟ್ಟೆಗಳನ್ನು ದೇಣಿಗೆಯಾಗಿ ಕೊಟ್ಟಿದ್ದರು. ಹೀಗೆ ತಟ್ಟೆಗಳನ್ನು ಕೇಳಿ ಪಡೆದು 12 ವರ್ಷಗಳ ಮೇಲಾಯಿತು. ಈ ಅವಧಿಯಲ್ಲಿ ಸಾಕಷ್ಟು ತಟ್ಟೆಗಳು ಸವೆದಿವೆ, ಕಳೆದಿವೆ. ಗಣ ದಾಸೋಹದಲ್ಲಿ ಭಾಗಿಗಳಾಗುವ ಶರಣರ ಸಂಖ್ಯೆ ಸಾಕಷ್ಟು ಹೆಚ್ಚಾಗಿದೆ. ಈಗಿರುವ ತಟ್ಟೆಗಳು ಸಾಲದೆ ಶರಣ ಮೇಳದಲ್ಲಿ ಬಾಡಿಗೆಗೆ ತೆಗೆದುಕೊಳ್ಳಲಾಗುತ್ತಿದೆ. ಆದ್ದರಿಂದ, ಹನಿ ಹನಿ ಕೂಡಿದರೆ ಹಳ್ಳ ಎಂಬ ತತ್ತ್ವದಂತೆ ಶರಣ ಬಂಧುಗಳು ತಮ್ಮ ತಟ್ಟೆಯನ್ನು ಜೊತೆಗೆ ಒಂದು ಲೋಟವನ್ನು ತಂದು ಶರಣ ಮೇಳದಲ್ಲಿ ತಾವೇ ಉಪಯೋಗಿಸಿ ಹೋಗುವಾಗ ದೇಣಿಗೆಯಾಗಿ ಕೊಟ್ಟು ಹೋದರೆ ಬಹಳ ಅಭಿನಂದನೀಯವಾಗುತ್ತದೆ. ಜೊತೆಗೆ ತಮ್ಮ ಶಕ್ತ್ಯಾನುಸಾರ ಹೆಚ್ಚಿನ ಸಂಖ್ಯೆಯಲ್ಲಿಯೂ ತಂದು ತಟ್ಟೆ, ಲೋಟಗಳನ್ನು ದೇಣಿಗೆಯಾಗಿ ಕೊಡಬಹುದು. 10 ಅಂಗುಲಕ್ಕಿಂತ ಕಡಿಮೆ ಅಗಲ ಇರಬಾರದು. 12 ಅಂಗುಲ ಅಳತೆ ಹೆಚ್ಚು ಉಪಯುಕ್ತ.

ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ.

ಶರಣ ಮೇಳಕೆ ಬಂದು, ಶರಣರೊಡನೆ ಆಡಿ, ಬಸವ ಧರ್ಮದ ಕಿರಣ ನೀನಾಗಿ ಸಾಗು

ಶರಣ ಮೇಳ - 2002, ಕಾರ್ಯಕ್ರಮದ ಸಂಕ್ಷಿಪ್ತ ಪಟ್ಟಿ

ಮಾತೃ(ಶುಕ್ರ)ವಾರ ದಿ. 11-1-2002

1. ಚಿಂತನಗೋಷ್ಠಿ ಉದ್ಘಾಟನೆ — ಬೆಳಿಗ್ಗೆ 10-30
2. ಧಾರ್ಮಿಕ ರಸಪ್ರಶ್ನೆ — ಮಧ್ಯಾಹ್ನ 3 ರಿಂದ 6
3. ಚಿಂತನಗೋಷ್ಠಿ - 2 — ಸಂಜೆ 6-30 ರಿಂದ 9

ಶರಣ(ಶನಿ)ವಾರ. ದಿ. 12-1-2002

4. ಶರಣ ಮೇಳ ಉದ್ಘಾಟನೆ — ಬೆಳಿಗ್ಗೆ 10-30
5. ಚಿಂತನಗೋಷ್ಠಿ - 3 — ಮಧ್ಯಾಹ್ನ 3-30
6. ಯೋಗ ಕುರಿತು ಉಪನ್ಯಾಸ ಮತ್ತು ಯೋಗಾಸನ ಪ್ರದರ್ಶನ — ಸಂಜೆ 6-30

ದೇವ(ಭಾನು)ವಾರ. ದಿ. 13-1-2002

7. ಬಸವ ಧರ್ಮ ಪೀಠಾರೋಹಣ — ಬೆಳಿಗ್ಗೆ 10-30
8. ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಬಸವೇಶ್ವರ ಪೂಜಾವ್ರತ ಪ್ರಾತ್ಯಕ್ಷಿಕೆ — ಸಂಜೆ 6-30

ಶಿವ(ಸೋಮ)ವಾರ. ದಿ. 14-1-2002

9. ಧ್ವಜಾರೋಹಣ - ಗುರುವಂದನ — ಬೆಳಿಗ್ಗೆ 10-00
10. ಗಣಲಿಂಗ ದರ್ಶನ — ಬೆಳಿಗ್ಗೆ 10-30
11. ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣ — ಬೆಳಿಗ್ಗೆ 11-00
12. ಅನುಭವ ಗೋಷ್ಠಿ — ಸಂಜೆ 6-00

ಬಸವ(ಮಂಗಳ)ವಾರ. ದಿ. 15-1-2002

13. ಗುರುದರ್ಶನ - ಬಸವ ಧರ್ಮ ಪೀಠಾಧಿಕಾರಿಗಳಿಂದ ಶರಣ ವ್ರತಿಗಳಿಗೆ ಪ್ರಮಾಣ ಪತ್ರ ವಿತರಣೆ — ಬೆಳಿಗ್ಗೆ 10-00
14. ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳ ಸಭೆಯಲ್ಲಿ ಚಿಂತನ ಮಂಥನ

ವಿ.ಸೂ. ಪ್ರತಿ ನಿತ್ಯ ಸಾಮೂಹಿಕ ಇಷ್ಟಲಿಂಗಾರ್ಚನೆ : ವಿಶ್ವ ಚೇತನದ ಪ್ರತೀಕವಾದ ಇಷ್ಟಲಿಂಗಾರ್ಚನೆ, ತ್ರಾಟಕ ಯೋಗಗಳ ಅಭ್ಯಾಸವನ್ನು ಬೆಳಗ್ಗೆ 7-30 ರಿಂದ 9 ರವರೆಗೆ ದಿ. 12,13,14 ಮತ್ತು 15 ರಂದು ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳು ಮಾಡಿಸಲಿರುವರು.

ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಗಳಿಗಿಂತ ಕರಕಷ್ಟ ಲಿಂಗದೇವಾ. - ವಿಶ್ವಗುರು ಬಸವಣ್ಣ

ಶರಣ ಮೇಳದ ಚಿಂತನಗೋಷ್ಠಿಯಲ್ಲಿ ಚರ್ಚಿಸಲಾಗುವ ವಿಷಯಗಳು

1. ''1996 ನೆಯ ಇಸವಿಯಲ್ಲಿ ಶರಣ ಮೇಳದಲ್ಲಿ ಪಾದನಮಸ್ಕಾರ ನಿಷೇಧಿಸಬೇಕು'' ಎಂಬ ಬಗ್ಗೆ ಘೋಷಿಸಲಾಯಿತು ಅಷ್ಟೇ ಅಲ್ಲ ಈ ಬಗ್ಗೆ ಪುಸ್ತಕ ಸಹ ಬರೆಯಲಾಯಿತು. ಆದರೆ ಇದು ಆಚರಣೆಗೆ ಬರಲಿಲ್ಲ ''ಲಿಂಗದೇವ'' ವಚನಾಂಕಿತ ಅಳವಡಿಸಿಕೊಳ್ಳುವುದಕ್ಕಿಂತಲೂ ಪಾದಪೂಜೆ, ಪಾದನಮಸ್ಕಾರ ಬಿಡುವುದು ಬಹಳ ಜನರಿಗೆ ಕಷ್ಟವೆನಿಸಿದೆ. ಆದ್ದರಿಂದ ಈ ದಿಶೆಯಲ್ಲಿ ಪುನರ್ ಪರಿಶೀಲನೆ ಅತ್ಯಗತ್ಯವೆನಿಸಿ ಚಿಂತನ ಗೋಷ್ಠಿಯಲ್ಲಿ ಚರ್ಚಿಗಿಡಲಾಗುವುದು. ಈ ಬಗ್ಗೆ ಶರಣ. ಮಲ್ಲಿಕಾರ್ಜುನ ಡೊಣಗಾಪುರೆ, ಭಾಲ್ಕಿ ಅವರು ಪತ್ರ ಬರೆದಿದ್ದಾರೆ. ಚರ್ಚಿಸಿ, ನಿರ್ಣಯಕ್ಕೆ ಬರಲಾಗುವುದು.
2. ಲಿಂಗಾಯತ ಧರ್ಮಿಯು ಪಠಸಬೇಕಾದ ಮಂತ್ರಗಳು ಯಾವುವು ? ಓಂ ನಮಃ ಶಿವಾಯ, ಓಂ ಲಿಂಗಾಯನಮಃ ಎಂಬ ಷಡಕ್ಷರ ಮಂತ್ರದಲ್ಲಿ ಯಾವುದು ಸೈದ್ಧಾಂತಿಕವಾಗಿ ಸೂಕ್ತ ?
3. ''ಲಿಂಗಾಯತ'' ಎಂಬ ಧಾರ್ಮಿಕ ಹೆಸರು ಬಂದಿರುವುದೇ ಲಿಂಗಧಾರಣೆಯಿಂದ. ಕೆಲವರು, ಉದಾಹರಣೆಗೆ ಆಟಗಾರರು, ಚಿತ್ರ ನಟರು, ಕೆಲವೊಂದು ಉದ್ಯೋಗಿಗಳು ಲಿಂಗದೀಕ್ಷೆ ಪಡೆದುಕೊಂಡು ದಿನ ನಿತ್ಯ ಪೂಜೆ ಮಾಡಿದರೂ ಸಹ ಪೂಜೆ ಮಾಡಿದ ಮೇಲೆ ಇಷ್ಟಲಿಂಗವನ್ನು ಎತ್ತಿ ಇಡಲು ಅಂದರೆ ಧರಿಸದೆ ಇರಲು ಅಧಿಕೃತವಾಗಿ ಅನುಮತಿ ನೀಡಬೇಕೆಂದು ಕೋರುತ್ತಿದ್ದಾರೆ. ಈ ಬಗ್ಗೆ ಶರಣರ ಸಭೆ ಚಿಂತನೆ ನಡೆಸಬೇಕು.
4. ಲಿಂಗಾಯತ ಧರ್ಮೀಯರು ವಚನ ಸಾಹಿತ್ಯ ಸಂವಿಧಾನದ ಆದೇಶದಂತೆ ಸ್ಥಾವರಲಿಂಗಗಳ ದೇವಾಲಯ ಕಟ್ಟಬಾರದು, ಪೂಜಿಸಬಾರದು. ಆದರೆ ತತ್ತ್ವವನ್ನು ತಿಳಿಯದ ಬಹುಪಾಲು ಜನ ಕಟ್ಟುತ್ತ ಬಂದಿರುವರು. ಅಂಥ ಶಿವದೇವಾಲಯಗಳು ಇಂದಿಗೂ ಲಿಂಗಾಯತರ ಶ್ರದ್ಧಾ ಕೇಂದ್ರಗಳಾಗಿರುವುದೇ ಅಲ್ಲದೆ ಸಮಾಜದ ಆಸ್ತಿಗಳಾಗಿವೆ. ಈಗ ಅವನ್ನು ಹೇಗೆ ಬಳಸಿಕೊಳ್ಳಬೇಕು ? ಪುರಸ್ಕರಿಸಬೇಕೋ ತಿರಸ್ಕರಿಸಬೇಕೋ ?
5. ಬಸವೇಶ್ವರ ದೇವಾಲಯಗಳು ಲಿಂಗಾಯತ ಸಮಾಜ ಇರುವಲ್ಲೆಲ್ಲ ಕಡ್ಡಾಯವಾಗಿವೆ. ಆದರೆ ಉಪಾಸ್ಯ ವಸ್ತುವಿನ ಸ್ಥಾನದಲ್ಲಿ ನಂದಿಯ ವಿಗ್ರಹ ಇಡುತ್ತಾ ಬರಲಾಗಿದೆ. ಅಂಥಲ್ಲಿ ಮಾನವಾಕಾರದ, ಅಭಯ ಮುದ್ರೆಯ ಗುರು ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಲು ಜನಜಾಗೃತಿ ಆಂದೋಲನವನ್ನು ಹೇಗೆ ಕೈಗೊಳ್ಳಬಹುದು ?
6. ಶರಣ ಸಂಸ್ಕೃತಿಯ ಚೌಕಟ್ಟಿನಲ್ಲಿ ವಾರಗಳ ಹೆಸರನ್ನು ಬದಲಾಯಿಸಲಾಗಿದೆ. ಭಾನು(ದೇವ)ವಾರ, ಸೋಮ(ಶಿವ)ವಾರ, ಮಂಗಳ(ಬಸವ)ವಾರ, ಬುಧ(ಚನ್ನ)ವಾರ, ಗುರು(ಪ್ರಭು)ವಾರ, ಶುಕ್ರ(ಮಾತೃ)ವಾರ, ಶನಿ(ಶರಣ)ವಾರ. ಈ ಬದಲಾವಣೆ ಕುರಿತು ಸಲಹೆಗೆ ಅವಕಾಶವಿದೆ.
7. ಶರಣರ ವಚನಾಂಕಿತಗಳು ವಿವಿಧ ಹಿನ್ನೆಲೆಯಿಂದ ಕೂಡಿವೆ. ಇವಕ್ಕೆ ಬದಲಾವಣೆ ಅಗತ್ಯವೆಂದು ಕೆಲವು ಶರಣ ಬಂಧುಗಳು, ಅಗತ್ಯವಿಲ್ಲ ವಿವರಣೆ ಸಾಕೆಂದು ಕೆಲವು

ಶರಣರು ಅಭಿಪ್ರಾಯ ಪಡುತ್ತಾರೆ. ಈ ಬಗ್ಗೆ ಮುಕ್ತ ಚರ್ಚೆ, ಅಭಿಪ್ರಾಯಗಳಿಗೆ ಅವಕಾಶವಿದೆ.

8. ಆದಿ ಶರಣರು ತ್ರಿಕಾಲ ಲಿಂಗಾರ್ಚನೆಯನ್ನು ಆಚರಿಸುತ್ತಿದ್ದರು. ಅಂದಿನ ಸಾಮಾಜಿಕ, ಧಾರ್ಮಿಕ ಪರಿಸರಕ್ಕೆ ಅನುಗುಣವಾಗಿ ಆ ಆಚರಣೆ ಸೂಕ್ತವಾಗಿತ್ತು. ಇಂದಿನ ಪರಿಸರದಲ್ಲಿ ತ್ರಿಕಾಲ ಲಿಂಗಾರ್ಚನೆ ಸಾಧ್ಯವೆ ? ದಿನಕ್ಕೆ ಎರಡು ಬಾರಿ ಕಡ್ಡಾಯಗೊಳಿಸಬೇಕೋ ? ಅಥವಾ ಒಂದು ಬಾರಿ ಕಡ್ಡಾಯಗೊಳಿಸಬೇಕೋ ?. ವಿವಿಧ ದೀಕ್ಷೆಗಳ ಮೂಲಕ ಒಪ್ಪೊತ್ತು, ಎರಡು ಹೊತ್ತು ಮೂರು ಸಲ ಇಷ್ಟಲಿಂಗಾರ್ಚನೆಯ ನೇಮ ವಿಧಿಸಬಹುದೆ ?

9. ಏಕದೇವೋಪಾಸನೆ, ಏಕಗುರೂಪಾಸನೆ ಅತ್ಯಂತ ಶ್ರೇಷ್ಠ ತತ್ತ್ವಗಳು ಸ್ಥಳೀಯವಾಗಿ ಅನೇಕ ಶರಣರು, ಶಿವಯೋಗಿಗಳು, ಲಿಂಗೈಕ್ಯರಾದ ಗದ್ದುಗೆಗಳು ಇರುತ್ತವೆ. ಅವುಗಳ ಸಂರಕ್ಷಣೆ, ಪೂಜೆ ಹೇಗೆ ಇರಬೇಕು ? (ಶರಣಾಲಯ ಎಂಬ ಒಂದು ಪುಸ್ತಕ ಬರೆದು ಪ್ರಕಟಿಸಲಾಗಿದೆ. ಇದನ್ನು ಓದಿದರೆ ಚಿಂತನೆಯಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ.

10. ಲಿಂಗಾಯತ ಧರ್ಮಾನುಯಾಯಿಗಳು ತಮ್ಮ ಧರ್ಮದ ಗಣಲಾಂಛನವಾದ ಇಷ್ಟಲಿಂಗ ಸಹಿತ ಷಟ್ಕೋನ(ಬಸವ ಲಿಂಗ ಮುದ್ರೆ)ವನ್ನು ಮಠ, ಮಂಟಪ, ಸಂಸ್ಥೆ, ಮನೆ, ವಾಹನ ಇತ್ಯಾದಿಗಳ ಮೇಲೆ ಬರೆಸುವಿಕೆ.

11. ಲಿಂಗಾಯತ ಧರ್ಮ-ಸಂಸ್ಕೃತಿಗೆ ಹೊರತಾದ ಯೋಗ, ಮಾರ್ಗಗಳನ್ನು ಅವಲಂಬಿಸುವಾಗ ವಹಿಸಬೇಕಾದ ಎಚ್ಚರ.

12. ಕೂಡಲ ಸಂಗಮ ಮತ್ತು ಬಸವ ಕಲ್ಯಾಣ ಲಿಂಗಾಯತ ಸಮಾಜದ ಎರಡು ಕಣ್ಣುಗಳಂತೆ. ಕೂಡಲ ಸಂಗಮವು ಧರ್ಮಪಿತರ ಐಕ್ಯ ತಾಣವಾದರೆ, ಬಸವ ಕಲ್ಯಾಣವು ಕಾರ್ಯಕ್ಷೇತ್ರ. ಸೂತ್ರಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದು ಬೇಡ. ಆದ್ದರಿಂದ 4ನೇಯ ಸೂತ್ರದಲ್ಲಿ ಸೇರಿಸಲು ಸಾಧ್ಯವಿದೆ. ಕೂಡಲ ಸಂಗಮವು ಧರ್ಮಕ್ಷೇತ್ರ. ಬಸವ ಕಲ್ಯಾಣವನ್ನು ಏನೆಂದು ಗೌರವಿಸಬಹುದು ? ಇದಕ್ಕೊಂದು ಸೂಕ್ತ ಪದವನ್ನು ಚಿಂತಿಸಿ, ಚಿಂತನ ಗೋಷ್ಠಿಯಲ್ಲಿ ಸೂಚಿಸಬಹುದು.

ಕಾರ್ಯಕ್ಷೇತ್ರ : ಬಸವ ಕಲ್ಯಾಣವು ಧರ್ಮಪಿತರ ಕಾರ್ಯಕ್ಷೇತ್ರ. ಆದರೆ ಅನುಯಾಯಿಗಳಿಗೆ ವಿಶೇಷ ಸ್ಥಾನ.

1. ಧರ್ಮಭೂಮಿ - ಬಸವ ಕಲ್ಯಾಣ
2. ಶರಣ ಭೂಮಿ - ಬಸವ ಕಲ್ಯಾಣ
3. ದಿವ್ಯ ಕ್ಷೇತ್ರ - ಬಸವ ಕಲ್ಯಾಣ
4. ಶ್ರದ್ಧಾ ಕೇಂದ್ರ - ಬಸವ ಕಲ್ಯಾಣ
5. ಪುಣ್ಯ ಕ್ಷೇತ್ರ - ಬಸವ ಕಲ್ಯಾಣ
6. ಶಕ್ತಿ ಕೇಂದ್ರ - ಬಸವ ಕಲ್ಯಾಣ

ಶರಣ ಬಂಧುಗಳು ಇನ್ನಾವುದೇ ಹೆಸರು ಸೂಚಿಸಬಹುದು. ಅಥವಾ ಇದರಲ್ಲಿ ಕಾಣಿಸಿರುವ ಒಂದನ್ನು ಅನುಮೋದಿಸಲೂಬಹುದು. ■

ಬಸವ ಕಲ್ಯಾಣದಲ್ಲಿ ಒಂದು ಸಮಾಗಮ ಶರಣ ಸಮಾಗಮ

ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರ ಬಸವ ಕಲ್ಯಾಣದಲ್ಲಿ ಕೂಡಲ ಸಂಗಮದ ಶರಣ ಮೇಳದಂತೆ ಒಂದು ಧಾರ್ಮಿಕ ಸಮಾವೇಶವನ್ನು ಏರ್ಪಡಿಸಲು ಬಯಸಿದ್ದು, ಶರಣ ಮೇಳದ ಚಿಂತನಗೋಷ್ಠಿಯಲ್ಲಿ ದಿ.11-12 ರಂದು ಈ ಬಗ್ಗೆ ವಿಸ್ತೃತ ಚರ್ಚೆಯು ನಡೆಯಲಿದೆ. ಈ ಬಗ್ಗೆ ಶರಣ ಬಂಧುಗಳಿಂದ ಸಲಹೆ, ಸೂಚನೆಗೆ ಆಹ್ವಾನವಿದೆ.

1. "ಶರಣ ಮೇಳ" ಅತ್ಯಂತ ಸುಂದರ, ಸಂಕ್ಷಿಪ್ತ ಅರ್ಥಗರ್ಭಿತ ಪದ. ಕೂಡಲ ಸಂಗಮದಲ್ಲಿ ಇದು ಪ್ರತಿವರ್ಷದ ಜನವರಿ 11 ರಿಂದ 15ರವರೆಗೆ ನಡೆಯುವುದು.

ಅದೇ ರೀತಿ ಒಂದೇ ಹೆಸರಿನಿಂದ ಬಸವ ಕಲ್ಯಾಣದಲ್ಲಿಯೂ ನಡೆಯಬೇಕು. ಹೀಗೆ ಕೆಲವೊಂದು ಹೆಸರು ಹೊಳೆದಿವೆ. ಇನ್ನೇನಾದರೂ ಹೊಳೆದರೆ ಸೂಚಿಸಲು ಶರಣರಿಗೆ ಅವಕಾಶ ಉಂಟು.

1. ಶರಣ ಸಮಾಗಮ

2. ಶರಣ ಸಂಗಮ

(ಈ ಪದವನ್ನು ವಾರದ ಸಾಮೂಹಿಕ ಪ್ರಾರ್ಥನೆಗೆ ಬಳಸಲಾಗುತ್ತಿದೆ)

3. ಗಣ ಪರ್ವ

(ಧರ್ಮಪಿತರೂ ಕಲ್ಯಾಣದಲ್ಲಿ ಗಣಪರ್ವಗಳನ್ನು ಏರ್ಪಡಿಸುತ್ತಿದುದಾಗಿ ಹರಿಹರ, ಸಿಂಗಿರಾಜ ಹೇಳಿದ್ದಾರೆ)

4. ಶರಣ ಪರ್ವ

(ಪರ್ವ ಎಂದರೆ ಹಬ್ಬ. ಶರಣ ಪರ್ವ ಎಂದರೆ ಶರಣರ ಹಬ್ಬ)

5. ಕಲ್ಯಾಣ ಸಂಗಮ **6. ಶರಣ ಕೂಟ**

7. ಗಣ ಮೇಳ

(ಈ ಪದವನ್ನು ಶಿವರಾತ್ರಿಯಂದು ಸ್ಥಳೀಯವಾಗಿ ನಡೆಸುವ ಸಮುದಾಯ ಪ್ರಾರ್ಥನೆಗೆ)ಬಳಸಲಾಗುತ್ತಿದೆ.

8. ಕಲ್ಯಾಣ ಪರ್ವ **9. ಶರಣ ಗಣ ಪರ್ವ**

10. ಕಲ್ಯಾಣ ಜ್ಯೋತಿ **11. ಶರಣ ಸ್ಮರಣೆ**

2. ಸದ್ಯದಲ್ಲಿ ಏಪ್ರಿಲ್ 30, ಮೇ1 ಮತ್ತು ಮೇ2 ಎಂದು ದಿನಾಂಕಗಳನ್ನು ನಿಶ್ಚಯಿಸಲಾಗಿದೆ. ಶರಣ ಬಂಧುಗಳು ಬೇರೆ ದಿನಾಂಕಗಳನ್ನು ಸೂಚಿಸಿದರೆ ಚಿಂತನೆ ಮಾಡಲಾಗುವುದು.

ಕಾರ್ಯಕ್ರಮವು 3 ದಿನ ಇರಬೇಕೊ, 2 ದಿನ ಸಾಕೊ? ಎಂಬುದನ್ನು ಸಹ ಚಿಂತನೆ ಮಾಡಲಾಗುವುದು.

ಮಾತಾಜಿ

ಕಲ್ಯಾಣ ಕಿರಣದ ಪ್ರತಿಗಳು ಎರಡು-ಮೂರು ಬರುತ್ತಿದ್ದಲ್ಲಿ ಒಂದನ್ನು ಸ್ವೀಕರಿಸಿ ಉಳಿದವನ್ನು ಅಂಚೆ ಪೇದೆಗೆ ಮರಳಿಸಿರಿ ಅಥವಾ ಚಂದಾ ಸಂಖ್ಯೆಯೊಂದಿಗೆ ಪತ್ರ ಬರೆದು ತಿಳಿಸಿರಿ.

ರಾಷ್ಟ್ರೀಯ ಬಸವ ದಳ ಸಂಘಟನೆ ಕುರಿತು ವಿಶೇಷ ಸಭೆಗಳು

ಕೂಡಿದರು ಹುರುಪಿನಲಿ ನಾಡಬಲ್ಲಿದರೆಲ್ಲ
ಸೂಡ ಕಟ್ಟಿದರು ಶಿವನುಡಿಯ। ಕಾಯಕದ
ಗೂಡಾತು ಲೋಕ ಜನ ಹಿಗ್ಗಿ ॥

ಶರಣ ಮೇಳಕ್ಕೆ ಆದಮ್ಯ ಉತ್ಸಾಹದಿಂದ ಶರಣಸಮೂಹ ಹರಿದು ಬರುತ್ತಿರುವದು, ತಮ್ಮ ಬದುಕಿನಲ್ಲಿ ಮತ್ತೆ ಧರ್ಮದ ಹೊಂಗನಸು ಚಿಗುರಿ, ನಾಡಿನಾದ್ಯಂತ ಇದ್ದ ಬಲ್ಲಿದರು, ವಿಚಾರಶೀಲರು ಉತ್ಸಾಹದಿಂದ ಒಂದು ಕಡೆ ಸಮಾವೇಶವಾಗುವುದು. ಶರಣ ಧರ್ಮದ ಚಿಂತನೆಗೆ ವಚನ ಸಾಹಿತ್ಯದ ಒಂದೊಂದು ಸಾಲಿಗೂ ಆಚರಣೆಯ ಕಟ್ಟನ್ನು ಇಟ್ಟು ನಡೆಯುವ ಭಕ್ತಿಯ ಬೀಡು. ತತ್ತ್ವದ ಗೂಡಾಗಿ ಹೊರಚೆಲ್ಲಿ ನಾಡೊಳಗೆ ಬಸವ ಸುಧೆಯನುಂಡು ತೇಗಿದ ಹಿಗ್ಗು.

ಆದಿ ಶರಣರ ಸಂಕಲ್ಪದಂತೆ, " ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ" ಎಂಬುದಾಗಿ, ಬಸವ ಸಂತಾನ ಪೂಜ್ಯ ಅಪ್ಪಾಜಿ, ಪೂಜ್ಯ ಮಾತಾಜಿಯವರು ಶ್ರಮ ಪಟ್ಟು ಕಟ್ಟಿದ ಬಸವನಾಡು ಇಂದು ರೂಪತಳೆದು ನಿಂತಿದೆ. ಕಳೆಕಿತ್ತು ಹಸನಮಾಡಿ, ಸುಳಿದೆಗೆದು ಬೆಳೆಸಿದ ಬಸವ ಭಕ್ತಿಯನು ನೋಡಲು ಎರಡು ಕಣ್ಣು ಸಾಲವು. ಸುವ್ಯವಸ್ಥಿತವಾಗಿ, ಅನ್ನದಾಸೋಹ, ಜ್ಞಾನದಾಸೋಹಗಳಿಂದ ತನು ಮನಗಳನ್ನು ತಣಿಯುವಂತೆ ಸತತ ಐದು ದಿನಗಳ ಕಾಲ ನಡೆಯುವ ಶರಣ ಮೇಳಕ್ಕಾಗಿ ಹಾತೊರೆದು ಬರುವ ಶರಣ ಸಮೂಹ, ತವರುಮನೆಗೆ ಮೊದಲ ಸಲ ಹೋಗುವ ಹೆಣ್ಣುಮಗಳ ಸಂಭ್ರಮ ಪ್ರತಿಯೊಬ್ಬ ಶರಣ ಜೀವಿಗಳಲ್ಲಿ, ನಾಡಿನಾದ್ಯಂತ ರಾಷ್ಟ್ರೀಯ ಬಸವದಳಗಳು ಹುಟ್ಟಿ, ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು, ಬೆಳೆಸಿಕೊಂಡು ನಡೆಯುತ್ತಲಿರುವ ಕುರುಹಾಗಿ ಪ್ರತಿ ವರ್ಷವೂ ಶರಣಮೇಳವು ಯಶಸ್ಸಿನ ಒಂದೊಂದೆ ಮೆಟ್ಟಲನ್ನು ಏರಿ ವಿಜಯಪತಾಕೆಯನ್ನು ಹಾರಿಸುತ್ತ ನಡೆದಿದೆ. ಈ ರಾಷ್ಟ್ರೀಯ ಬಸವದಳಗಳು ಕೆಲವಾರು ಸಾರಿಯಾದರೂ ಒಂದು ಕಡೆ ಕೂಡಿ ಧರ್ಮಜಾಗೃತಿ ಮತ್ತು ಸಂಘಟನೆಯ ಅವಶ್ಯಕ ಸೂತ್ರಗಳನ್ನು ಅಳವಡಿಸಿ ಆಚರಣೆಗೆ ತರುವ ಕ್ರಮಗಳ ಬಗ್ಗೆ ಚರ್ಚೆ ಅವಶ್ಯವಿರುವುದರಿಂದ ಬರುವ ಶರಣ ಮೇಳದಲ್ಲಿ ಪ್ರತಿದಿನವೂ ರಾಷ್ಟ್ರೀಯ ಬಸವದಳಗಳ ಪದಾಧಿಕಾರಿಗಳು ಒಂದು ಗಂಟೆಕಾಲ ಬೆಳಿಗ್ಗೆ 8-9 ಸಮಯಕ್ಕೆ ಕೂಡಿ ವಿಷಯುಗಳನ್ನು ಚಿಂತನೆಮಾಡಿ ನಿರ್ಧಾರ ಮಾಡುವದು, ಪ್ರತಿಯೊಂದು ರಾಷ್ಟ್ರೀಯ ಬಸವ ದಳವನ್ನು ಸೂತ್ರೀಕರಿಸಿ ಅವರ ಮುಂದಿನ ಹೆಜ್ಜೆಗೆ ಸರಿಯಾದ ಮಾರ್ಗವನ್ನು ಸೂಚಿಸುವ ಕ್ರಮ ಅತಿ ಅವಶ್ಯವಿದ್ದ ಕಾರಣ ದಿನಾಂಕ 10-1-2002 ರ ರಾತ್ರಿ 8-9 ಗಂಟೆವರೆಗೆ ನಡೆಯುವ ಸಭೆಗೆ ಎಲ್ಲ ರಾಷ್ಟ್ರೀಯ ಬಸವದಳಗಳ ಮತ್ತು ಲಿಂಗಾಯತ ಧರ್ಮ ಮಹಾಸಭಾದ ಪದಾಧಿಕಾರಿಗಳು ತಮ್ಮ ತಮ್ಮ ಘಟಕದ ಪದಾಧಿಕಾರಿಗಳ ಪಟ್ಟಿಯೊಂದಿಗೆ ಹಾಜರಾಗಿ, ದಾಖಲೆಯ ಪುಸ್ತಕದಲ್ಲಿ ತಮ್ಮ ದಾಖಲಾತಿ ಮಾಡಿಕೊಂಡು ಪ್ರತಿ ದಿನದ ಸಭೆಗೆ ತಪ್ಪದೆ ಹಾಜರಾಗತಕ್ಕದ್ದು.

(ವೀರಣ್ಣ ಎ. ಕೊರ್ಲಳ್ಳಿ)
ಕಾರ್ಯಾಧ್ಯಕ್ಷ , ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ, ಬೆಂಗಳೂರು

ವಿ.ಸೂ: ಪ್ರತಿಯೊಂದು ರಾಷ್ಟ್ರೀಯ ಬಸವ ದಳಗಳಿಂದ ಕನಿಷ್ಟ 5 ಜನ ಶರಣರನ್ನು ಸೇವಾ ಕಾರ್ಯಕ್ಕಾಗಿ ಜನವರಿ 5 ರೊಳಗಾಗಿ ಕೂಡಲ ಸಂಗಮಕ್ಕೆ ಕಳಿಸಬೇಕಾಗಿ ವಿನಂತಿ.

ರಂಗನ ತಿಟ್ಟು - ಕೂಡಲ ಸಂಗಮವು

ಏನಿದೇನಿದು ಬಲು ವಿಚಿತ್ರ ಹೋಲಿಕೆಯು
ಒಂದೊಮ್ಮೆ ಆಲೋಚಿಸಿದರೆ ಸತ್ಯ-ಸಂಗತಿಯ ಗೋಚರಿಕೆಯು
ರಂಗನ ತಿಟ್ಟಿನಲ್ಲಿದೆ ವಿಶ್ವ-ಪ್ರಸಿದ್ಧ ಪಕ್ಷಿಧಾಮವು
ಕೂಡಲ ಸಂಗಮದಲ್ಲಿದೆ ವಿಶ್ವದ-ಏಕೈಕ ಬಸವ ಧರ್ಮ ಪೀಠವು
ಹಿಂಡು ಹಿಂಡಾಗಿ ಬಂದು ಸೇರುವಲ್ಲಿ ವಿವಿಧೆಡೆಗಳಿಂದ ವಿಧ-ವಿಧದ ಪಕ್ಷಿಗಳು
ತಂಡೋಪತಂಡವಾಗಿ ಬಂದು ಸೇರುವರಿಲ್ಲಿ ನಾಡಿನೆಲ್ಲೆಡೆಯ ಶರಣ-ಬಂಧುಗಳು
ಕಾವೇರಿ ತೀರದ ವೃಕ್ಷ ವೃಂದವೇ ಪಕ್ಷಿಗಳಿಗೆಲ್ಲ ಆಶ್ರಯ-ತಾಣವು
ಕೃಷ್ಣೆ ಮಲಪ್ರಭೆಯ ತೀರದ ಬಸವ ಮಹಾಮನೆಯು ಶರಣ-ಬಳಗಕ್ಕೆ ಆಶ್ರಯ ಧಾಮವು
ನದಿಯ ತೀರದ ಹುಳ ಹುಪ್ಪಡಿ, ತಿಳಿಯ ನೀರು ಪಕ್ಷಿಗಳ ಆಹಾರವು
ಬಸವ ಪ್ರಸಾದದೊಡನೆಯೆ, ಶರಣ ವೃಂದಕ್ಕೆ ವಚನ ಸಾಹಿತ್ಯದ ಜ್ಞಾನದಾಹಾರವು
ಪಕ್ಷಿಗಳ ಚಿಲಿ-ಪಿಲಿ ಕಲರವದಲಿ ಉಭಯ-ಕುಶಲೋಪರಿಯ ವಿವರಣೆಯು
ಶರಣ-ಬಂಧುಗಳ ಪರಸ್ಪರ ಭೇಟಿಯಲಿ ಉಭಯ ಕುಶಲೋಪರಿಯ ವಿಚಾರಣೆಯು
ಗಿಡದಿಂದ ಗಿಡಗಳಿಗೆ ಪಕ್ಷಿಗಳ ಸಂತಸದ ನೆಗೆದಾಟ-ಹಾರಾಟ ನಯನ ಮನೋಹರ
ಸದಾ ಕಾರ್ಯನಿರತ ಶರಣ ಬಂಧುಗಳ ಅತ್ತಿಂದಿತ್ತ ಓಡಾಟ ನೋಡಲು ಬಲು ಸುಂದರ
ಪುಟ್ಟ ಪುಟ್ಟ ಗೂಡು ಕಟ್ಟಿ ನವಜಾತ ಮರಿಗಳ ಲಾಲನೆ-ಪಾಲನೆ ನಡೆವುದು ಪಕ್ಷಿಗಳಲಿ
ಸಂಘಟನೆಯಿಂ ಧರ್ಮದೆಳೆಯ ಚಿಂತನೆಯು ನಡೆವುದು ಧರ್ಮ-ಬಂಧುಗಳಲಿ
ಮುಂದೊಂದು ದಿನ ಮರಿಗಳೊಂದಿಗೆ ಬಾನಂಗಳಕ್ಕೆ ಹಾರುವವು ಪಕ್ಷಿಗಳು
ಧರ್ಮದ ಸಂರಕ್ಷಣೆ ವಿಸ್ತರಣೆಯ ಹೊಸ ಯೋಜನೆಗಳೊಂದಿಗೆ
ತಮ್ಮೂರಿಗೆ ಹೋಗುವರು ಶರಣ ಬಂಧುಗಳು
ಮತ್ತೊಮ್ಮೆ ಮಗದೊಮ್ಮೆ ಸೇರುವೆವೆಂಬ ಹೊಸ ಹುರುಪು ಉತ್ಸಾಹ ಪಕ್ಷಿಗಳಿಗೆಲ್ಲ
ಪ್ರತಿ ವರುಷ ಶರಣ ಮೇಳಕ್ಕೆ ಬಂದೇ ಬರುತ್ತೇವೆಂಬ
ಮನೋಭಿಲಾಷೆ ಶರಣ ಬಂಧುಗಳಿಗೆಲ್ಲ !

ರಚನೆ : ಶೈಲಾ ಅಶೋಕ ಇಟ್ನಾಳ, ಬನಹಟ್ಟಿ

ವಚನ ಕಿರಣ

ಬ-ಎಂದು ಭಕ್ತಿಯಲಿ ಸುರಿದಳು ಮಾತೆ ಭಕ್ತಿ ನುಡಿಗಳ
ಸ-ಎಂದು ಸತ್ಯವ ಹರಡಿ ಹೋರಾಡಿದಳು ಮಾತೆ ದಿಟ್ಟತನದಿ
ವ-ಎಂದು ವಂಚಿಸುವವರ ಗೆಲಿದಳು ಮಾತೆ ಚಾಣಾಕ್ಷತನದಿ
ಈ ತ್ರಿವಿಧಾಕ್ಷರವ ಜಪಿಸಿ ಜಯಶಾಲಿಯಾದಳು ಮಾತೆ
ಮಾತಿನ ಕಲೆಯಿಂ, ಲೀಲಾವಿಶೇಷ ಲಿಂಗದೇವನ ಬಲದಿಂ.

ಮಹಾದೇವಿಯಕ್ಕ, ಧಾರವಾಡ

ಬಾ ತಮ್ಮಾ ಯಾತ್ರೆ ಮಾಡು

ಯಾತ್ರೆ ಮಾಡು ತಮ್ಮಾ
ಒಮ್ಮೆ ಕ್ಷೇತ್ರ ನೋಡು ತಮ್ಮಾ ॥ಪ॥
ಜೀವಿತ ಅವಧಿಯು ತೀರುವ ಮುನ್ನ
ಕೂಡಲ ಸಂಗಮ ಕ್ಷೇತ್ರಕೆ ಒಮ್ಮೆ । ಯಾತ್ರೆ ಮಾಡು ತಮ್ಮಾ ॥ಅ.ಪ॥
ಜೀವನವೆಂಬುದು ಶಾಶ್ವತವೇನು ?
ಕರೆದರೆ ಅವನು ಹೋಗೋದಿಲ್ಲೇನು ?
ಹೋಗುವ ಮುನ್ನ ನೀ ಮಾಡಿದೆ ಏನು ?
ಹೋಗಿ ನೋಡಿ ನೀ ಪಾವನನಾಗು । ಯಾತ್ರೆ ಮಾಡು ತಮ್ಮಾ॥ ॥1॥
ವಿಶ್ವಮಾನ್ಯಗುರು ಬಸವೇಶ್ವರರು
ತಪಸ್ಸು ಮಾಡಿದ ತಪೋಭೂಮಿಯದು
ಆವಿಷ್ಕಾರದಿ 'ಲಿಂಗದೇವ'ನನು ನೀಡಿ
ಸಮಾನತೆ ಸಾರಿಹ ನಾಡಿನಾ । ಯಾತ್ರೆ ಮಾಡು ತಮ್ಮಾ॥ ॥2॥
ಶರಣರ ಒಂದೆಡೆ ಸಮಾವೇಶಕೆ
ಶರಣ ಮೇಳವು ಶರಣರ ಕೂಟಕೆ
ಮಹಾಮನೆ ಮಹಾಮಠವಾಗಿಹ ತಾಣಕೆ
ಮಹಾ ಜಗದ್ಗುರು ಮಾತೆ ದರ್ಶನಕೆ । ಯಾತ್ರೆ ಮಾಡು ತಮ್ಮಾ॥ ॥3॥
ವರ್ಷಕ್ಕೊಮ್ಮೆ ಸಂಕ್ರಾಂತಿಯಂದು
ವ್ರತವಿಡಿದೆಲ್ಲರೂ ತಪ್ಪದೆ ಬಂದು
ತತ್ತ್ವವ ಸವಿದು ಧರ್ಮವ ಅರಿತು
ನಿತ್ಯವೂ ಜೀವನ ಪಾವನ ಗೈಯಲು । ಯಾತ್ರೆ ಮಾಡು ತಮ್ಮಾ॥ ॥4॥
ಶರಣರ ಕೂಡೆ ಸಂಗಮ ನೋಡು
'ಗಣಲಿಂಗ' ದೇವನ ದರ್ಶನ ಮಾಡು
ಗುರು, ಲಿಂಗ, ಜಂಗಮ ಸೇವೆಯ ಮಾಡು
ಮರೆಯದೆ ತನು, ಮನ, ಧನವನ್ನು ನೀಡು ।ಯಾತ್ರೆ ಮಾಡು ತಮ್ಮಾ॥ ॥5॥

ರಚನೆ : ಶರಣ. ಎಸ್.ಜಿ. ಬಸವರಾಜು, ಎಸ್.ಕೊಪ್ಪಲು
ಕಾರ್ಯಾಧ್ಯಕ್ಷರು, ರಾ.ಬ.ದ , ಚಿಕ್ಕಮಗಳೂರು ಜಿಲ್ಲೆ.

ವಚನಾಮೃತ

ಆಡುವುದು ಪಾಡುವುದು ಹೇಳುವುದು ಕೇಳುವುದು
ಸರಸ ಸಮ್ಮೇಳನವಾಗಿಪ್ಪುದಯ್ಯ
ಚೆನ್ನಮಲ್ಲಿಕಾರ್ಜುನಯ್ಯ ನೀ ಕೊಟ್ಟ ಆಯುಷ್ಯ ಉಳ್ಳನ್ನಕ್ಕ
ಲಿಂಗಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನು. - ಅಕ್ಕಮಹಾದೇವಿ ವಚನ

ಕದಳಿ ಪ್ರವಾಸ-ಡಿಸೆಂಬರ್ ಸಂಚಿಕೆಯಿಂದ ಮುಂದುವರೆದದ್ದು

ಆದರೆ ಈಗ ಬಹಳಷ್ಟು ದೂರ ನಡೆಯ ಬೇಕಿಲ್ಲ, ಬರಿ ನಾಲ್ಕು ಕಿ.ಮಿ. ನಡೆದರೆ ಕದಳಿ ಸಿಕ್ಕ ಹಾಗೆಯೇ. ಈಗ ನಾವು ಶ್ರೀಶೈಲದಿಂದ ನಮ್ಮ ವಾಹನಗಳಲ್ಲಿ ಶ್ರೀಶೈಲ ಜಲ ವಿದ್ಯುತ್ ಅಣೆಕಟ್ಟನ್ನು (Sri Shailam Hydro Electric Project) ಬಳಸಿಕೊಂಡು ಅಣೆಕಟ್ಟೆಯ ಕೆಳಭಾಗದಲ್ಲಿರುವ ಸೇತುವೆಯನ್ನು ಹಾದು ಮೀನುಗಾರಿಕಾ ಬಂದರಿನಲ್ಲಿ ಇಳಿದು ಅಲ್ಲಿಯೇ ಬೆಳಗಿನ ಉಪಾಹಾರ (ಶ್ರೀಶೈಲದಲ್ಲಿ ಮಾಡಿಸಿ ತಂದ) ಮುಗಿಸಿ ಯಾಂತ್ರಿಕ ದೋಣಿಗಳು ಬರುವುದನ್ನೆ ಕಾಯುತ್ತಿದ್ದಂತೆ, ಯೋಜನೆಯ ಹಿನ್ನೀರಿನಲ್ಲಿ(Water spread) ದೂರದಲ್ಲಿ ಕರಿಚುಕ್ಕೆಯಾಕಾರದಲ್ಲಿ ಬರುತ್ತಿದ್ದ ದೋಣಿ ಹತ್ತಿರ ಬರುತ್ತಿದ್ದಂತೆ ನಮ್ಮ ಶರಣರಲ್ಲಿ ಗಡಿಬಿಡಿ ಜಾಸ್ತಿಯಾಯ್ತು. ಮೀನುಗಾರಿಕೆ ಬಂದರು ಎಂದರೆ ಕಟ್ಟಡ ಮಾಡಿ ಕಟ್ಟಿದ ಬಂದರೇನಲ್ಲ ಅದೊಂದು ಕಚ್ಚಾ ಬಂದರು, ದೋಣಿಯೊಳಗೆ ಹತ್ತಲು ಇಳಿಯಲು ಒಂದು ಸಮತಟ್ಟಾದ ಜಾಗ ಅಷ್ಟೆ. ರಸ್ತೆಯಿಂದ ಈ ಜಾಗಕ್ಕೆ ಇಳಿಯುವುದೆ ಒಂದು ಪ್ರಯಾಸದ ಕೆಲಸ. ದೋಣಿ ಹತ್ತಿರ ಹತ್ತಿರ ಬಂದಂತೆ ಕರಿ ಚುಕ್ಕೆಯಾಕಾರದಂತೆ ಕಾಣುತ್ತಿದ್ದ ದೋಣಿ ಸ್ಫುಟವಾಗಿ ಕಂಡು ನಾವು ನಿಂತ ಜಾಗಕ್ಕೆ ಬಂದು ನಿಂತಿತು. ನಾ ಮುಂದು ತಾ ಮುಂದು ಎಂದು ಕೆಲವು ಅವಸರದ ಶರಣರು ದೋಣಿ ಏರಿ ಕುಳಿತರು, ದೋಣಿಯ ಸಾಮರ್ಥ್ಯ 35 ಜನ ಮಾತ್ರ, ಜಾಸ್ತಿಯಾದವರನ್ನು ಇಳಿಸಿ ದೋಣಿ ಮುಂದೆ ಸಾಗಿತು. ಹೀಗೆ ಒಂದರ ನಂತರ ಒಂದರಂತೆ ಮೂರು ದೋಣಿ 1-00 ತಾಸಿನ ಅಂತರದಲ್ಲಿ ನಮ್ಮನ್ನು ಕದಳಿಯ ಕಡೆಗೆ ಸಾಗಿಸಿತು. ಅವಸರದಲ್ಲಿ ಹತ್ತಿದ ಮೊದಲ ದೋಣಿ 10 ಕಿ.ಮಿ. ಪ್ರಯಾಣಿಸಿದ ನಂತರ ಯಂತ್ರ ಕೈಕೊಟ್ಟು ನೀರಿನ ಮಧ್ಯೆದಲ್ಲಿಯೇ ನಿಂತು ಅರ್ಧತಾಸಿನ ನಂತರ ಬಂದ ಇನ್ನೊಂದು ದೋಣಿಗೆ ಕಟ್ಟಿ ಎಳೆದೊಯ್ಯಲಾಯಿತು. ಹೀಗೆ ಹಿನ್ನೀರಿನಲ್ಲಿ ದೋಣಿಯಲ್ಲಿ ಪ್ರಯಾಣಿಸಿದ ದೂರ 15 ಕಿ.ಮಿ. ತೆಗೆದು ಕೊಂಡ ಕಾಲ 1 ತಾಸು. ಹೀಗೆ ಎಲ್ಲರನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ಕ್ರೋಢಿಕರಿಸಿ, ಎಲ್ಲರೂ ಬಂದಿದ್ದಾರೆ ಎಂದು ದೃಢೀಕರಿಸಿಕೊಂಡು ಮುಂದೆ ಕಾಲು ನಡಿಗೆಯಲ್ಲಿ ಪ್ರಯಾಣ ಪ್ರಾರಂಭಿಸಿದೆವು.

ಶ್ರೀಶೈಲ ಕ್ಷೇತ್ರದಿಂದ ಈಗಾಗಲೆ ಕ್ರಮಿಸಿದ ದೂರ, ವಾಹನದಲ್ಲಿ ಸುಮಾರು 20 ಕಿ.ಮಿ. ದೋಣಿಯಲ್ಲಿ 15 ಕಿ.ಮಿ. ಒಟ್ಟು 35 ಕಿ.ಮಿ. ದೂರವನ್ನು ಬಹಳ ಸರಾಗವಾಗಿ ಕ್ರಮಿಸಿದ್ದಾಯ್ತು. ಆದರೆ ಕಾಲು ನಡಿಗೆಯಲ್ಲಿ ಸವೆಸಿದ ದೂರ 4 ಕಿ.ಮಿ., ಬಹಳ ದುರ್ಗಮವಾದ ಕಾಲುದಾರಿ, ಅದರಲ್ಲೂ ಸುಮಾರು 1.5 ಕಿ.ಮಿ. ದೂರ, ಕಡಿದಾದ ಕಲ್ಲುಮುಳ್ಳುಗಳ ದಾರಿ. ಯುವಕರು, ಶಕ್ತಿವಂತರು, ಸಣ್ಣವಯಸ್ಸಿನ ಹುಡುಗರೇನೋ ಸರಾಗವಾಗಿ ಹತ್ತಿದರು. ಆದರೆ ಶರಣರಲ್ಲಿ ಅನೇಕರು ವೃದ್ಧರು ಈ 1.5 ಕಿ .ಮಿ. ದೂರದ ಕಡಿದಾದ ದುರ್ಗಮವಾದ ಕಲ್ಲು-ಮುಳ್ಳುಗಳಿಂದ ಕೂಡಿದ ದಾರಿಯನ್ನು ಸವೆಸಲು ಬಹಳ ಕಷ್ಟ ಪಡಬೇಕಾಯ್ತು, ಆದರೂ ಅವರಲ್ಲಿರುವ ಅಕ್ಕನ ಮೇಲಿರುವ ಆದಮ್ಯ ಭಕ್ತಿ, ಧರ್ಮಗುರು ಬಸವಣ್ಣನವರ ಮೇಲಿರುವ ನಿಷ್ಠೆ ಅವರ ಶಕ್ತಿಯನ್ನು ಇಮ್ಮಡಿಸುವಂತೆ ಮಾಡಿ ಅಲ್ಲಲ್ಲಿ ಕುಂತು, ನಿಂತು ಸುಧಾರಿಸಿಕೊಂಡು ಹತ್ತಿದ್ದೊಂದು ಪವಾಡವೆ ! ಮುಂದೆ ಸುಮಾರು 3 ಕಿ.ಮಿ. ದೂರ ಮಟ್ಟಸವಾದ ಭೂಮಿ ಬರೀ ಸಾಧಾರಣ ನಡಿಗೆ, ಆಯಾಸವೇನೂ ಆಗಲಿಲ್ಲ. ಬಹಳಷ್ಟು ಶರಣರು 5 ಘಂಟೆಗೆಲ್ಲಾ ಕದಳಿ ತಲುಪಿಯಾಗಿತ್ತು. ವಯಸ್ಸಾದ ಶರಣೆಯರು ನಿಧಾನವಾಗಿ

ದಾರಿ ಸವೆಸಿದ್ದರಿಂದ ಅವರೆಲ್ಲ ಬಂದು ಕದಳಿ ಸೇರಿದಾಗ ಮಬ್ಬುಗತ್ತಲೆಯಾಗಿತ್ತು. ಇಲ್ಲಿಯವರೆಗೆ, ಬಸ್ಸಿನಲ್ಲಿ, ದೋಣಿಯಲ್ಲಿ ಕುಳಿತು ಕಡಿದಾದ ಬೆಟ್ಟ ಏರಿ ಸಮತಟ್ಟಾದ ಭೂಮಿಯಲ್ಲಿ ನಡೆದು ಕದಳಿಯಿದ್ದಲ್ಲಿ ಬಂದೆವು. ಕದಳಿ ಗುಹೆ ಇದ್ದಲ್ಲಿಗೆ ಹೋಗ ಬೇಕಾದರೆ ಪ್ರಪಾತಕ್ಕೆ ಇಳಿದು, ಹತ್ತು ಹೆಜ್ಜೆ ಸಮತಟ್ಟಾದ ಇಕ್ಕಟ್ಟಾದ ದಾರಿಯಲ್ಲಿ ನಡೆದು ಇಳಿದು ಬಂದ ಅರ್ಧದಷ್ಟನ್ನು ಹತ್ತಿದರೆ ಗುಹೆಯೊಳಗೆ ಕಾಲಿಡುತ್ತೇವೆ, ಇಳಿದು ಹತ್ತುವುದೆಂದರೆ ಮಾನವ ನಿರ್ಮಿತ ಮೆಟ್ಟಲುಗಳೇನು ಅಲ್ಲ, ಸಣ್ಣ ದೊಡ್ಡ ಕಲ್ಲು ಬಂಡೆಗಳು ಒಂದಕ್ಕೊಂದು ಹೊಂದಿಕೊಂಡಿರುವ ಪ್ರಕೃತಿ ನಿರ್ಮಿತ ಹಾದಿ ಅಷ್ಟೆ, ಇಳಿಯುವುದು ಹತ್ತುವುದು ಒಂದು ಸಾಹಸವೇ, ಸಲ್ಪ ಆಯ ತಪ್ಪಿದರೂ, ಪ್ರಪಾತದಲ್ಲಿಯೇ. ಈ ಹಿಂದೆ ಇಲ್ಲಿಯೇ ಅಲ್ಲಮ ಪ್ರಭುದೇವರು ಬಹಳ ವರ್ಷಗಳವರೆಗೆ ಅನುಷ್ಠಾನಗೈದು, ನಂತರ ಕಲ್ಯಾಣಕ್ಕೆ ಬಂದು ಅಕ್ಕನವರಿಗೆ ಕದಳಿಯನ್ನು ನಿರ್ದೇಶಿಸಿದರೆಂದು ಪ್ರತೀತಿ. ಕದಳಿಯ ಪರಿಸರವನ್ನು ನನ್ನಂತಹವನಿಂದ ವರ್ಣಿಸಿದಲ್ಲಿ ಅದು ಬರೀ ಶುಷ್ಕ ವರದಿಯಾಗುತ್ತದೆಯೇ ಹೊರತು, ಅದರ ಭವ್ಯತೆಯ ನಿರೂಪಣೆಯಾಗಲಾರದು. ಮೊದಲ ಹಂತ ಇಳಿದು ಸಮತಟ್ಟಾದ ದಾರಿಯ ಎಡಭಾಗದಲ್ಲಿ ಒಂದು ಸಣ್ಣ ಮಾನವ ನಿರ್ಮಿತ ಕಟ್ಟೆಯಿದೆ. ಗುಹೆಯ ಕೆಳಮಟ್ಟದಲ್ಲಿ ಬಂಡೆಗಳ ಸಂದುಗಳಿಂದ ಬರುವ ಒರತೆ ನೀರನ್ನು ಶೇಖರಿಸಿಡಲು ನಿರ್ಮಿಸಿದ್ದು, ಇದೇ ನೀರು ಕುಡಿಯಲು, ಸ್ನಾನ ಮಾಡಲು ಉಪಯೋಗವಾಗುತ್ತಲಿದೆ. ಖನಿಜಯುಕ್ತ ನೀರು (Mineral water) ಬಹಳ ರುಚಿ, ಅದರ ಪಕ್ಕದಲ್ಲಿಯೇ ಒಂದು ಮಾವಿನ ಮರ, ಅದರ ಕಾಂಡದ ಸುತ್ತಳತೆ ಸುಮಾರು 20 ಅಡಿ ಇರಬಹುದು, ಜಗನ್ನಾಥ ಪನಸಾಲೆಯವರ ಪ್ರಕಾರ ಇದರ ವಯಸ್ಸು 250 ರಿಂದ 300 ವರ್ಷಗಳೇ ಇರಬೇಕು. ಇಲ್ಲಿ ಮತ್ತೆ ಹತ್ತಬೇಕೆಂದು ಹೇಳದೆನಲ್ಲವೆ? ಹತ್ತಿ ಹೋದಲ್ಲಿ ಗುಹೆಯೊಳಗೆ ಕಾಲಿಡಬೇಕಾಗುತ್ತದೆ, ಗುಹೆ ಭವ್ಯಾಕಾರವಾಗಿದ್ದರೂ ಯಾವು, ಯಾವುದೋ ಪಂಥದ ಸಾಧಕರು ಅಲ್ಲಿ ವಾಸಮಾಡುತ್ತಿದ್ದು ಗುಹೆಯ ಪ್ರಾಕೃತಿಕ ಅಂದವನ್ನು ಕೆಡಿಸಿದ್ದಾರೆ. ಅಕ್ಕನ ಐಕ್ಯಸ್ಥಳದಲ್ಲಿ ಎರಡೂ ಬದಿಗೆ ಅಂದವಿಲ್ಲದ ಗೋಡೆ ಕಟ್ಟಿ ಅದರ ಪಕ್ಕದಲ್ಲಿ ಮಣ್ಣಿನ ಗೋಡೆಗಳಿಗೆ ಸಗಣಿ ಬಗ್ಗಡ ಬಳಿದು ಕುರೂಪಗೊಳಿಸಿದ್ದಾರೆ, ಈ ಸಾಧಕರು. ಕಪ್ಪು ಒರಟು ಕಲ್ಲಿನ (Trap Stone) ಪದ್ಮಾಸನ ಭಂಗಿಯಲ್ಲಿ ತಪಸ್ಸು ಮಾಡುತ್ತಿರುವ 3 ಅಡಿ ಎತ್ತರದ ಅಕ್ಕನ ಶಿಲಾ ಮೂರ್ತಿ ಭವ್ಯವಾಗಿದೆ. ನೋಡುತ್ತಿದ್ದರೆ ಭಕ್ತಿ ಉಕ್ಕಿಬರುತ್ತದೆ. ಅಂದವಾದ ಶಾಂತ ಮುಖ ಮುದ್ರೆ, ಮುಚ್ಚಿದ ಕಣ್ಣು, ನೀಳ ನಾಸಿಕ, ಮುಗುಳ ನಗೆಯ ತುಟಿ, ಜೈತಲೆ ಬಾಚಿ ದೇಹದ ಎಲ್ಲಾ ಭಾಗಗಳಿಗೂ ಪಸರಿಸಿದ ತಲೆಕೂದಲು, ಕೊರಳು, ಕೈಗಳಲ್ಲಿರುವ ರುದ್ರಾಕ್ಷಿ ಸರ, ವಸ್ತ್ರದಲ್ಲಿ ಸುತ್ತಿದ ಲಿಂಗದೇವ ಇವೆಲ್ಲವೂ ಎಷ್ಟು ನೋಡುತ್ತಿದ್ದರೂ ಸಾಲದು, ಪ್ರಾಯಶಃ ಇಂತಹ ಭವ್ಯ ಮೂರ್ತಿಯನ್ನು ನಾನು ಇದುವರೆಗೂ ನೋಡಿಯೇ ಇಲ್ಲ. ಅಕ್ಕನೇ ಮತ್ತೊಮ್ಮೆ ಹುಟ್ಟಿ ಬಂದು ಇಲ್ಲಿ ಕುಳಿತಿದ್ದಾಳೇನೊ ಅನ್ನಿಸುತ್ತದೆ, ಧನ್ಯತೆ ಮೂಡುತ್ತದೆ. ಈ ಮೂರ್ತಿಯ ಪಕ್ಕದಲ್ಲಿಯೇ ಅಕ್ಕನ ಇನ್ನೊಂದು ಶಿಲ್ಪವಿದೆ, ನಿಂತಿರುವ ಭಂಗಿ ಹಿನ್ನೆಲೆಯಲ್ಲಿ ಒಂದು ಹಸು. ಆದರೆ ಅಕ್ಕನ ಐಕ್ಯಸ್ಥಳದ ಪಕ್ಕದಲ್ಲಿ ಗೋಡೆಯ ಹೊರಗೆ ಕಲಬುರ್ಗಿಯ ಶರಣ ಬಸವೇಶ್ವರರ(ಅವಳಿ) ಶಿಲ್ಪ ಹೆಡೆ ಬಿಚ್ಚಿದ ಐದು ಹೆಡೆ ಸರ್ಪದೊಂದಿಗೆ ಇದೆ. ಕದಳಿ ಗುಹೆಗೂ ಶರಣ ಬಸವೇಶ್ವರರಿಗೂ ಏನು ಸಂಬಂಧ ? ಎಲ್ಲಿಯೂ ಓದಿದ ನೆನಪಿಲ್ಲ, ಇರಲಿ

ವಿಚಾರಿಸೋಣ ಎಂದು ಸುಮ್ಮನಾಗಬೇಕಾಯ್ತು. (ಕದಳಿಯ ಪೂರ್ಣ ವಿವರಗಳಿಗೆ ಮಾತಾಜಿಯವರು ಬರೆದ ''ತರಂಗಿಣಿ'' ಪುಸ್ತಕ ಪುಟ 791 ರಿಂದ 795ರವರೆಗೆ ಓದಿ)

ಅಕ್ಕನ ಭವ್ಯಮೂರ್ತಿಯ ಮುಂಭಾಗದಲ್ಲಿ ನೆಲಮಟ್ಟದಲ್ಲಿ ಹುದುಗಿಸಿದ ಒಂದು ಸ್ಥಾವರಲಿಂಗ ಮತ್ತು ಅದರ ಮುಂದೆ ನಂದಿ ; ಅಂತಹ ಪಾವಿತ್ರ್ಯತೆ ಏನೂ ಇದ್ದ ಹಾಗೆ ಕಾಣಲಿಲ್ಲ. ಅನಾಥವಾಗಿರುವ ಪರಿಸ್ಥಿತಿ.

ಗುಹೆಯ ಉದ್ದ ಸುಮಾರು 100 ರಿಂದ 120 ಅಡಿ ಇರಬಹುದು ಅಗಲ ಸುಮಾರು 30 ರಿಂದ 40 ಅಡಿ, ಎತ್ತರ ಮಧ್ಯದಲ್ಲಿ ಸುಮಾರು 8 ರಿಂದ 9 ಅಡಿ, ಕಮಾನಿನ ಆಕಾರದಲ್ಲಿ ತೆರೆದು ಕೊಂಡಿರುವುದರಿಂದ ಗಾಳಿ ಬೆಳಕು ಯಥೇಚ್ಚವಾಗಿರುತ್ತದೆ. ಈ ಗುಹೆ ಇರುವ ಜಾಗದ ಸ್ಪಷ್ಟ ಕಲ್ಪನೆಯನ್ನು ಕೊಡಬೇಕೆಂದರೆ, ಗುಹೆಯ ಮೇಲ್ಭಾಗದಲ್ಲಿ ಒಂದು ಸಣ್ಣ ಹಳ್ಳ ಹರಿದು ಬರುತ್ತಿದ್ದು ಈ ಹಳ್ಳಕ್ಕೆ ಸ್ವಲ್ಪವೇ ಸ್ವಲ್ಪ ಒಳಹರಿವಿನ ಪ್ರದೇಶವಿರುವುದರಿಂದ (Catchment area) ಮಳೆ ಬಂದರೆ ಮಾತ್ರ ಯಥೇಚ್ಚವಾಗಿ ನೀರು ಗುಹೆಯ ಮೇಲ್ಭಾಗದಲ್ಲಿ ಹರಿದು ಬಂದು ದಬೆದಬೆಯಾಗಿ ಗುಹೆಯ ಮುಂಭಾಗದಲ್ಲಿಯೆ ಪ್ರಪಾತಕ್ಕೆ ಧುಮುಕುತ್ತಾ ಮುಂದೆ 5-6 ಕಿ.ಮಿ. ಅಂತರದಲ್ಲಿ ಕೃಷ್ಣಾ ನದಿಯಲ್ಲಿ ಕೂಡುತ್ತದೆ. ಮಳೆ ಬಂದಾಗ ಗುಹೆಯ ಒಳಗಿದ್ದಲ್ಲಿ ಒಂದು ತರಹ ಗುಹೆಗೆ ತೆರೆ ಹಾಕಿದ (curtain) ಹಾಗಿರುತ್ತದೆ. ಮಳೆಗಾಲ ಕಳೆದ ನಂತರ ಬರಿ ಬಿಸಿ ನೀರು ಮಾತ್ರ ಮುಂಗೈಗಾತ್ರದಲ್ಲಿ ಎರಡು ಮೂರು ಟಿಸಿಲಾಗಿ ಕೆಳಗೆ ಧುಮುಕುತ್ತದೆ. ನಾವು ಹೋದಾಗ ಬಿಸಿನೀರು ಮಾತ್ರ ಧುಮುಕುತ್ತಿದ್ದರಿಂದ ಅದರ ಭವ್ಯತೆಯು ನಮಗೆ ಗೊತ್ತಾಗಲೇ ಇಲ್ಲ.

ಮೇಣದಬತ್ತಿಯ ಮಂದ ಬೆಳಕಿನಲ್ಲಿ ಶ್ರೀ ಅಲ್ಲಮಪ್ರಭು ಸ್ವಾಮಿಗಳವರಿಂದ ಅಕ್ಕನ ಭವ್ಯ ಮೂರ್ತಿಗೆ ಪೂಜೆ. ನಂತರ ಅಕ್ಕನ ಸನ್ನಿಧಾನದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ, ಅಕ್ಕನನ್ನು ಕುರಿತು ಪೂಜ್ಯ ಮಾತಾಜಿಯವರು ರಚಿಸಿರುವ ಭಕ್ತಿಗೀತೆಗಳ ಗಾಯನ, ಅಕ್ಕನ ವಚನ ಗಾಯನ ಎಲ್ಲಾ ಮುಗಿಯುವ ಹೊತ್ತಿಗೆ ಸುಮಾರು 8-30 ಘಂಟೆಯಾಗಿತ್ತು, ಇನ್ನೂ ಪ್ರಸಾದದ ತಯಾರಿ ನಡೆದೇ ಇತ್ತು, ಶರಣರಲ್ಲಿ ಅನೇಕರು ಗುಹೆಯ ಮೇಲ್ಭಾಗದಲ್ಲಿ ಕಲ್ಲಿನ ಹಾಸು ಮೇಲೆ ತಮ್ಮ ತಮ್ಮ ಹಾಸಿಗೆ ಹೊದಿಕೆ ಹಾಕಿ ತಮ್ಮ ತಮ್ಮ ಜಾಗಗಳನ್ನು ಭದ್ರಪಡಿಸಿಕೊಂಡು ಲೋಕಾಭಿರಾಮವಾಗಿ ಮಾತನಾಡುತ್ತಾ ಪ್ರಸಾದ ಮೇಲೆ ಬರುವುದನ್ನೆ ಕಾಯುತ್ತಲಿದ್ದರು. ಬಹಳಷ್ಟು ಶರಣರು ಆಯಾಸವಾಗಿದ್ದರಿಂದ ನಿದ್ರೆಗೆ ಶರಣಾದರು. ಸುಮಾರು 10-00 ಘಂಟೆಯ ಹೊತ್ತಿಗೆ ಪ್ರಸಾದ ಬಂದಿದ್ದರಿಂದ ಮಲಗಿದ್ದ ಶರಣರನ್ನು ಎಚ್ಚರಿಸಿ ಪ್ರಸಾದ ಮಾಡಿಸಬೇಕಾಯಿತು. ಶರಣರು ಮಲಗಿರುವ ಗುಂಪಿನ ಸುತ್ತ ಅಲ್ಲಲ್ಲಿ ಬೆಂಕಿ ಹೊತ್ತಿಸಿ, ಆಗಾಗ್ಗೆ ಪಟಾಕಿ ಸಿಡಿಸುತ್ತ ಕಾಡು ಪ್ರಾಣಿಗಳನ್ನು ದೂರವಿರಿಸಲು ನಮ್ಮ ಯುವ ಶರಣರು ಪಾಳಿಯ ಮೇಲೆ ಕಾಯುತ್ತ ಶರಣರು ಸರಿಯಾಗಿ ನಿದ್ರೆ ಮಾಡುವಂತೆ ನೋಡಿ ಕೊಂಡರು.

ದಿನಾಂಕ. 4-11-2001 ರಂದು ಎಲ್ಲರೂ ಸ್ವಲ್ಪ ತಡವಾಗಿಯೆ ನಿದ್ರೆಯಿಂದ ಎಚ್ಚರಾದರು. ನೀರಿನ ಒರತೆ ಇದ್ದುದರಿಂದ ಶರಣೆಯರೆಲ್ಲರೂ ಸ್ನಾನ ಮುಗಿಸಿ, ಲಿಂಗ ಪೂಜಾದಿಗಳನ್ನು ಮುಗಿಸಿದರು, ಶರಣರು ಮಾತ್ರ ಸ್ನಾನಾದಿಗಳನ್ನು ಕಾಯ್ದಿರಿಸಿಕೊಂಡು ಮುಖ

ಮಾರ್ಜನೆ ಮಾಡಿ ಪೂಜೆಗೈದು ಉಪಾಹಾರ ಸ್ವೀಕರಿಸಿ, ಒಬ್ಬೊಬ್ಬರಾಗಿ ಬಂದ ದಾರಿಯಲ್ಲಿ ಹಿಂದಿರುಗಲು ಪ್ರಾರಂಭಿಸಿದರು. ಕಾಲುನಡಿಗೆ ಪ್ರಾರಂಭಿಸಿದ ಜಾಗಕ್ಕೆ ಬಂದು ಎಲ್ಲಾ ಕುಳಿತು ದೋಣಿಗಾಗಿ ಕಾಯತೊಡಗಿದರು. ಕೆಲವು ಶರಣರು ಕದಳಿಯಲ್ಲಿ ಕಾಯ್ದಿರಿಸಿಕೊಂಡು ಬಂದಿದ್ದ ಸ್ನಾನವನ್ನು ಕೃಷ್ಣಾ ನದಿಯ ಹಿನ್ನೀರಿನಲ್ಲಿಯೇ ಮಾಡಿ ಮುಗಿಸಿದರು. ಅಕ್ಕ ಮಹಾದೇವಿಯವರು ಕದಳಿಗೆ ಹೋಗುವ ಮುನ್ನ ಅನುಷ್ಠಾನಗೈದ ಗುಹೆಯನ್ನು ನೋಡಿರಲಿಲ್ಲ, ಅಂಥವರು 4-5 ಜನ ಗುಂಪು ತಂಡ ತಂಡಗಳಾಗಿ ಮೀನುಗಾರರು ಮೀನುಹಿಡಿಯುವ ಸಣ್ಣ ಜಲ್ಲೆಯಾಕಾರದ ದೋಣಿಗಳಲ್ಲಿ ಹೋಗಿ ನೋಡಿಕೊಂಡು ಬಂದರು. ಅದೇನು ಅಲ್ಲಿಂದ ಬಹಳ ದೂರವೇನೂ ಇರಲಿಲ್ಲ, ಹಿನ್ನೀರಿನಲ್ಲಿ 1 ಅಥವಾ 1.5 ಕಿ.ಮಿ ದೂರ ಮಾತ್ರ.

ಕದಳಿ ಗುಹೆ ಎಷ್ಟು ಭವ್ಯ ಸರಳವೊ, ಈ ಗುಹೆ ಭವ್ಯತೆಯಿಂದ ಕೂಡಿದೆ. ನಿಗೂಢ ಸುರಂಗಗಳನ್ನೊಳಗೊಂಡ ನಿಸರ್ಗ ನಿರ್ಮಿತ ಕಂಬಗಳು, ತೊಲೆಗಳು, ಛಾವಣಿಗಳು ಯಾರೋ ಶಿಲ್ಪಿಯಿಂದ ಕೊರೆದ ಕುಸರಿ ಕೆಲಸಗಳೇನೊ ಎಂಬ ಭ್ರಮೆ ಹುಟ್ಟಿಸುತ್ತದೆ. ಸುರಂಗಗಳಲ್ಲಿ ಒಬ್ಬೊಬ್ಬರೆ ನುಸುಳಿ ಹೋಗಬೇಕು, ಪ್ರಾಣವಾಯುವಿನ ಕೊರತೆ ನಮ್ಮನ್ನು ಉಸಿರು ಕಟ್ಟಿಸುವ ಹಾಗೆ ಮಾಡುತ್ತದೆ. ಈ ಗುಹೆಯೊಂದು ಸುರಂಗಗಳ ಸಂಕೀರ್ಣ, ಎಲ್ಲೋ ಹೊಕ್ಕು ಎಲ್ಲಿಯೋ ಬರಬಹುದು ನೀವು ಯೋಗಿಗಳಾದರೆ ಮಾತ್ರ. ಇಂತಹ ಗುಹೆಯನ್ನು ಅಕ್ಕನವರು ತಮ್ಮ ಅನುಷ್ಠಾನಕ್ಕೆ ಆರಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅಂದು ಈ ಗುಹೆಗೆ ಕಾಲುನಡಿಗೆಯಲ್ಲಿಯೇ ಹೋಗಬೇಕಾಗಿತ್ತು , ಆದರೆ ಈಗ ಶ್ರೀಶೈಲ ಜಲ ವಿದ್ಯುತ್ ಯೋಜನೆಯ ಹಿನ್ನೀರು ಈ ಗುಹೆಯ ಅಂಚಿನವರೆಗೂ ನಿಂತಿರುತ್ತದೆ, ದೋಣಿಯಲ್ಲಿಯೇ ಹೋಗಬೇಕಾಗುತ್ತದೆ. (28 ವರ್ಷಗಳ ಹಿಂದೆ ಮಾತಾಜಿಯವರು ಸಂದರ್ಶಿಸಿದಾಗ ಈ ಜಲ ವಿದ್ಯುತ್ ಯೋಜನೆ ಆಗಿರಲಿಲ್ಲವೆಂದು ಕಾಣುತ್ತದೆ. ಏಕೆಂದರೆ ಅವರು ಬರೆದ ಮಹೋನ್ನತ ಕಾದಂಬರಿ ''ತರಂಗಿಣಿ''ಯಲ್ಲಿ ದಾಖಲಿಸಿರುವ ಎಷ್ಟೋ ಸ್ಥಳಗಳು ಹಿನ್ನೀರಿನಲ್ಲಿ ಮುಳುಗಡೆಯಾಗಿವೆ. ಉದಾ- ಪಾತಾಳಗಂಗೆ ಜಲಪಾತ, ಸಿದ್ಧರಾಮನ ಹಳ್ಳ, ಅಕ್ಕನ ಹಳ್ಳ, ಕೃಷ್ಣಾನದಿ ದಾಟುವುದು ಇತ್ಯಾದಿ) ಮಾತಾಜಿಯವರು ತಮ್ಮ ''ತರಂಗಿಣಿ''ಯಲ್ಲಿ ಈ ಗುಹೆಯ ಚಿತ್ರಣವನ್ನು ದಾಖಲಿಸಿದ್ದಾರೆ.(ತರಂಗಿಣಿ ಪುಟ 761, 762, 763) ಕದಳಿಯ ಪ್ರವಾಸ ಹರ್ಷದಾಯಕವಾಗಿ ಮತ್ತು ಫಲಪ್ರದಾಯಕವಾಗಿ ಮುಕ್ತಾಯವಾಯಿತು. 5-11-2001ರ ಮಧ್ಯಾಹ್ನ 1.30 ಘಂಟೆಗೆ ಬೆಂಗಳೂರು ಸೇರಿದ್ದಾಯ್ತು.

ವೀರ ವಿರಾಗಿಣಿ ಜಗನ್ಮಾತೆ ಅಕ್ಕ ಮಹಾದೇವಿಯವರು ನಡೆದಾಡಿದ, ಕುಳಿತು ಅನುಷ್ಠಾನಗೈದ ಒಂದೊಂದು ಇಂಚು ಮಣ್ಣೂ ನಮಗೆ ಪವಿತ್ರ. ಇಲ್ಲಿ ಕೂತಿದ್ದರು, ಇಲ್ಲಿ ನಡೆದಾಡುತ್ತಿದ್ದರು, ಈ ಕಲ್ಲು ಅವರ ಸ್ಪರ್ಶದಿಂದ ಪಾವನವಾಗಿದೆ ಎಂದು ನಾನು ಅಲ್ಲಿ ಕೂತು, ನಿಂತು ನಡೆದಾಡಿ ಸ್ಪರ್ಶಿಸಿ ಮಹದಾನಂದ ಪಟ್ಟಿದ್ದೇನೆ. ಇಂತಹ ಸನ್ನಿವೇಶವನ್ನು ಒದಗಿಸಿಕೊಟ್ಟ ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರಿಗೆ ಕೋಟಿ ಕೋಟಿ ಶರಣು ಶರಣಾರ್ಥಿಗಳು.

ಎಸ್. ಟಿ. ಚಂದ್ರಶೇಖರಪ್ಪ, ನಿವೃತ್ತ ಇಂಜಿನಿಯರ್
ದಾವಣಗೆರೆ. ದಿನಾಂಕ- 12-11-2001

ಸಾಂಸ್ಕೃತಿಕ ರಾಷ್ಟ್ರೀಯತೆ.

ಮಾನ್ಯರೆ,

ಬಿಜೆಪಿಯ ಸಾಂಸ್ಕೃತಿಕ ರಾಷ್ಟ್ರೀಯತೆಯಲ್ಲಿ ಅಡಗಿರುವ ಅಪಾಯಗಳನ್ನು ಅಕ್ಟೋಬರ್ 31ರ 'ಪ್ರಜಾವಾಣಿ'ಯಲ್ಲಿ ಕುಲದೀಪ ನಯ್ಯರ್ ಗಂಭೀರವಾಗಿ ವಿಶ್ಲೇಷಿಸಿದ್ದಾರೆ. ಬಿಜೆಪಿಯ ಈ ಆಕರ್ಷಕ ಮಂತ್ರಕ್ಕೆ ಇನ್ನೊಂದು ಮುಖವೂ ಇದೆ.

ಹಿಂದುತ್ವ ಅಥವಾ ಹಿಂದು ಧರ್ಮವೆಂಬ ಮುಖವಾಡವನ್ನು ಕಳಚಿದಾಗ ಅಲ್ಲಿ ಕಾಣುವುದು ವೈದಿಕಧರ್ಮ. ಆ ಮುಖವಾಡವನ್ನೂ ತೆಗೆದಾಗ ಕಾಣುವುದು ಶ್ರುತಿ (ವೇದಗಳು), ಸ್ಮೃತಿ (ಮನುಸ್ಮೃತಿ ಮುಂತಾದ ಶಾಸ್ತ್ರಗಳು)ಗಳನ್ನಾಧರಿಸಿದ ಧರ್ಮ. ಅರ್ಥಾತ್ ಚಾತುರ್ವರ್ಣ ಧರ್ಮ. ಚಾತುರ್ವರ್ಣ್ಯವೆಂಬುದೊಂದು ಬಿಗಿಯಾದ ಸಮಾಜ ವ್ಯವಸ್ಥೆ ಯಾದ್ದರಿಂದ ಇದನ್ನು ಧರ್ಮ ಎನ್ನುವುದೇ ತಪ್ಪು. ಇದನ್ನು ತಿರಸ್ಕರಿಸಿ ಹೊರ ಹೋದವರು, ಬೌದ್ಧರು (ಜನ ಸಂಖ್ಯೆಯ ಶೇ 2.5ರಷ್ಟು ಜನ), ಜೈನರು (ಶೇ 3), ಸಿಖ್ಖರು (ಶೇ 2.5) ಎನಿಸಿಕೊಂಡರು. ವೈದಿಕ ಧರ್ಮದ ಶೋಷಣೆ ದೌರ್ಜನ್ಯಗಳಿಂದ ತತ್ತರಿಸಿದ ದಲಿತರು ಅದೇ ಧರ್ಮಕ್ಕೆ ಸೇರಿದವರಾಗಿರಲು ಸಾಧ್ಯವಿಲ್ಲವೆಂದು ಡಾ. ಅಂಬೇಡ್ಕರ್ ನಿರೂಪಿಸಿದ್ದಾರೆ.

ಇನ್ನು ಬೆಸ್ತರು, ನಾಯಿಂದರು, ದೋಬಿಗಳು, ಕುಂಬಾರರು, ಈಡಿಗರು, ಉಪ್ಪಾರರು, ತಿಗಳರು ಇತ್ಯಾದಿ ಅತಿ ಶೂದ್ರರು (ಶೇ 8) ವೇದ ಧರ್ಮ ಮತ್ತು ದೇವಸ್ಥಾನ ಸಂಸ್ಕೃತಿಯಿಂದ ದಲಿತರಷ್ಟೇ ದೂರ ಇರಿಸಲ್ಪಟ್ಟಿದ್ದರು. ಪರಿಶಿಷ್ಟ ಜಾತಿ (ಶೇ 20) ಮತ್ತು ಪರಿಶಿಷ್ಟ ಬುಡ ಕಟ್ಟು (ಶೇ 10) ಗಳು ಸೇರಿ ದಲಿತರು. ಈ ಶೇ 30ರಲ್ಲಿ ನವ ಬೌದ್ಧರೂ ಸೇರಿದ್ದಾರೆ. ಬಿ.ಜೆ.ಪಿ. ಮತ್ತು ಸಂಘ ಪರಿವಾರ ಪ್ರತಿನಿತ್ಯವೂ ಜಪಿಸುವ ಧರ್ಮ, ಪರಂಪರೆ, ಸಂಸ್ಕೃತಿಗಳ ಬಗ್ಗೆ ಈ ಶೇ 49 ಭಾರತೀಯರಿಗೆ ವ್ಯಾಮೋಹ ಇರಲು ಸಾಧ್ಯವೇ ಇಲ್ಲ.

ಮುಸ್ಲಿಮರು (ಶೇ 15) ಮತ್ತು ಕ್ರೈಸ್ತರ (ಶೇ 2.5) ಮಾತಿರಲಿ, ನಿಜವಾದ ಸಂಸ್ಕೃತಿ ಮತ್ತು ರಾಷ್ಟ್ರೀಯ ಭಾವನೆ ಹೊಂದಿರುವ ಮೇಲ್ಜಾತಿ (ಶೇ 8) ಗಳವರೂ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಸಹ ಸಂಘ ಪರಿವಾರದ ಸಾಂಸ್ಕೃತಿಕ ರಾಷ್ಟ್ರೀಯತೆಗೆ ಸೊಪ್ಪು ಹಾಕುತ್ತಿಲ್ಲ. ಒಕ್ಕಲಿಗ, ಜಾಟ್, ಯಾದವ, ಕಾಯಸ್ಥ, ಕಮ್ಮ, ಕಾಪು, ಕುರುಬ, ರೆಡ್ಡಿ, ಗೌಂಡರ್, ನಾಡಾರ್ ಮುಂತಾದ ಶೂದ್ರ ವರ್ಗ (ಶೇ 25)ದವರ್‍ಯಾರೂ ಬಿಜೆಪಿಯನ್ನೊಳಗೊಂಡು ಸಂಘ ಪರಿವಾರದ ನೀತಿ ರೂಪಿಸುವ ಮಂಡಲಿಗಳಲ್ಲಿ ಇರಲಾಗದು, ಇಲ್ಲ. ಬಂಗಾರು ಲಕ್ಷ್ಮಣ್, ಸಿಕಂದರ್ ಬಖ್ತ್, ವೆಂಕಯ್ಯನಾಯ್ಡು ಮುಂತಾದವರು ತಮ್ಮ ತಮ್ಮ ಜನಾಂಗಗಳ ನಂಬಿಕೆಯನ್ನು ಕಳೆದು ಕೊಂಡಿರುವವರು.

ತೀರಾ ಅಲ್ಪಸಂಖ್ಯಾತರಾದ ಪಾರ್ಸಿ, ಯಹೂದ್ಯ, ಆರ್ಮಿನಿಯನ್, ಆಂಗ್ಲೋ ಇಂಡಿಯನ್ ಇತ್ಯಾದಿಗಳು ಇನ್ನುಳಿದ ಶೇ 5ರ ವ್ಯಾಪ್ತಿಯೊಳಗೆ ಬರುತ್ತಾರೆ.

ಶ್ರುತಿ-ಸ್ಮೃತಿ ಆಧಾರಿತ ಸಂಸ್ಕೃತಿ, ಎಂದರೆ ಚಾತುರ್ವರ್ಣ್ಯ ವ್ಯವಸ್ಥೆಯ ತುಳಿತಕ್ಕೊಳಗಾದ ಆರ್ಯೇತರ ಮತ್ತು ಆರ್ಯರಿಗೂ ಮೊದಲಿನ ಕಾಲಘಟ್ಟದಲ್ಲಿ ಮೆರೆದ ಮೂಲ ಭಾರತೀಯ

ಪರಂಪರೆಯವರ ಸಾಂಸ್ಕೃತಿಕ ರಾಷ್ಟ್ರೀಯತೆಯೊಂದಿದೆ. ಆದಿ ದ್ರಾವಿಡ, ಆದಿವಾಸಿ ಎಂಬ ಹೆಸರುಗಳನ್ನು ನೋಡಿ.

ಈ ಶೋಷಿತ, ವಂಚಿತ, ಬಹುಜನ ಭಾರತೀಯರ ಸಾಂಸ್ಕೃತಿಕ ರಾಷ್ಟ್ರೀಯತೆಯು, ಸಂಘಟನೆಯ ಕೊರತೆ, ಹಣಕಾಸಿನ ಮುಗ್ಗಟ್ಟು, ಮಾಧ್ಯಮಗಳ ಪಕ್ಷಪಾತ ಮತ್ತು ಅನೈಕಮತ್ಯಗಳಿಂದಾಗಿ ಸುಪ್ತವಾಗಿದ್ದು, ಈಗೀಗ ಎಂದರೆ ಡಾ. ಅಂಬೇಡ್ಕರ್ ಮತ್ತು ಪೆರಿಯಾರ್‌ರ ವಿಚಾರಗಳ ಪ್ರಚಾರದಿಂದಾಗಿ ತಲೆ ಎತ್ತುತ್ತಿದೆ.

ಈ ರಾಷ್ಟ್ರೀಯತೆಯಲ್ಲಿ ರಾಮ, ಕೃಷ್ಣ ವಸಿಷ್ಠ, ಶಂಕರಾಚಾರ್ಯ, ಶಿವಾಜಿ, ಪುರಂದರದಾಸರಿಗೆ ಬದಲು ಶಂಭುಕ, ರಾವಣ, ಶಿಶುಪಾಲ, ಬಲಿಚಕ್ರವರ್ತಿ, ಜಾಬಾಲಿ, ಚಾರ್ವಾಕ, ಬುದ್ಧ ಬಸವಣ್ಣ ಗುರು ನಾನಕ್, ಮಹಾತ್ಮ ಫುಲೆ, ಛತ್ರಪತಿ ಸಾಹುಮಹಾರಾಜ್ ಮುಂತಾದವರಿಗೆ ಗೌರವದ ಸ್ಥಾನ ಉಂಟು. ಆರ್ಯರ ದೌರ್ಜನ್ಯದಿಂದ ಜನರಿಗೆ ರಕ್ಷಣೆಯೊದಗಿಸಿದವರೇ ರಾಕ್ಷಸರೆಂದು ಕರೆಯಲ್ಪಟ್ಟರು. ಕೇರಳದಲ್ಲಿ ಓಣಮ್ ಹಬ್ಬವನ್ನು ಆಚರಿಸುವುದು ಬಲಿಚಕ್ರವರ್ತಿಗೆ ಗೌರವ ಸೂಚಿಸಲೆಂದೇ.

ನೆಹರೂ ಕುಟುಂಬದ ಭಕ್ತಮಂಡಲಿ ವಿದೇಶಿ ಮೂಲದ ಸೋನಿಯಾರನ್ನು ಪ್ರಧಾನಿ ಸ್ಥಾನಕ್ಕೆ ತಂದೀತೆಂಬ ಆತಂಕದಿಂದ ಮತದಾರರು ವಾಜಪೇಯಿಗೆ ದಾರಿ ಮಾಡಿಕೊಟ್ಟರೇ ಹೊರತು ಹಿಂದುತ್ವಕ್ಕೆ ಮನ್ನಣೆ ಕೊಡುವುದಕ್ಕಾಗಿ ಅಲ್ಲ.

-ಪಿ. ಎಸ್. ಶ್ರೀಧರ ಮೂರ್ತಿ, ಬೆಂಗಳೂರು.

(ಪ್ರಜಾವಾಣಿ-ವಾಚಕರ ವಾಣಿ ವಿಭಾಗ. ದಿನಾಂಕ - 14.11.2001)

ಹೋರಾಟ ಅನಿವಾರ್ಯ (ಲಿಂಗಾಯತವು ಹಿಂದೂದ ಅಂಗವಲ್ಲ)

ಸನ್ಮಾನ್ಯ ಸಂಪಾದಕರು
ಪ್ರಜಾವಾಣಿ, ವಾಚಕರ ವಾಣಿ ವಿಭಾಗ, ಬೆಂಗಳೂರು

ಮಾನ್ಯರೇ,

ಪ್ರಜಾವಾಣಿ ಪತ್ರಿಕೆ ವೈಚಾರಿಕ ಮೌಲ್ಯಗಳನ್ನು ಬಿತ್ತರಿಸುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಲು ಅಭಿಮಾನ ಎನ್ನಿಸುತ್ತದೆ. ಇದಕ್ಕೆ ಸಾಕ್ಷಿ ಶ್ರೀ ಪಿ. ಎಸ್. ಶ್ರೀಧರ್‌ಮೂರ್ತಿಯವರ "ಸಾಂಸ್ಕೃತಿಕ ರಾಷ್ಟ್ರೀಯತೆ" ಎಂಬ ಪತ್ರವನ್ನು ಪ್ರಕಟಿಸಿರುವುದು. (ವಾಚಕರ ವಾಣಿ, ದಿ. 14ರ ಸಂಚಿಕೆ) ಶ್ರೀಯುತರು ಅತ್ಯಂತ ಸ್ಪಷ್ಟವಾಗಿ, ಸಂಕ್ಷಿಪ್ತವಾಗಿ ಆದರೆ ಸಮಗ್ರವಾಗಿ ಭಾರತೀಯ ಪರಂಪರೆಯನ್ನು ವಿಶ್ಲೇಷಿಸಿದ್ದಾರೆ.

ಹಿಂದು ಧರ್ಮ, ಹಿಂದು ಸಂಘಟನೆಯ ಹೆಸರಿನಲ್ಲಿ ಗತಕಾಲದ ನಂಬಿಕೆ ಮತ್ತು ಆಚರಣೆಗಳನ್ನು ಪುನರ್ ಪ್ರತಿಷ್ಠಾಪಿಸುವ, ಬಲಪಡಿಸುವ ಪ್ರಯತ್ನ ನಡೆಯುತ್ತಲಿದೆ. ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ನಿರಂತರ ಶೋಷಣೆ ನಡೆಯುತ್ತಿದೆ: ಆದರೆ ಮೂಢ ನಂಬಿಕೆಯ ಕೆಸರಿನಲ್ಲಿ ತೇಲಲೂ ಆಗದೆ ಮುಳುಗುತ್ತಲಿರುವ ಶೋಷಿತರು ತಾವು ಹೇಗೆ ಜಾತೀಯತೆ ಮೂಢ ನಂಬಿಕೆಗಳ ಮೂಲಕ ಶೋಷಣೆಗೆ ಒಳಗಾಗಿದ್ದಾರೆ ಎಂಬುದನ್ನು ಅರಿಯಲು

ಅಸಮರ್ಥರಾಗಿರುವುದು ದೊಡ್ಡ ದುರಂತ. ಪ್ರಸಾರ ಮಾಧ್ಯಮಗಳು ಜನರು ಎಚ್ಚರಗೊಳ್ಳದಂತೆ, ಗತಕಾಲದ ನಂಬಿಕೆಗಳನ್ನು ಪುನಃ ಅವಚಿಕೊಳ್ಳುವಂತೆ ಮಾಡಲು ಶ್ರಮಿಸುತ್ತಿವೆ. ಧಾರ್ಮಿಕ ಹಕ್ಕುಗಳಿಂದ ವಂಚಿತರಾಗಿರುವ ಶೂದ್ರರು, ಅಸ್ಪೃಶ್ಯರು ಇದರ ಅರಿವು ಇಲ್ಲದೆ ತಮ್ಮ ಶೋಷಣೆಗೆ ಕಾರಣವಾಗಿರುವ ಧರ್ಮಶಾಸ್ತ್ರ ಜ್ಯೋತಿಷ್ಯ, ವಾಸ್ತುಶಿಲ್ಪ ಮುಂತಾದವುಗಳ ಬೆನ್ನು ಹತ್ತಿದ್ದಾರೆ. ಯಜ್ಞ-ಯಾಗಾದಿಗಳ ಮೂಲಕ ಕೋಟ್ಯಂತರ ರೂಪಾಯಿಗಳ ಅರ್ಥ ಸಂಪತ್ತು, ರಾಷ್ಟ್ರದ ಏಳಿಗೆ, ಜನರ ಕಲ್ಯಾಣಕ್ಕೆ ಬಳಕೆಯಾಗ ಬೇಕಾದುದು ಬೆಂಕಿಯ ಪಾಲಾಗುತ್ತಿದೆ. ಹರಪ್ಪಾ-ಮೊಹಂಜೋದಾರೋ ಕಾಲಕ್ಕಾಗಲೇ ಪ್ರಭಾವಶಾಲಿ ಆರಾಧ್ಯ ಪುರುಷನಾಗಿದ್ದ ಭಾರತೀಯ ಧಾರ್ಮಿಕ ಪರಂಪರೆಯ ಮೂಲ ಪುರುಷ ಯೋಗಿರಾಜ ಶಿವನು ಜಾತಿಭೇದ, ಯಜ್ಞಯಾಗ ವಿರೋಧಿ ಮತ್ತು ಸಮಾನತಾ ತತ್ತ್ವ ಪ್ರತಿಪಾದಕನಾಗಿದ್ದ. ಇದೇ ಭಾರತೀಯ ಪರಂಪರೆಯ ನೈಜ ಸ್ವರೂಪವೇ ವಿನಾ ಮನುಸ್ಮೃತಿಯಾಧಾರಿತ ವರ್ಣಾಶ್ರಮ ಧರ್ಮವಲ್ಲ, ಯಜ್ಞಯಾಗ ಸಂಸ್ಕೃತಿಯಲ್ಲ.

ಸಂಘ ಪರಿವಾರದವರು ಹಿಂದುತ್ವಕ್ಕೆ ವ್ಯಾಖ್ಯಾನವನ್ನು ವಿಶಾಲವಾಗಿ ಕೊಡಲು ಬಯಸಿ ಹಿಂದು ಒಂದು ಧರ್ಮವಲ್ಲ; ಹಲವಾರು ಧರ್ಮಗಳ ಉದಾ: ಶೈವ, ವೈದಿಕ, ಬೌದ್ಧ, ಜೈನ, ಲಿಂಗಾಯತ, ಸಿಖ್ ಮುಂತಾದವುಗಳ ಒಕ್ಕೂಟ ಎಂದು ಪ್ರತಿಪಾದಿಸಿದರೂ ಆಚರಣೆಯಲ್ಲಿ ಅವರು ಒತ್ತುಕೊಡುವುದು ಬಹುದೇವತೋಪಾಸನೆ, ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆ, ಪುರೋಹಿತ ಶಾಹಿ, ಯಜ್ಞ-ಯಾಗಾದಿಗಳಿಗೆ. ಒಂದು ಕಠೋರ ಸತ್ಯವನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ, ಉತ್ಪ್ರೇಕ್ಷೆಯೂ ಅಲ್ಲ. ಬೌದ್ಧ, ಲಿಂಗಾಯತ ಮುಂತಾದ ಪ್ರಗತಿಪರ ಧರ್ಮಗಳು ಯಾವ ಮಾನವರಿಗಾದರೂ ದೀಕ್ಷೆ ಕೊಟ್ಟು "ಗಣ ಧರ್ಮ"ದೊಳಕ್ಕೆ ತೆಗೆದು ಕೊಳ್ಳಬಲ್ಲವು. ಸಂಘ ಪರಿವಾರದವರು ಹೇಳುವಂತೆ ಇವು ಹಿಂದು ಸಮಾಜದೊಳಗಣ ಧರ್ಮಗಳೇ ಆಗಿದ್ದರೆ ಧಾರ್ಮಿಕ ಹಕ್ಕುಗಳನ್ನೇ ಹೊಂದಿರದ ಶೂದ್ರರು, ಅಸ್ಪೃಶ್ಯರು ದೀಕ್ಷೆ ಹೊಂದ ಬಯಸಿದರೆ ಮತಾಂತರ ಎಂದು ಕರೆದು ಅದನ್ನು ವಿರೋಧಿಸಬೇಕೇಕೆ ? ತಡೆಗಟ್ಟ ಬೇಕೇಕೆ ? ಕೆಲವರು ಮತಾಂತರಗೊಂಡವರನ್ನು ಶುದ್ಧೀಕರಿಸುವ ಕಾರ್ಯವನ್ನು ಸಂಘಪರಿವಾರದವರು ಮಾಡುತ್ತಾರೆ. ಅವರ ಪ್ರಗತಿಪರ ಚಿಂತನೆಯನ್ನು ಅಭಿನಂದಿಸೋಣ. ಏಕೆಂದರೆ ವರ್ಣಾಶ್ರಮಾಧಾರಿತ ವೈದಿಕ-ಹಿಂದು ಧರ್ಮದಲ್ಲಿ ಬಹಿಷ್ಕಾರವೊಂದೇ ಪರಿಹಾರ ವಾಗಿತ್ತಲ್ಲದೆ ಸ್ವೀಕಾರ ಅಥವಾ ಶುದ್ಧೀಕರಣ ಅಲ್ಲ. ಈ ತಿದ್ದುಪಡಿ ತಂದುದು ಒಳ್ಳೆಯದೆ. ಆದರೆ, ಹಾಗೆ ಶುದ್ಧೀಕರಣಗೊಂಡವರು ತಮ್ಮ ಮೂಲ ಜಾತಿಯ ಸಂಪರ್ಕವನ್ನು ಕಳೆದುಕೊಂಡಿದ್ದರೆ ಅಥವಾ ತಿಳಿದಿರದಿದ್ದರೆ ಅವರ ಭವಿಷ್ಯವೇನು ?

ಈ ಸಮಸ್ಯೆಗೆ ಧೀರೋದಾತ್ತ ಪರಿಹಾರ ಹುಡುಕ ಬಯಸಿಯೇ ಕ್ರಾಂತಿ ಪುರುಷ ಬಸವಣ್ಣನವರು ಸಮಾನತೆ, ಏಕದೇವೋಪಾಸನೆ, ವೈಚಾರಿಕತೆ ಪ್ರತಿಪಾದಿಸುವ ಲಿಂಗಾಯತ ಎಂಬ ಗಣಧರ್ಮವನ್ನು ಕೊಟ್ಟುದು. ಹೊರ - ಒಳಗಿನ ಪುರೋಹಿತಶಾಹಿ ಎಂಬ ಕಬಂಧ ಬಾಹುವಿಗೆ ಸಿಕ್ಕ ಲಿಂಗಾಯತ ಧರ್ಮವು ಬಸವಣ್ಣನವರು, ಅವರ ಸಮಕಾಲೀನ ವಚನಕಾರರ

ಆಶಯಕ್ಕೆ ಹೊರತಾಗಿ, ಬೇರೊಂದು ದಿಕ್ಕಿನಲ್ಲಿ ಸಾಗಿರುವುದು ನಿಜಕ್ಕೂ ವಿಷಾದನೀಯ. ಚತುರ್ವರ್ಣಗಳ ಸ್ಥಾನವನ್ನು ನಿರ್ಧರಿಸುವುದು ಯಜ್ಞೋಪವೀತ ; ಅದಿಲ್ಲದವನು ಶೂದ್ರ. ಜನಿವಾರ ಧರಿಸದ ಲಿಂಗಾಯತನು ವರ್ಣಾಶ್ರಮ ವ್ಯವಸ್ಥೆಯ ದೃಷ್ಟಿಯಲ್ಲಿ ಶೂದ್ರ ಮತ್ತು ಪಾಪ ಯೋನಿಜ. ಇದನ್ನು ಅರಿಯದೆ ಲಿಂಗಾಯತವು ಹಿಂದು ಧರ್ಮದೊಳಗಣ ಒಂದು ಜಾತಿ ಅಥವಾ ಪಂಥ ಎನ್ನುವ ಮಠಾಧೀಶರು, ಸಮಾಜ ನೇತಾರರು, ರಾಜಕೀಯ ಮುಂದಾಳುಗಳು ಇರುವುದು ಈ ಧರ್ಮ-ಸಮಾಜಗಳ ದುರ್ದೈವವೇ ಸರಿ. ವೈದಿಕ - ಹಿಂದು ಧರ್ಮದ ಮೂಲಭೂತ ವಿಚಾರಗಳಿಂದ ಪೂರ್ತಿ ಬೇರೆಯೇ ಆದ ಲಿಂಗಾಯತ ಧರ್ಮವು ಹಿಂದು ಧರ್ಮದ ಅಂಗವಾಗಿರಲು ಸಾಧ್ಯವೇ ಇಲ್ಲ.

ಶ್ರೀ ಶ್ರೀಧರ ಮೂರ್ತಿಯವರು ಹೇಳಿದಂತೆ, ಅಖಂಡ ಭಾರತವನ್ನು ಮತ್ತು ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳಲೋಸುಗ - ಇಂದು ಪ್ರಗತಿಪರ ಚಿಂತಕರಾದ ಬುದ್ಧ, ಬಸವಣ್ಣ, ಗುರು ನಾನಕ್, ಅಂಬೇಡ್ಕರ್, ಮಹಾತ್ಮ ಫುಲೆ ಮುಂತಾದವರ ವಿಚಾರಧಾರೆಯನ್ನು ವ್ಯವಸ್ಥಿತವಾಗಿ ಜನಮನದಲ್ಲಿ ಬಿತ್ತಿ ಬೆಳೆಯುವ ಕಾರ್ಯವು ಆಗಲೇ ಬೇಕಾಗಿದೆ; ಎಲ್ಲ ಮಾನವರ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಹಕ್ಕುಗಳಿಗಾಗಿ ಮೌಲ್ಯ ಸಹಿತ, ವಿಧಾಯಕ ಹೋರಾಟದ ಅಗತ್ಯ ಅನಿವಾರ್ಯವಾಗಿದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬೆಂಗಳೂರು

(ಈ ಪತ್ರವು ಪ್ರಜಾವಾಣಿ ದಿ.27-11-2001ರ ಸಂಚಿಕೆಯ ವಾಚಕರ ವಾಣಿ ವಿಭಾಗದಲ್ಲಿ ಅಲ್ಪ ಬದಲಾವಣೆಯೊಡನೆ ಪ್ರಕಟಗೊಂಡಿದೆ.)

ಸಂಘಟನೆ

ಸ್ವಾರ್ಥವ ಬಿಟ್ಟು ಸಂಘವ ಕಟ್ಟು
ಸಂಘದ ಬಲದಿಂದ ಅಂಧಕಾರವ ಮೆಟ್ಟು
ಮೂಢ ರೂಢಿಗಳ ಬದಿಗೆ ಇಟ್ಟು
ಭಿನ್ನಾಭಿಪ್ರಾಯಗಳ ತೆಗೆದು ಬಿಟ್ಟು
ಅಂತರಾತ್ಮನ ಕರೆಗೆ ಓಗೊಟ್ಟು
ಸತ್ಕಾರ್ಯದ ಕಾರ್ಯವ ಮಾಡು ಮನಸ್ಸಿಟ್ಟು
ಇದುವೆ ಶರಣರು ತಿಳಿಸಿದ ಗುಟ್ಟು
ಸಂಘದಿ ಸ್ವಾರ್ಥವ ಬೆರೆಸಿದೆಯಾದರೆ
ಖಂಡಿತ ನೀನು ತಿನ್ನುವೆ ಪೆಟ್ಟು.

ರಚನೆ : ನಾಗಶೆಟ್ಟಿ ಕೆ. ಶೆಟಕಾರ, ಬೀದರ್

ಒಂದು ವಿಲಕ್ಷಣ ಪ್ರಸಂಗ - ಮಾನವೀಯತೆಗಾಗಿ ತೆರಬೇಕಾದ ಬೆಲೆ

ಅಕ್ಕನ ಪ್ರವಚನದಲ್ಲಿ ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರು ಬರೆದ ಎರಡು ದೃಷ್ಟಾಂತ ಕಥೆಗಳು ಮುಂದೆ ವಿವರಿಸಲಿರುವ ಪ್ರಸಂಗದ ಹಿನ್ನೆಲೆಯಲ್ಲಿ ನೆನಪಾಗುತ್ತವೆ. ಓರ್ವ ಜೈನ ಗೃಹಸ್ಥನು ಓರ್ವ ಜ್ಞಾನಿಯಾದ ಮುನಿಯನ್ನು ಆಹ್ವಾನಿಸಿ, ಮನೆಗೆ ಕರೆದೊಯ್ಯುತ್ತಾನೆ. ಆತನು ರತ್ನಪಡಿ ವ್ಯಾಪಾರಿ. ಆ ಸಂದರ್ಭದಲ್ಲಿ ಮತ್ತೋರ್ವನು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಒಂದು ರತ್ನದ ಹರಳನ್ನು ತಂದು ಮಾರುತ್ತಾನೆ ಆತಿಥೇಯನು ಕೊಂಡು ಒಂದು ಮೇಜಿನ ಮೇಲಿಟ್ಟು ಮನೆಯೊಳಗಿನಿಂದ ಪತ್ನಿ ಕರೆಯಲು ಹೋಗುತ್ತಾನೆ. ಅಷ್ಟರಲ್ಲಿ ಒಂದು ಕೋಳಿಯು ಬಂದು ಆ ರತ್ನದ ಹರಳನ್ನು ಕೊಕ್ಕಿನಲ್ಲಿ ಎತ್ತಿಕೊಂಡು ನುಂಗಿಬಿಡುತ್ತದೆ. ಜೈನಮುನಿಯು ಇದನ್ನು ಕಂಡು ದಿಙ್ಮೂಢನಾಗುತ್ತಾನೆ.

ಹೊರಬಂದ ರತ್ನಪಡಿ ವ್ಯಾಪಾರಿಯು ರತ್ನದ ಹರಳೆಲ್ಲಿ ಎಂದು ಕೇಳುತ್ತಾನೆ. ಜೈನ ಮುನಿಯು ಮಾತನಾಡದೆ ಮೌನವ್ರತಧಾರಿಯಾಗಿರುತ್ತಾನೆ. ಇದರಿಂದ ಈತನೇ ಕದ್ದಿರಬೇಕೆಂದು ಆ ಗೃಹಸ್ಥನು ಮುನಿಯನ್ನು ಝುಂಕಿಸಿ ಕೇಳುತ್ತಾನೆ. ಆಗಲೂ ಆತನಿಂದ ಮೌನವೇ ಉತ್ತರವಾದಾಗ ಸಿಟ್ಟಿಗೆದ್ದು ಚಾಟಿ ತೆಗೆದುಕೊಂಡು ಹೊಡೆಯುತ್ತಾನೆ. ಮುನಿ ಮೌನವಾಗಿ ಸಹಿಸಿಕೊಳ್ಳುತ್ತಾನೆ. ಏಟಿನಿಂದ ರಕ್ತಸ್ರಾವವಾಗಿ ಅರೆ ಪ್ರಜ್ಞಾವಸ್ಥೆಗೆ ಬರುತ್ತಾನೆ. ಆಗ ಆ ಕೋಳಿ ಹಿತ್ತಿಲ ಕಡೆಯಿಂದ ಹಾರಿ ಬಂದಾಗ ಚಾಟಿ ಏಟು ಬಿದ್ದು ಪ್ರಜ್ಞೆ ತಪ್ಪಿ, ಬಿದ್ದು ಒದ್ದಾಡುತ್ತದೆ. ಆ ಮನೆಯ ಗೃಹಿಣಿ, "ಎಂಥಾ ಕೆಲಸ ಮಾಡಿದಿರಿ, ಕೋಳಿ ಸತ್ತು ಹೋಯಿತು. ಅದನ್ನು ಕೊಂದ ಪಾಪ ನಿಮ್ಮದಾಯಿತು" ಎಂದು ಕೂಗುತ್ತಾಳೆ. ಆಗ ಮುನಿಯು ತಟ್ಟನೆ, "ಅಯ್ಯೋ ಕೋಳಿ ಸತ್ತುಹೋಯಿತೆ ? ರತ್ನವನ್ನು ಆ ಕೋಳಿಯೇ ನುಂಗಿತು, ಅದರ ಹೊಟ್ಟೆಯಲ್ಲಿ ರತ್ನವಿದೆ" ಎನ್ನುತ್ತಾನೆ. ಗೃಹಸ್ಥ ಗಾಬರಿಗೊಂಡು ಕೋಳಿಯನ್ನು ಕೊಯಿಸಿದಾಗ ರತ್ನವು ಸಿಗುತ್ತದೆ. "ಗೊತ್ತಿದ್ದು ಸಹ ಏಕೆ ಹೇಳಲಿಲ್ಲ ?" ಎಂದಾಗ ಆ ಮುನಿಯು, "ನಾನು ಹೇಳಿದ್ದರೆ ನೀನು ಆ ಕೋಳಿಯನ್ನು ಕೊಯ್ಯಿಸುತ್ತಿದ್ದೆ. ಅದನ್ನು ಕೊಂದ ಪಾಪ ನನಗೆ ತಟ್ಟುತ್ತಿತ್ತು. ನನ್ನ ಜೀವರಕ್ಷಣೆಗಾಗಿ ಆ ಕೋಳಿಯನ್ನು ಕೊಲ್ಲಿಸುವುದು ನನ್ನ ಅಹಿಂಸಾ ವ್ರತಕ್ಕೆ ವಿರುದ್ಧವಾದುದು." ಎಂದನು.

ಛತ್ರಪತಿ ಶಿವಾಜಿ ಮಹಾರಾಜರ ಅಧ್ಯಾತ್ಮಿಕ ಗುರುವಾದ ಸಮರ್ಥ ರಾಮದಾಸರು ಒಮ್ಮೆ ಶಿಷ್ಯ ಶಿವಾಜಿಯಿಂದ ಆಹ್ವಾನಿಸಲ್ಪಟ್ಟು ರಾಜಧಾನಿಯತ್ತ ಶಿಷ್ಯರೊಡಗೂಡಿ ಪಾದಯಾತ್ರೆಯ ಮೂಲಕ ಸಾಗುತ್ತಿದ್ದರು. ಮಧ್ಯಾಹ್ನದ ವೇಳೆ ಆಯಾಸ ಪರಿಹರಿಸಿಕೊಳ್ಳಲು ಗಿಡವೊಂದರ ಕೆಳಗೆ ಬೀಡುಬಿಟ್ಟರು. ಆಹಾರಕ್ಕಾಗಿ ಹಳ್ಳಿಯೊಳಗೆ ಹೋಗಿ ಭಿಕ್ಷೆ ತರಲು ತಿಳಿಸಿದರು. ಹಸಿದಿದ್ದ ಶಿಷ್ಯರು ರಸ್ತೆಯ ಪಕ್ಕದಲ್ಲಿ ಜೋಳದ ಹೊಲ ಇರುವುದಾಗಿಯೂ ತಾವು ಹಸಿದಿರುವುದರಿಂದ ಹಸಿಯ ಕಾಳನ್ನು ತಿನ್ನಬಯಸುವುದಾಗಿ ಕೇಳಿದಾಗ, ಆಗ ಸಮರ್ಥ ರಾಮದಾಸರು- ಪರರ ವಸ್ತುವನ್ನು ಅವರ ಅನುಮತಿ ಇಲ್ಲದೆ ಮುಟ್ಟಬಾರದೆಂದು ಅವರನ್ನು ಕೇಳಿ ಪಡೆಯಬೇಕೆಂದು ತಿಳಿಸಿ, ಗುರುಗಳು ಧ್ಯಾನಾಸಕ್ತರಾದರು. ಶಿಷ್ಯರು ಯಾರನ್ನೂ ವಿಚಾರಿಸಲು ಹೋಗದೆ ತೆನೆ ಕಿತ್ತು ಬೆಳಸೆಯನ್ನು ತಿಂದು ಭಿಕ್ಷೆ ಬೇಡಲು ಊರೊಳಕ್ಕೆ ಹೋದರು

ಅಷ್ಟರಲ್ಲಿ ಹೊಲದ ಮಾಲಿಕ ಬಂದ ಯಾರೋ ತೆನೆ ಕಿತ್ತಿರುವುದು ತಿಳಿದು ವ್ಯಗ್ರಗೊಂಡು ಬಂದು ಧ್ಯಾನಾಸಕ್ತರಾಗಿದ್ದ ರಾಮದಾಸರನ್ನು ಚೆನ್ನಾಗಿ ಬಾರು ಮೂಡುವಂತೆ ಹೊಡೆದ. ಏನೂ ಅರಿಯದ ಅವರು ದಿಙ್ಮೂಢರಾಗಿರುವಾಗಲೇ ಭಿಕ್ಷೆ ಬೇಡಲು ಹೋದ ಶಿಷ್ಯರು ಬಂದು ಗುರುಗಳನ್ನು ಹೊಡೆಯುವುದು ಕಂಡು ದುಃಖಿತರಾಗಿ ಅವರು ಶಿವಾಜಿ ಮಹಾರಾಜರ ಗುರು ಸಮರ್ಥ ರಾಮದಾಸರೆಂದು ತಿಳಿಸಿ, ತಾವೇ ತೆನೆ ಕಿತ್ತ ತಪ್ಪು ಮಾಡಿದುದನ್ನು ಒಪ್ಪಿಕೊಂಡರು. ಶಿವಾಜಿಯ ಗುರುಗಳೆಂದು ತಿಳಿದ ಆ ಹೊಲದ ಮಾಲಿಕನ ಜಂಘಾಬಲ ಉಡುಗಿತು. ಸಾಷ್ಟಾಂಗ ನಮಸ್ಕಾರ ಮಾಡಿ ತಪ್ಪೊಪ್ಪಿಕೊಂಡು, ಮಹಾರಾಜರ ಗಮನಕ್ಕೆ ತರಬಾರದೆಂದು ಅಂಗಲಾಚಿದ.

ಗುರುಗಳು ಎಲ್ಲರಿಂದಲೂ, ಈ ಪ್ರಸಂಗವನ್ನು ಶಿವಾಜಿ ಮಹಾರಾಜರ ಗಮನಕ್ಕೆ ತರಬಾರದೆಂದು ಮಾತು ಪಡೆದುಕೊಂಡರು. ಅರಮನೆಗೆ ಆಗಮಿಸಿದ ಗುರುಗಳನ್ನು ಸ್ವಾಗತಿಸಿದ ಶಿವಾಜಿ ಗುರುಗಳ ಮೈಗೆ ಎಣ್ಣೆ ತಿಕ್ಕುವಾಗ ಬೆನ್ನ ಮೇಲೆ ಮೂಡಿದ ಬಾಸುಂಡೆ ಗೆರೆ ನೋಡಿ ಗಾಬರಿಗೊಂಡು ಕಾರಣ ಕೇಳಿದರು. ಮುಳ್ಳು ಕಂಟಿ ತರೆದು ಆದ ಗಾಯ ಎಂದು ಗುರುಗಳು ಹೇಳಿದರು. ಶಿವಾಜಿಗೆ ನಂಬಲಾಗಲಿಲ್ಲ, ಶಿಷ್ಯರನ್ನು ಬೆದರಿಸಿ ಕೇಳಿದಾಗ ಅವರು ಎಲ್ಲವನ್ನು ವಿವರವಾಗಿ ತಿಳಿಸಿದರು. ಕೋಪಗೊಂಡ ಶಿವಾಜಿ ಮಹಾರಾಜರು ಆ ಹೊಲದ ಮಾಲಿಕನನ್ನು ಕರೆಸಿ ಗುರುಗಳ ಮುಂದೆ ನಿಲ್ಲಿಸಿ ''ನೀವು ಏನು ಶಿಕ್ಷೆ ಕೊಡಬೇಕೆಂದರೆ ಆ ಶಿಕ್ಷೆಯನ್ನು ಕೊಡುತ್ತೇನೆ'' ಎಂದರು. ಆಗ ಗುರುಗಳು ನಸುನಗುತ್ತಾ, ''ಶಿಷ್ಯರು ತೆನೆ ಕಿತ್ತು ಜಮೀನಿನ ಮಾಲಿಕನಿಗೆ ಬಹಳ ಹಾನಿಯಾಗಿದೆ. ಅವನ ಅನುಮತಿ ಇಲ್ಲದೆ ತೆನೆ ಕಿತ್ತ ಶಿಷ್ಯರಿಂದ ಗುರುಗಳಿಗೆ ಕಲಂಕ ತಟ್ಟಿದೆ. ಆದ್ದರಿಂದ ಆತನಿಗೆ ಸೂಕ್ತ ಪರಿಹಾರ ಕೊಡಬೇಕು'' ಎಂದು ಶಿವಾಜಿಗೆ ಆಜ್ಞಾಪಿಸಿದರು.

ಈ ಪ್ರಸಂಗದಿಂದ ಕಲಿಯಬೇಕಾದ ಪಾಠ ಹಲವಾರು

1. ಅನುಮತಿ ಇಲ್ಲದೆ ಇನ್ನೊಬ್ಬರ ವಸ್ತುವನ್ನು ಮುಟ್ಟುವುದು ಅಪರಾಧ, ಅದು ಕಳ್ಳತನ.
2. ಶಿಷ್ಯರುಗಳು ಮಾಡುವ ತಪ್ಪಿನಿಂದ ಗುರುಗಳಿಗೆ ಕೆಟ್ಟ ಹೆಸರು ಬರುತ್ತದೆ.
3. ಜನರು ಸಹ ಎಚ್ಚರಿಕೆಯಿಂದ ತಮ್ಮ ವಸ್ತುಗಳನ್ನು ಕಾಯ್ದುಕೊಳ್ಳಬೇಕು.
4. ಯಾರೋ ಮಾಡಿದ ತಪ್ಪಿಗೆ ಮತ್ತಾರನ್ನೋ ವಿಚಾರ ಮಾಡದೆ, ದುಡುಕಿ ದೂಷಿಸುವುದು, ಶಿಕ್ಷಿಸುವುದು ತಪ್ಪು; ಕೋಪದಿಂದ ವರ್ತಿಸುವುದು ತಪ್ಪು.
5. ಮಾನವೀಯ ಹೃದಯವಿದ್ದವರು ತಾವು ಮಾಡುವ ಉಪಕಾರದಿಂದ ಸಾಕಷ್ಟು ತೊಂದರೆ ಅನುಭವಿಸಬೇಕಾಗುವುದು.

ಈ ಹಿನ್ನೆಲೆಯಲ್ಲಿ ನಡೆದ ಒಂದು ವಿಲಕ್ಷಣ ಪ್ರಸಂಗವನ್ನು ಚಿತ್ರಿಸುತ್ತೇನೆ. ದಿ.5-12-2001, ನಮ್ಮ ಬಸವ ಮಂಟಪದಲ್ಲಿ ಒಬ್ಬರು ಗರ್ಭವತಿಗೆ ಲಿಂಗಧಾರಣೆ ಮಾಡುವ ಮತ್ತು ಸೀಮಂತ ಸಂಸ್ಕಾರವಿತ್ತು. ಹಿಂದಿನ ದಿನ ಉತ್ತರ ಕರ್ನಾಟಕದ ಧಾರವಾಡದ ಓರ್ವ ವಯಸ್ಕರು ಬಂದು ತಮ್ಮ ಮಗಳಿಗೆ ಸೀಮಂತವಿದೆ. ಬೆಂಗಳೂರಿನಲ್ಲಿ ಇರುವ ಮಗಳಿಗೆ ದೀಕ್ಷಾ ಸಂಸ್ಕಾರ ಮಾಡಬೇಕು. ಇತ್ತ.ಕಡೆ ಆ ಪದ್ಧತಿ ಇಲ್ಲ. ಆದ್ದರಿಂದ ಯಾರನ್ನಾದರೂ ಕಳಿಸಿಕೊಡಿರಿ ಎಂದರು. ಮಾತೆ ದಾನೇಶ್ವರಿಯವರನ್ನು ಕಳಿಸಿಕೊಟ್ಟೆ. ಅವರ ಜೊತೆಗೆ ಸಹಾಯಕರನ್ನಾಗಿ ಓರ್ವ ಶರಣೆಯನ್ನು ಮತ್ತು ಇತ್ತೀಚೆಗೆ ಬಂದು ಆಶ್ರಯ ಪಡೆದಿದ್ದ ಓರ್ವ ಹುಡುಗಿಯನ್ನೂ

ಕಳಿಸಿಕೊಟ್ಟೆವು. ಬಸವೇಶ್ವರ ಪೂಜಾವ್ರತ, ದೀಕ್ಷೆ, ಗರ್ಭವತಿಗೆ ಪುಷ್ಪವೃಷ್ಟಿ, ಆರತಿ ಎಲ್ಲ ಮಾಡಿ ಪ್ರಸಾದ ಪೂರೈಸಿಕೊಂಡು ಮೂರುವರೆಗೆ ದಾನೇಶ್ವರಿಯವರು ಬಂದರು. ಯಲಹಂಕದಲ್ಲಿ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳ ಪ್ರವಚನ ಇದ್ದುದರಿಂದ ಅತ್ತ ಹೋಗುವವರು ಅತ್ತ ಹೋದರು.

ಸಂಜೆ ಆರು ಗಂಟೆಯಾಗಿತ್ತು. ಅಂದು ಸೀಮಂತ ಮಾಡಿಸಿಕೊಂಡ ಗರ್ಭಿಣಿ ಮಹಿಳೆಯ ಪತಿ ಮತ್ತು ಅವರ ಹತ್ತಿರದ ಬಂಧುವಾದ ಓರ್ವ ಸ್ತ್ರೀ ಬಂದರು. ಆ ಮಹಿಳೆ ಜೋರಾಗಿ ಅಳುತ್ತಿದ್ದಳು. ಏಕೆ ಎಂದರೂ ಹೇಳದೆ ಏನನ್ನೋ ಹುಡುಕಾಡುತ್ತಿದ್ದರು. ಅವರ ಮನೆಯ ಅಲ್ಮೈರಾದಲ್ಲಿ ಒಡವೆಗಳನ್ನಿಡಲಾಗಿತ್ತೆಂದು, ಅದಕ್ಕೆ ಕೀಲಿ ಹಾಕದೆ ಹಾಗೆಯೇ ಬಾಗಿಲು ಮುಂದೆ ಮಾಡಲಾಗಿತ್ತೆಂದು, ಸುಮಾರು 70-80 ಸಾವಿರ ರೂಗಳ ಬೆಲೆ ಬಾಳುವ ಒಡವೆ ಕಳುವಾಗಿದೆಯೆಂದು ಹೇಳಿದರು. ಮನೆಯಲ್ಲಿ ಮನೆಯ ನಾಲ್ಕಾರು ಜನರು ಬಿಟ್ಟರೆ ಹೊರಗಿನವರು ಯಾರೂ ಬಂದಿರಲಿಲ್ಲ. ಸಂಜೆ 6ಕ್ಕೆ ಆರತಿ ಇಟ್ಟುಕೊಂಡು ಇನ್ನಿತರ ಬಂಧುಗಳನ್ನು ಆಹ್ವಾನಿಸಲಾಗಿತ್ತು. ಆದ್ದರಿಂದ ಗೃಹಿಣಿಗೆ ಅಲಂಕಾರ ಮಾಡಲು ಒಡವೆ ತೆಗೆದುಕೊಳ್ಳಲು ಹೋದಾಗ ಒಡವೆಗಳು ಕಳುವಾದುದು ಗೊತ್ತಾಯಿತು ಎಂದು ಹೇಳಿದರು. ನಮಗಂತೂ ಸಾವಿರ ಚೇಳು ಕುಟುಕಿದ ಅನುಭವ. ಅಷ್ಟರಲ್ಲಿ ಆ ಮಹಿಳೆಯ ಪತಿ ಬಾಯಿಗೆ ಬಂದಂತೆ ಬೈಯುತ್ತ, ಪೋಲೀಸ್ ಕಂಪ್ಲೇಂಟ್ ಕೊಡುವುದಾಗಿಯೂ, ಏನು ಮಾಡಬೇಕೋ ಅದನ್ನು ಮಾಡುವುದಾಗಿಯೂ ಹೇಳುತ್ತ ಆವೇಶದಿಂದ ಬಂದ. ಯಾವ ರೀತಿಯಲ್ಲೂ ಸಂಬಂಧಿಸದ ನನ್ನನ್ನು ಆತ ದೂಷಿಸತೊಡಗಿದ್ದರಿಂದ ನಮ್ಮ ಸಿಬ್ಬಂದಿಗೆ ಸಿಟ್ಟು ಬರುತ್ತಿತ್ತು. ಮತ್ತು ನಾನೇ ಸಮಾಧಾನ ಮಾಡಿ, '' ಇರಲಿ, ದೊಡ್ಡ ಮೊತ್ತದ ಒಡವೆ ಕಳೆದುದರಿಂದ ಮತಿಭ್ರಾಂತರಾಗಿ ಏನೋ ಬೈದರೆ ನಾವು ತಪ್ಪು ತಿಳಿಯಬೇಕಾಗಿಲ್ಲ. ಈಗ ಈ ಸಮಸ್ಯೆಗೆ ಸೂಕ್ತ ಪರಿಹಾರ ಹುಡುಕುವುದೊಂದೇ ದಾರಿ'' ಎಂದು ಚಿಂತಿಸತೊಡಗಿದೆವು. ಪೂಜೆಗೆ ಹೋಗಿದ್ದ ಶರಣೆ. ರುದ್ರಾಣಮ್ಮ ಹೊರಗೆ ಹೋಗಿದ್ದವರು ಬಂದರು. ವಿಷಯ ತಿಳಿಸಲಾಯಿತು. ಅಂದು ಹೋಗಿದ್ದವರಲ್ಲಿ ನೇತೃತ್ವ ಮಾತೆ ದಾನೇಶ್ವರಿ ಅವರದು. ರುದ್ರಾಣಮ್ಮ ನಿಜ ಶರಣೆ. ತಮ್ಮ ಯಜಮಾನರು ಗಳಿಸಿರುವ ಅಪಾರ ಸಂಪತ್ತು ಒಡವೆಗಳಲ್ಲೇ ಆಸಕ್ತಿ ಹೊಂದಿರದ ನಿರ್ಲಿಪ್ತರು. ಶರಣ ಮೇಳದ ಸಮಯದಲ್ಲಿ ಸೇವೆ ಮಾಡಬೇಕೆಂದು ಬಯಸಿ ಬಂದವರು. ಇನ್ನು ಉಳಿದವಳು ಒಬ್ಬಳು ಶೋಭಾ ಎಂದು. (ಅದೂ ಸುಳ್ಳು ಹೆಸರು ಇರಬಹುದೇ ಎಂಬ ಸಂದೇಹ ಮೊನ್ನೆ ಬೀದರ್‌ಗೆ ಹೋಗಿ ಬಂದ ಮೇಲೆ ಅನ್ನಿಸಿದೆ.) ಕೇವಲ 3-4 ತಿಂಗಳ ಹಿಂದೆ ಬಂದ ಆಕೆ, '' ತನ್ನ ತಾಯಿ ಸತ್ತು ಹೋಗಿದ್ದಾಳೆ. ತಂದೆ ಬೇರೊಂದು ಮದುವೆಯಾದ ; ಮಲತಾಯಿ ಸಿಕ್ಕಾಪಟ್ಟೆ ಹೊಡೆದು ಎಲ್ಲಾದರೂ ಹೋಗು, ಸಾಯಿ ಎಂದು ಹೊರಹಾಕಿದ್ದಾಳೆ ಕಾಲಿಗೆ ಕಬ್ಬಿಣದ ಸಳಿ ತಗೊಂಡು ಹೊಡೆದುದರಿಂದ ಹೀಗಾಗಿದೆ '' ಎಂದು ಹೇಳಿದ್ದಳು. ನಿಜಕ್ಕೂ ಕಾಲು ಕೊಳೆಯುತ್ತಿತ್ತು. ಮರುಕದಿಂದ ಆಶ್ರಯಕೊಟ್ಟುದಲ್ಲದೆ ವೈದ್ಯರಿಗೆ ತೋರಿಸಲಾಗಿತ್ತು. ಸಾಮಾನ್ಯ ಗುಳಿಗೆ, ಚುಚ್ಚುಮದ್ದಿನಿಂದ ವಾಸಿಯಾಗದಿದ್ದರೆ ನಂತರ ಆಪರೇಷನ್ ಮಾಡುವುದಾಗಿ ವೈದ್ಯರು ಹೇಳಿದ್ದರು. ಚುಚ್ಚುಮದ್ದು, ಗುಳಿಗೆ, ಮುಲಾಮುಗಳಿಗೆ ಕಾಲಿನ ಗಾಯ ಮಾಯುತ್ತಾ ಬಂದಿತ್ತು.

ಆಕೆಯನ್ನು ಮಾತೆ ಮಂಗಳಾದೇವಿಯ ಸಿಬ್ಬಂದಿಗೆ ಕಳಿಸಲಾಗಿತ್ತು. ಆದರೆ ಕೆಲವೇ ದಿನಗಳಲ್ಲಿ ಅವರು, ''ಶೋಭಾ ಬಹಳ ಸುಳ್ಳು ಹೇಳುತ್ತಾಳೆ. ಜೊತೆಗೆ ಹಣ ಕದಿಯುವ ಚಟವಿದೆ. ನಮ್ಮ ಬಳಿ ಬೇಡ '' ಎಂದು ಕಳಿಸಿದ್ದರು. ಬಂದಾಗ ವಿಷಯ ತಿಳಿಸಿ, '' ಎಲ್ಲಾದರೂ ಹೋಗು ; ನಿನ್ನಂಥವಳನ್ನು ಇಟ್ಟುಕೊಂಡರೆ ನಮ್ಮ ಸಂಸ್ಥೆಗೆ ಅಪಕೀರ್ತಿ'' ಎಂದು ನಾನು ಹೇಳಿದಾಗ ಬಿಕ್ಕಿಬಿಕ್ಕಿ ಅತ್ತು '' ಇನ್ನೆಂದೂ ತಪ್ಪು ಮಾಡುವುದಿಲ್ಲ ಕಳಿಸಬೇಡಿರಿ. ಮಲತಾಯಿ ಬಹಳ ಕೆಟ್ಟವಳು'' ಎಂದು ಗೋಳಾಡಿದ್ದರಿಂದ, ''ಇನ್ನೊಂದು ಅವಕಾಶ ಕೊಡುತ್ತೇನೆ. ಮುಂದೆ ಸರಿಯಾಗಿ ಇರಬೇಕು'' ಎಂದು ತಾಕೀತು ಮಾಡಿದೆ. ಒಪ್ಪಿದಳು.

ಈ ಹಿನ್ನೆಲೆಯನ್ನು ಚಿಂತಿಸಿದಾಗ ಈಗ ಆಕೆಯ ಬಗ್ಗೆ ಸಂದೇಹ ಬಂದಿತು. ಅದನ್ನೇ ಒಡವೆ ಕಳೆದುಕೊಂಡವರಿಗೆ ಹೇಳಿ, ಆಕೆ ಈಗ ಪ್ರವಚನ ಕೇಳುವವರ ಸಂಗಡ ಹೋಗಿದ್ದಾಳೆ ಬಂದ ತಕ್ಷಣ ವಿಚಾರಣೆ ಮಾಡೋಣಾ. ನೀವು ತಾಳ್ಮೆ ಕಳೆದುಕೊಳ್ಳಬೇಡಿರಿ. ನಿಮಗೆ ಎಷ್ಟು ನೋವೋ ನಮಗೂ ಅಷ್ಟೇ ಇದೆ. ಇಂಥ ಪ್ರಸಂಗ ಎಂದೆಂದೂ ಘಟಿಸಿರಲಿಲ್ಲ. ಇನ್ನು ಮುಂದೆ ಭಕ್ತರು ಕರೆದರೆ ಆಹ್ವಾನ ಸ್ವೀಕರಿಸಿ ಅವರಲ್ಲಿಗೆ ಹೋಗಬೇಕೋ ಬೇಡವೋ ಎಂದು ಚಿಂತಿಸುವಂತಾಗಿದೆ. ಎಂದೂ ಬೆಲೆ ಬಾಳುವ ವಸ್ತುಗಳನ್ನು ಹಾಗೆ ಇಡಬಾರದು. ನಿಮ್ಮ ಉದಾಸೀನತೆಯಿಂದ ಎಷ್ಟು ಜನರಿಗೆ ನೋವು'' ಎಂದು ಹೇಳಿದೆ. ಆಗ ಅವರು ಹೇಳಿದರು. ''ಅಹುದು ಪೋಲೀಸ್ ಅಧಿಕಾರಿ ಸಹ ಅದನ್ನೇ ಹೇಳಿದರು. ಆಶ್ರಮದವರ ಮೇಲೆ ಹೆಣ್ಣು ಮಕ್ಕಳ ಮೇಲೆ ಸಂಶಯಪಡುತ್ತಿದ್ದೀರಿ. ಅಂಥಲ್ಲಿ ಬರಲು ನಮಗೂ ಮುಜುಗರ ಎಂದರು.'' '' ಈ ಸಂದರ್ಭದಲ್ಲಿ ಪೋಲೀಸರ ನೆರವು ಬೇಕು. ಸದ್ಯಕ್ಕೆ ಬರವಣಿಗೆಯಲ್ಲಿ ಕೊಟ್ಟು ಆಕೆಯನ್ನು ಹಿಡಿಸುವುದು ಬೇಡ. ಹೆಣ್ಣು ಹುಡುಗಿ ಏನಾದರೂ ಅನಾಹುತವಾದರೆ ಎಲ್ಲರಿಗೂ ವ್ಯಥೆಯಾಗುವುದು. ಆದರೆ ಪೋಲೀಸ್ ಸಮವಸ್ತ್ರದಲ್ಲಿ ಒಬ್ಬರು ಬಂದು ಕುಳಿತಿದ್ದರೆ ಮಾತನಾಡಲು ನನಗೆ ಅನುಕೂಲ'' ಎಂದೆ. ಒಪ್ಪಿ, ಹೋಗಿ, ವಿನಂತಿಸಿ ಕರೆತಂದರು. ಪ್ರವಚನದಿಂದ ಜನರು ಬರುತ್ತಲೇ ಆಕೆಯನ್ನು ನೇರವಾಗಿ ಪ್ರಶ್ನಿಸಿದೆವು. '' ಮನೆಯವರು ಕಂಪ್ಲೇಂಟ್ ಕೊಟ್ಟಿದ್ದಾರೆ. ನಿನ್ನನ್ನು ಕರೆದೊಯ್ದು ವಿಚಾರಣೆಗೆ ಒಳಪಡಿಸುತ್ತಾರೆ. ಪೋಲೀಸರ ಕೈಗೆ ಸಿಕ್ಕರೆ ಮುಂದೆ ಏನಾದೀತೋ? ಯಾವುದಾದರೂ ದುರ್ಬಲ ಗಳಿಗೆಯಲ್ಲಿ ನೀನು ತೆಗೆದು ಇಟ್ಟುಕೊಂಡಿರಬಹುದು. ತಪ್ಪೊಪ್ಪಿಕೊಂಡು ಕೊಟ್ಟುಬಿಡು. ನಿನ್ನನ್ನು ಕ್ಷಮಿಸುತ್ತೇನೆ. ಮಠದಿಂದ ಹೊರಗೆ ಹಾಕುವುದಿಲ್ಲ. ಧರ್ಮಪಿತರು ಕಳ್ಳರನ್ನೂ, ಕೊಲೆಗಡುಕರನ್ನೂ ಸಹ ಕ್ಷಮಿಸಲಿಲ್ಲವೆ ? ನಾನು ನಿನ್ನನ್ನು ಕ್ಷಮಿಸುತ್ತೇನೆ.'' ಎಂದರೂ ಒಪ್ಪಿಕೊಳ್ಳಲಿಲ್ಲ. ಒಂದೇ ಹಟ, ''ತಾನು ಕದ್ದಿಲ್ಲ ಪೋಲೀಸರು ಕರೆದೊಯ್ದು ಬೇಕಾದರೆ ಬಡಿಯಲಿ, ಕೊಲ್ಲಲಿ.'' ರಾತ್ರಿ ಹನ್ನೊಂದರವರೆಗೂ ಇದೇ ಆಲಾಪ.

''ಸ್ವಲ್ಪ ಸಮಯ ಕೊಡಿರಿ, ನೋಡೋಣ ಇನ್ನಷ್ಟು ಬುದ್ಧಿ ಹೇಳುತ್ತೇವೆ. ಅಷ್ಟಕ್ಕೂ ಬಗ್ಗದಿದ್ದರೆ ನಾಳೆ ಕಂಪ್ಲೇಂಟ್ ಬರವಣಿಗೆಯಲ್ಲಿ ಕೊಡಿರಿ '' ಎಂದು ತಿಳಿಸಿದೆ. ಇಷ್ಟು ದೃಢವಾಗಿ ಅವಳ ಬಗ್ಗೆ ಸಂಶಯಪಡಲು ನನಗೆ ಎರಡು ಸುಳಿವು ಸಿಕ್ಕಿದ್ದವು. ಒಂದು, ಎಲ್ಲರೂ ಪೂಜೆ ಆರತಿಯಲ್ಲಿ ತಲ್ಲೀನರಾಗಿದ್ದಾಗ ಆಕೆ ಕೋಣೆಯೊಳಗೆ ಹೋಗಿ ಬಾಗಿಲು ಹಾಕಿಕೊಂಡುದ್ದಾಗಿ ರುದ್ರಾಣಮ್ಮ ತಿಳಿಸಿದ್ದರು. ನಂತರ ಸಂಜೆ ಇನ್ನೋರ್ವ ಸಾಧಕಿಯ ಬಳಿ, ''ನನಗೆ ರುದ್ರಾಕ್ಷಿ

ಸರವನ್ನು ಬಂಗಾರದಲ್ಲಿ ಸುತ್ತಿಸಿ ಹಾಕಿಕೊಳ್ಳುವ ಆಸೆಯಾಗಿದೆ '' ಎಂದಿದ್ದಳಂತೆ. ''ಅಷ್ಟು ಬಂಗಾರ ನಿನ್ನಲ್ಲಿ ಇದೆಯೆ ? ಎಂದಾಗ '' ನಮ್ಮ ತಾಯಿ ಸಾಯುವಾಗ ಅವರ ಸರ ನನಗೆ ಕೊಟ್ಟು ಹೋಗಿದ್ದಾರೆ.'' ಎಂದಿದ್ದಳಂತೆ.

ಮನೆಯವರು ಹೋದ ಮೇಲೆ ಸಾಧಕಿಯರಿಗೆ ಹೇಳಿದೆ, ''ಅವಳು ಒಬ್ಬಳನ್ನೇ ಬಿಡಬೇಡಿ, ಒಂದು ವೇಳೆ ಕದ್ದಿರದಿದ್ದರೆ ಎಲ್ಲರ ಎದುರಿಗೆ ಅವಮಾನವಾಯಿತು ಎಂದು ಆತ್ಮಹತ್ಯೆಗೆ ಯತ್ನಿಸಬಹುದು. ಇಲ್ಲವೇ ಒಡವೆಗಳನ್ನು ಮುಚ್ಚಿ ಇಟ್ಟುಬಿಡಬಹುದು.''

ಹೀಗಾಗಿ ನಾಲ್ಕೈದು ಜನ ಆಕೆಯ ಚಲನವಲನ ನೋಡ ತೊಡಗಿದರು. ಸ್ವಲ್ಪ ಹೊತ್ತಿನ ಮೇಲೆ ಒಂದು ಮುಷ್ಟಿಯಲ್ಲಿ ಏನನ್ನೋ ಹಿಡಿದು ನೀರುಳ್ಳಿ ರಾಶಿಯೊಳಗೆ ಎಸೆದುದನ್ನು ಒಬ್ಬರು ನೋಡಿದ್ದಾರೆ. ಹಾಗೆ ಎಸೆದ ಬಳಿಕ ಒಂದು ಬಂಗಾರದ ಮಾಟಿಯ ಕೊಕ್ಕೆ ಜಾಕೀಟಿಗೆ ಸಿಕ್ಕಿಕೊಂಡು ಹೊಳೆಯುವುದನ್ನು ಓರ್ವರು ನೋಡಿದ್ದಾರೆ. ಒಂದು ಸಿಗುತ್ತಲೇ ಉಳಿದುದು ಎಲ್ಲಿ ಎಂದು ಕೇಳುತ್ತಾ ಅಂತೂ ಕಳೆದ ಎಲ್ಲ ಒಡವೆ ಸಿಗುವ ತನಕ ಸಹ ಸಾಧಕಿಯರು ಪ್ರಯತ್ನಿಸಿದ್ದಾರೆ. ರಾತ್ರಿ ಒಂದೂವರೆಗೆ ನನಗೆ ತಿಳಿಸಿದರು. ತಕ್ಷಣ ಮನೆಯವರಿಗೆ ಫೋನ್ ಮಾಡಿದೆವು. ಅವರು ಬೆಳಿಗ್ಗೆ 7ರ ನಂತರ ಬರುವುದಾಗಿ ಹೇಳಿದರು. ''ಬೇಡಪ್ಪ, ಈ ಸಹವಾಸ ಸದ್ಯ ಸಿಕ್ಕದ್ದೇ ದೊಡ್ಡದು ; ಅವಳು ಎಲ್ಲಾದರೂ ಪ್ರವಚನದಿಂದ ಹಾಗೆಯೇ ಸಿಟಿ ಬಸ್ ಹತ್ತಿ ಹೋಗಿದಿದ್ದರೆ ಈ ಪ್ರಸಂಗವನ್ನು ಹೇಗೆ ನಿಭಾಯಿಸಲು ಸಾಧ್ಯವಿತ್ತು ? ಅವಿದ್ದರೆ ನಮ್ಗ್ಯಾರಿಗೂ ನಿದ್ದೆ ಇರುವುದಿಲ್ಲ. ಮೊದಲು ಒಯ್ಯಿರಿ'' ಎಂದು ಹೇಳಿದೆವು. ರಾತ್ರಿ ಎರಡು ಗಂಟೆಗೆ ಬಂದು ಲಿಸ್ಟ್ ಬರೆದುಕೊಟ್ಟ ಪ್ರಕಾರ ಎಲ್ಲ ಪಡೆದು ಒಯ್ದಮೇಲೆ ಮಠದವರಿಗೆಲ್ಲ ನಿರುಮ್ಮಳವಾಗಿ ನಿದ್ದೆ ಬಂದಿತು. ಬೆಳಗಾಗೆದ್ದು ಆಕೆಯೂ ಹೋದಳು. ಅತ್ಯಂತ ಉದ್ವೇಗಕ್ಕೆ ಕಾರಣವಾದ ಈ ಪ್ರಸಂಗ ಕಳೆದ ಒಡವೆ ಸಿಕ್ಕುವ ಮೂಲಕ ಸುಖಾಂತ್ಯ ಕಂಡುದು ಸಮಾಧಾನ ತಂದಿತಾದರೂ ಇದು ಬಹಳ ಒಳ್ಳೆಯ ಪಾಠವನ್ನೂ ಕಲಿಸುತ್ತದೆ.

ಭಾರತೀಯರಲ್ಲಿ ಒಡವೆಗಳ ಮೋಹ ಬಹಳ ; ಎದ್ದು ಕಾಣುವಂತೆ ಸರಗಳನ್ನು ಸೀರೆಯ ಹೊರಗೆ ಕಾಣುವಂತೆ ಪ್ರದರ್ಶಿಸುತ್ತಾರೆ. ಬಂಗಾರವು ಜೀವಕ್ಕೆ ವಿಪತ್ತು ತರುತ್ತದೆ ಎಂದು ಗೊತ್ತಿದ್ದರೂ ಕೂಡಿ ಹಾಕಿಕೊಳ್ಳುತ್ತಾರೆ. ವರಮಹಾಲಕ್ಷ್ಮಿ ಮುಂತಾದವಕ್ಕೆ ಮನೆಯಲ್ಲಿರುವ ಎಲ್ಲ ಒಡವೆ ಹೇರಿ ಪ್ರದರ್ಶನ ಮಾಡಿ, ತಮ್ಮ ಸಂಪತ್ತನ್ನು ಇತರರಿಗೆ ತೋರಿಸಿಕೊಳ್ಳುತ್ತಾರೆ. ವಿಶೇಷ ಕಾರ್ಯಗಳಿದ್ದಾಗ ಮನೆಯಲ್ಲಿರುವ ಬಂಗಾರ, ಬೆಳ್ಳಿ ಪ್ರದರ್ಶನಕ್ಕೆ ಬಂದಿರುತ್ತವೆ. ಬಂದವರನ್ನು ಸ್ವಾಗತಿಸುವ, ಬರಮಾಡಿಕೊಳ್ಳುವ ಉದ್ವೇಗದಲ್ಲಿ ಬೀರುಗಳ ಬೀಗ ಹಾಕುವುದಿಲ್ಲ. ಬಂದ ಬಂಧುಬಳಗದವರೇ ಕದ್ದೊಯ್ಯಬಹುದು ; ಇಲ್ಲವೇ ಕಳ್ಳರು ಆಹ್ವಾನಿತರಂತೆ ಬಂದು ಯಾರ ಗಮನವೂ ಇರದಾಗ ಸಾಮಾನು ಎತ್ತಿಬಿಡಬಹುದು. ಈಗ ನಮ್ಮ ಪಾಲಿಗೆ ಇನ್ನೊಂದು ಕೆಲಸ ಹೆಚ್ಚಾಯಿತು, ಪೂಜೆ, ಪ್ರಾರ್ಥನೆ ಮಾಡಿಸುವುದರೊಡನೆ ಪ್ರವಚನ ಹೇಳುವುದರೊಡನೆ ಮನೆಯಲ್ಲಿ ಬೀರಿನ ಬೀಗ ಹಾಕಿಟ್ಟಿದ್ದೀರಾ ? ಎಂದು ಮನೆಯೊಡೆಯರಿಗೆ ಎಚ್ಚರಿಕೆ ನೀಡುವುದು. ಆದ ಅನುಭವ ಅತ್ಯಂತ ಕೆಟ್ಟದಾಗಿದ್ದರೂ ಅದು ನಮಗೆ ಕಲಿಸಿದ ಪಾಠ ಉತ್ತಮವಾದುದೇ ಆಗಿದೆ.

– ಮಾತಾಜಿ

ಸಂಸಾರವೆಂಬುದೊಂದು ಗಾಳಿಯ ಸೊಡರು ; ಸಿರಿಯೆಂಬುದೊಂದು ಸಂತೆಯ ಮಂದಿ
ಇದನೆಚ್ಚಿ ಕೆಡಬೇಡ ಸಿರಿಯೆಂಬುದ ; ಮರೆಯದೆ ಪೂಜಿಸು ಲಿಂಗದೇವನ. -ವಿಶ್ವಗುರು ಬಸವಣ್ಣ

☹ಸಮಸ್ಯೆ ? - ಸಮಾಧಾನ !☺

✉ಶರಣೆ. ಸುನಂದಮ್ಮ, ಊರು ಬೇಡ. -ಮೊದಲು ನಿಮ್ಮಲ್ಲಿದ್ದು ತರಬೇತಿ ಹೊಂದಿ ನಿಮ್ಮ ಸಂಸ್ಥೆಯಿಂದ ಧರ್ಮ ಪ್ರಚಾರಕ್ಕೂ ಬಂದು ಹೋದ ಓರ್ವ ಮಹಿಳೆ ಈಗ ಸಂಸ್ಥೆಯಿಂದ ಹೊರಹೋಗಿದ್ದು, ಆಕಸ್ಮಿಕ ಭೇಟಿಯಾದರು. ತಮ್ಮಿಂದ ಎಲ್ಲ ಜ್ಞಾನ ಪಡೆದು ಗುರುಗಳೆಂದು ತಮ್ಮ ಹೆಸರು ಹೇಳುತ್ತಿಲ್ಲ. ಅದಕ್ಕೆ ಸಿಟ್ಟು ಬಂದು ನಾನು ಪ್ರಶ್ನಿಸಿ, ಗುರು ದ್ರೋಹಿ ನೀನು ಎಂದೆ, ಆಕೆ ನಿರುತ್ತರಳಾಗಿ ತಲೆ ತಗ್ಗಿಸಿದಳು. ನೀವೇನಂತೀರಿ ?

★ ನಾನು ಅವರ ಪ್ರಾಮಾಣಿಕತೆ ಮೆಚ್ಚಿಕೊಳ್ತೇನೆ. ಮಹಿಳಾ ಸಾಧಕರೇ ಇರಲಿ ಪುರುಷ ಸಾಧಕರೇ ಇರಲಿ, ಸಾಧಕರಿಗೆ ನಮ್ಮ ಸಂಸ್ಥೆ ಸುರಕ್ಷಿತ ತಾಣ. ಸಾಮಾನ್ಯವಾಗಿ ಸಂಪ್ರದಾಯ ಮಠಗಳಲ್ಲಿ ಸಾಧಕ ಹೃದಯಿಗಳಿಗೆ ಅವಕಾಶ, ತರಬೇತಿ ಇರುವುದಿಲ್ಲ ಜ್ಞಾನ, ಸಂಸ್ಕಾರ ಕೊಡುವುದಲ್ಲದೆ ಅವರಿಗೆ ''ಅನ್ಯ ಕೀಡೆಗಳು'' ಕಡಿದು, ಕಳಂಕಗೊಳಿಸದಂತೆ ರಕ್ಷಣೆ, ಮಾರ್ಗದರ್ಶನ ಮಾಡುತ್ತೇವೆ. ಸಾಧನೆ ಮಾಡಬೇಕೆನ್ನುವವರಿಗಾಗಲೀ ಬೋಧನೆ ಮಾಡಬೇಕೆನ್ನುವವರಿಗಾಗಲೀ ಏನೂ ಕೊರತೆ ಇಲ್ಲ. ಆದರೆ ಕೆಲವೊಂದು ದೌರ್ಬಲ್ಯಕ್ಕೆ ಈಡಾಗಿ ನಮ್ಮ ಕಣ್ಗಾವಲು, ಎಚ್ಚರಿಕೆ, ಬುದ್ಧಿವಾದ ಇಷ್ಟಪಡದೆ ಹೊರಗೆ ಹೋಗುತ್ತಾರೆ. ಹೋದ ಬಳಿಕ ಅವರನ್ನು ನಮ್ಮ ಶಿಷ್ಯರು ಎಂದುಕೊಳ್ಳಲು ನನಗೆ ಇಷ್ಟವಿರುವುದಿಲ್ಲ. ಬುದ್ಧಿ ಹೇಳುವಷ್ಟು ಹೇಳಿ ನಂತರ ನಮ್ಮ ಶಿಷ್ಯರೆಂದು ಗುರುತಿಸಿ ಕೊಳ್ಳಬೇಡಿ ಎಂದು ಸ್ಪಷ್ಟವಾಗಿ ಹೇಳಿರುತ್ತೇನೆ. ಆದ್ದರಿಂದ ನಮ್ಮ ಶಿಷ್ಯರೆಂದು ಹೇಳಿಕೊಂಡು ಏನೇನೊ ವ್ಯವಹಾರ ಮಾಡಿ, ನಮ್ಮ ಹೆಸರು ಕೆಡಿಸುವುದಕ್ಕಿಂತ ನಮ್ಮ ಹೆಸರು ಎತ್ತದೆ ಇರುವುದು ಅವರ ಪ್ರಾಮಾಣಿಕತೆಯನ್ನು ತೋರಿಸುವುದಲ್ಲವೆ ? ನೀವೇಕೆ ಒತ್ತಾಯಪಡಿಸುತ್ತೀರಿ ?

✉ಮಂಜುನಾಥ ಕಲ್ಲಪ್ಪ ಪಾಟೀಲ್, ಹುಬ್ಬಳ್ಳಿ. -ಸ್ವಯಂ ಪ್ರೇರಣೆಯಿಂದ ಅಧ್ಯಾತ್ಮ ಜೀವನಕ್ಕೆ ಬಂದ ಓರ್ವ ಸಾಧಕ ಸ್ವಾಮಿಗಳಿದ್ದಾರೆ. ನಾವು ಅವರ ಶಿಷ್ಯರು, ಅಭಿಮಾನಿಗಳು. ಒಳ್ಳೆಯ ಪ್ರವಚನಕಾರರಾದ ಅವರುಗಳ ಸುತ್ತ ಕೆಲವು ಮಹಿಳೆಯರು ಅತಿಯಾಗಿ ಸುಳಿದಾಡುವುದು ಕಂಡು, ಮನನೊಂದು ಎಚ್ಚರಿಕೆಯಿಂದಿರಲು ಗುರುಗಳಲ್ಲಿ ವಿನಂತಿಸಿದೆ. ಈಗ ಅವರು ನನ್ನನ್ನೇ ದೂರವಿಡಲು ಯತ್ನಿಸುತ್ತಿದ್ದಾರೆ. ಇದರಿಂದ ನಾನು ಖಿನ್ನನಾಗಿದ್ದೇನೆ, ದೂರ ಉಳಿಯಲು ಬಯಸಿದ್ದೇನೆ. ನಿಮ್ಮ ಸಲಹೆ ಏನು?

★ ಖಿನ್ನರಾಗಬೇಡಿರಿ. ಪುನಃ ಪುನಃ ಎಚ್ಚರಿಕೆಯನ್ನೂ ನೀಡಿರಿ. ಒಂದು ಮುತ್ತು ತಯಾರಾಗಲು ಹಿಂದೆ ಅಪಾರ ಕ್ರಿಯೆ ನಡೆದಿರುತ್ತದೆ. ಅದನ್ನು ಒಡೆಯಲು ಒಂದು ಏಟು ಸಾಕು. ಸಾಧಕರಲ್ಲಿ 3 ಪ್ರಕಾರ ಇರುತ್ತಾರೆ.

1. ಉತ್ತಮರು - ತಾವೂ ಯಾರನ್ನೂ ಕೆರಳಿಸಲು ಹೋಗರು, ಇತರರಿಂದಲೂ ವಿಕೃತಿಗೆ ಒಳಗಾಗರು.

2. ಮಧ್ಯಮರು - ತಾವು ಅನ್ಯರ ಮೇಲೆ ಮಾಯಾಪಾಶ ಬೀರದೆ ಇದ್ದರೂ, ಅನ್ಯರಿಂದ ವಿಚಲಿತರಾಗುವವರು ; ಹೊಯ್ದಾಡುವವರು.

3. ಅಧಮರು- ತಾವೂ ಸ್ವೇಚ್ಛಾಚಾರಿಗಳಾಗಿ, ಅನ್ಯರನ್ನು ವಿಚಲಿತಗೊಳಿಸುವವರು. ಈ ಮೂರನೆಯವರು ಬಲು ಅಪಾಯಕಾರಿಗಳು.

ನಿಮ್ಮ ವಿವರಣೆ ನೋಡಿದರೆ ನೀವು ಅಭಿಮಾನವಿಟ್ಟ ಗುರುಗಳು 'ಮಧ್ಯಮ' ವರ್ಗದವರಂತೆ ತೋರುತ್ತಾರೆ. ಅವರು ಎಡವಿಬಿಟ್ಟು ಆನಂತರ ಪಶ್ಚಾತ್ತಾಪ ಪಡುವ ಸ್ವಭಾವದವರಂತೆ ಕಾಣುತ್ತಾರೆ. ಯಾವುದೋ ಒಂದು ಮಂಕು ಕವಿದು, ಮನಸ್ಸು ಡೋಲಾಯಮಾನವಾಗಿರುವುದರಿಂದ ನಿಮ್ಮನ್ನು ದೂರವಿಡಲು ಯತ್ನಿಸುತ್ತಾರೆ. ತಮ್ಮ ತಪ್ಪಿನ ಅರಿವಾದಾಗ ನೀವೇ ಹಿತೈಷಿಗಳೆಂದು ತಿಳಿಯುತ್ತಾರೆ. ಆದ್ದರಿಂದ ನೀವು ಖಿನ್ನರಾಗಿ, ದೂರವಾಗದೆ ಬುದ್ಧಿ ಹೇಳಿರಿ. ಜ್ಞಾನಿಯು ಪತಿತನಾದರೆ ಸಮಾಜಕ್ಕೆ ಬಹುದೊಡ್ಡ ನಷ್ಟ.

✉ಅನ್ನಪೂರ್ಣಮ್ಮ, ದಾವಣಗೆರೆ. -ದಿ.2-12-2001 ರಂದು ದಾವಣಗೆರೆಯಲ್ಲಿ ರಾಷ್ಟ್ರೀಯ ಬಸವ ದಳ ಮತ್ತು ಅಕ್ಕ ನಾಗಲಾಂಬಿಕಾ ಮಹಿಳಾ ಗಣದ ವಾರ್ಷಿಕೋತ್ಸವ ತುಂಬಾ ಚೆನ್ನಾಗಿ ನಡೆಯಿತು. ನಿಮ್ಮ ಪ್ರವಚನ ಕೇಳಿ ಸಂತೋಷವಾಯಿತು. ಆದರೆ ಕೆಲವು ಕಿಡಿಗೇಡಿ ತರುಣರು (ಬಸವ ಕೇಂದ್ರದವರು) ಲಿಂಗದೇವ ಕುರಿತು ಪ್ರಶ್ನೆ ಕೇಳಿದಾಗ ನೀವು ತಾಳ್ಮೆಯಿಂದ ಉತ್ತರ ನೀಡಿದಿರಿ. ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ಅವರಿಗೆ ಉತ್ತರ ಕೊಡಲು ಸಮಯ ಹಾಳು ಮಾಡುವುದು ; ಏಕೆಂದರೆ ತಿಳಿದುಕೊಳ್ಳುವ ಆಕಾಂಕ್ಷೆಯಿಂದ ಅವರು ಕೇಳುವುದಿಲ್ಲ. ಅವರಿಗೆ ಉತ್ತರಿಸುವುದು ನಿಷ್ಪ್ರಯೋಜಕ ಎಂದು ನನ್ನ ಭಾವನೆ.

★ಹಾಗೆಂದು ತಿಳಿಯಬಾರದು. ಸ್ವಭಾವತಃ ಯಾರೂ ಕೆಟ್ಟವರಿರುವುದಿಲ್ಲ ಯಾರದೋ ಪ್ರಚೋದನೆಯಿಂದ ಕೆಲವು ಕಾಲ ಕೆಟ್ಟದಾಗಿ ವರ್ತಿಸುವವರೂ ಪರಿವರ್ತನೆಯಾಗಿಯೇ ಆಗುತ್ತಾರೆ. ಕೋಣನ ಮುಂದೆ ಕಿನ್ನರಿ ಬಾರಿಸುವುದು ನಿಷ್ಪ್ರಯೋಜಕ. ಆದರೆ ಕೋಣನ ಬಳಿ ಜಾಣರೂ ಇದ್ದರೆ ಆ ಕಿನ್ನರಿಯ ಆನಂದವನ್ನು ಸವಿಯುವರು ತಾನೆ? ಅದೇ ರೀತಿ ಕಿಡಿಗೇಡಿಗಳ ಪ್ರಶ್ನೆಗೆ ನಾವು ಉತ್ತರ ನೀಡಿದಾಗ ಒಂದು ವೇಳೆ ಅವರು ಪ್ರಾಮಾಣಿಕವಾಗಿ ತಿಳಿದುಕೊಳ್ಳದಿದ್ದರೂ ಉಳಿದ ಬಸವ ಭಕ್ತರಿಗಾದರೂ ಲಿಂಗದೇವನ ಮಹತ್ವ ಮತ್ತು ಆ ಪರಿಕಲ್ಪನೆಯ ಹಿಂದಿನ ಅರ್ಥ ತಿಳಿದು, ಇನ್ನೊಬ್ಬರಿಗೆ ಮನವರಿಕೆ ಮಾಡಲು ಸಾಧ್ಯವಾಗುವುದಷ್ಟೆ.

✉ಮಹಾಂತೇಶ ರಾಜಗೋಳಿ ಲಿಂಗಾಯತ್, ಬೆಂಗಳೂರು. - ಲಿಂಗಾಯತ ಧರ್ಮದ ಪವಿತ್ರ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಮಾಂಸಾಹಾರಿ ಅಂಗಡಿ, ಹಾಗೂ ಬಾರ್‌ಗಳು ಇರುವುದು ಸೂಕ್ತವೆ? ಇವುಗಳು ಅಲ್ಲಿರುವುದು ಬಸವಣ್ಣನವರ ತತ್ತ್ವಕ್ಕೆ ಅಪಚಾರ ಮಾಡಿದಂತಲ್ಲವೆ ?

★ಕೂಡಲ ಸಂಗಮ ಗ್ರಾಮದಲ್ಲಿ ಲಿಂಗಾಯತರು ಮಾತ್ರವಲ್ಲ ಮಾಂಸಾಹಾರಿಗಳಾದ ಇನ್ನಿತರ ಜಾತಿಗಳವರೂ ಇದ್ದಾರೆ. ಅಂದಾಗ ಮಾಂಸಾಹಾರಿ ಅಂಗಡಿ ಇರಬಾರದು ಎಂದು ನಿರೀಕ್ಷಿಸುವುದು ಅತಿ ಹೆಡ್ಡತನವಲ್ಲವೆ? ಮೇಲ್ಜಾತಿ ಲಿಂಗಾಯತರು ಎಂದು ಹೇಳಿಕೊಳ್ಳುವ ಅನೇಕರು ಕದ್ದು ಹೋಗಿ ಮಾಂಸಾಹಾರ ಮಾಡುತ್ತಾರೆ ಎಂದು ಸಹ ಕೇಳಿದ್ದೇನೆ. ಮುಳ್ಳಿದೆ ಎಂದು ಇಡೀ ಭೂಮಿಗೆ ಚರ್ಮ ಹಾಸಲು ಬರದು ಅವರವರ ಕಾಲಿಗೆ ಚಪ್ಪಲಿ ಹಾಕಿಕೊಂಡರೆ ಸಾಕು ಎಂದು ಕೈಲಾದಷ್ಟು ಜನರಿಗೆ ನೀತಿ ಬೋಧನೆ ಮಾಡಿ ಶರಣ ಮಾರ್ಗಕ್ಕೆ ಕರೆತರುತ್ತಿದ್ದೇವೆ. ■

ಪೂಜ್ಯ ಮಾತಾಜಿಯವರನ್ನು ಕುರಿತ ಗೀತೆ

ಓ ನನ್ನ ಬಸವ ಚೇತನ
ನಿಮಗಿದೋ ನನ್ನ ನಮನ
ನವವರುಷ ತರಲಿ ನಿಮಗೆ
ಹೊಸ ಹರುಷ ನಿಮ್ಮ ಬಾಳಿಗೆ
ಎಲ್ಲಿಂದಲೋ ನೀವು ಬಂದಿರಿ !
ಏನೆಲ್ಲಾ ಕಾಯಕವ ಮಾಡಿದಿರಿ,
ಬಸವ ಧರ್ಮ ಪ್ರಸರಣ
ಎಲ್ಲೆಲ್ಲೂ ನಿಮ್ಮಿಂದ ಜನ ಜಾಗರಣ !
ಲಕ್ಷ ಲಕ್ಷ ಶರಣರ ಒಗ್ಗೂಡಿಕೆ !
ಸಾಮಾನ್ಯವೇ ! ಇದು ನಿಮ್ಮ ಹೆಗ್ಗಳಿಕೆ !
ನಂಬಿ ಬಂದ ಶರಣರಿಗೆ ಆಶೀರ್ವಚನ
ಮಾಡುವಿರಿ ಮನದುಂಬಿ ಬಸವ ಧರ್ಮ ಪ್ರವಚನ
ಇರುವರು ಇಲ್ಲಿ ಗುರುಗಳು ಅನೇಕ !
ವಿಷಾದ ಒಂದೆ, ಬಸವ ತಂದೆ ಮರೆತರ್ಯಾಕ ?
ಆ ಕಾಯಕಕ್ಕೆ ಸೂಕ್ತ ನೀವೆ ಎಂದು
ಬಸವ ತಂದೆ ಇಳೆಗೆ ನಿಮ್ಮ ತಂದು
ಮೆರೆಸುತಿಹನು ವಿಶ್ವಧರ್ಮ ಅಂದು-ಇಂದು-ಎಂದೆಂದೂ.

ರಚನೆ : ಹೊರೆಯಾಲ ಮಹದೇವ ಸ್ವಾಮಿ, ರಾ.ಬ.ದ., ಮೈಸೂರು.

ದಾವಣಗೆರೆಯಲ್ಲಿ ವಿಶೇಷ ಕಾರ್ಯಕ್ರಮ

ದಾವಣಗೆರೆಯ ರಾಷ್ಟ್ರೀಯ ಬಸವ ದಳ ಮತ್ತು ಅಕ್ಕನಾಗಲಾಂಬಿಕಾ ಮಹಿಳಾ ಗಣದವರು ಸಂಯುಕ್ತವಾಗಿ ವಾರ್ಷಿಕೋತ್ಸವ ಮತ್ತು ಬಸವ ತತ್ತ್ವ ಸಮಾವೇಶ ಕಾರ್ಯಕ್ರಮವನ್ನು ದೇವ(ಭಾನು)ವಾರ ದಿ.2-12-2001ರಂದು ಏರ್ಪಡಿಸಿದ್ದು , ಕಾರ್ಯಕ್ರಮವನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಉದ್ಘಾಟಿಸಿದರು. ಶರಣ. ಹಳ್ಳೂರು ಸಿದ್ಧಪ್ಪನವರು ಧ್ವಜಾರೋಹಣ ಮಾಡಿದರೆ, ಶರಣೆ. ಕುಸುಮಾ ಮೃತ್ಯುಂಜಯಪ್ಪ ಸ್ವಾಗತಿಸಿದರು. ಶರಣ. ಚಂದ್ರಯ್ಯನವರು ದಾವಣಗೆರೆ ರಾಷ್ಟ್ರೀಯ ಬಸವ ದಳದ ಚಟುವಟಿಕೆ ಕುರಿತು ವರದಿ ವಾಚನ ಮಾಡಿದರೆ, ಶರಣ ಮೃತ್ಯುಂಜಯಪ್ಪ ಶರಣು ಸಮರ್ಪಣೆ ಮಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿ ಶರಣ. ತಿಪ್ಪೇಸ್ವಾಮಿ, ಶರಣ. ಎಸ್.ಟಿ.ಚಂದ್ರಶೇಖರಪ್ಪ, ಶರಣ. ವಿರುಪಾಕ್ಷಪ್ಪ ಉಪನ್ಯಾಸ ನೀಡಿದರು. ಶರಣ. ಜಂಬಿಗಿ ಶರಣಪ್ಪನವರು ಅಧ್ಯಕ್ಷ ಭಾಷಣ ಮಾಡಿದರು. ಶರಣೆ. ವಿಜಯಾ ಕವನ ವಾಚನ ಮಾಡಿದರೆ, ಶರಣ ನಂಜುಂಡಪ್ಪನವರು ಸಭಾ ನಿರ್ವಹಣೆ ಮಾಡಿದರು.

ಶರಣ ಮೇಳದಲ್ಲಿ ಬಿಡುಗಡೆಯಾಗಲಿರುವ ಸಾಮಗ್ರಿಗಳು

1. 2002ನೆಯ ಇಸವಿಯ ಗೋಡೆ ಕ್ಯಾಲೆಂಡರ್ - ಬೆಲೆ : 16 ರೂ.
2. 2002ನೆಯ ಜೇಬಿನ ಆವೃತ್ತಿ ಕ್ಯಾಲೆಂಡರ್ - ಬೆಲೆ : 6 ರೂ
3. 2002ನೆಯ ಇಸವಿಯ ಕ್ಯಾಲೆಂಡರ್ ಕಾರ್ಡ್ - ಬೆಲೆ : 1 ರೂ
4. ಹೊಸ ಧ್ವನಿ ಸುರುಳಿಗಳು - ಬಸವ ವಚನ ಪ್ರಭೆ - ಬೆಲೆ : 35 ರೂ
5. - ಸರ್ವಜ್ಞ ವಾಣಿ - ಬೆಲೆ : 35 ರೂ
6. ಷಟ್‌ಸ್ಥಲ ಕುರಿತು ಮಾತಾಜಿಯವರ ಪ್ರವಚನ - ಬೆಲೆ : 35 ರೂ
7. ಇಷ್ಟಲಿಂಗ ಯೋಗ ಕುರಿತು ಮಾತಾಜಿಯವರ ಪ್ರವಚನ - ಬೆಲೆ : 35 ರೂ
8. ದೇವಪೂಜಾ ವಿಧಾನ ಬೆಲೆ : - ಬೆಲೆ : 22 ರೂ
   ನವೀಕರಣಗೊಂಡ ಆವೃತ್ತಿ. ಲಿಂಗದೇವ ಮಂತ್ರಗಳೊಡನೆ
9. ಬಸವೇಶ್ವರ ಪೂಜಾವ್ರತ - ಬೆಲೆ : 20 ರೂ
   ನವೀಕರಣಗೊಂಡ ಆವೃತ್ತಿ, ಗುರು ಬಸವ ಸ್ತೋತ್ರದೊಡನೆ
10. ವಿಶ್ವವಿಭೂತಿ ಬಸವಣ್ಣ (ನವೀಕರಣಗೊಂಡ ಆವೃತ್ತಿ) - ಬೆಲೆ : 15 ರೂ
11. ವಚನ ಸಂಗಮ - ಬೆಲೆ : 15 ರೂ
    ಶರಣ ಮೇಳದಲ್ಲಿ ದಿ.14ರಂದು ವಚನ ಪಠಣ ಮಾಡಲು ಅಗತ್ಯವಾದ ಪುಸ್ತಕ
12. ತರಂಗಿಣಿ (ಹಿಂದಿ ಆವೃತ್ತಿ) ಲೇಖಕರು ಮಾತಾಜಿ
    ಅನುವಾದಕರು : ಶರಣ. ಎಸ್. ಸದಾಶಿವಯ್ಯ
    ಅಕ್ಕಮಹಾದೇವಿ ಕುರಿತಾದ ಕಾದಂಬರಿ - ಬೆಲೆ : 200 ರೂ
    (ಹಿಂದಿ ಬರುವ ಮಿತ್ರರು, ಬಂಧುಗಳು, ಪರಿಚಿತರಿಗೆ ಪ್ರಸ್ತುತ ಗ್ರಂಥವನ್ನು ಖರೀದಿಸಿ ನೆನಪಿನ ಕಾಣಿಕೆಯಾಗಿ ಕೊಡಿರಿ.)
13. ಸುಂದರವಾದ ಬಸವ ಭಾವಚಿತ್ರವಿರುವ ವಿಸಿಟಿಂಗ್ ಕಾರ್ಡ್ (100ಕ್ಕೆ 100 ರೂ.)
14. ಬಸವ ಜಯಂತಿ ಗ್ರೀಟಿಂಗ್ಸ್
15. ಗಣಲಾಂಛನದ ಸ್ಟಿಕ್ಕರ್ಸ್

ಕ್ರೈಸ್ತರ ಕ್ರಾಸಿನಂತೆ, ಮುಸಲ್ಮಾನರ ಅರ್ಧಚಂದ್ರ ನಕ್ಷತ್ರದಂತೆ, ಲಿಂಗಾಯತ ಧರ್ಮದ ಗಣಲಾಂಛನವಾದ ಈ ಬಸವ ಲಿಂಗ ಮುದ್ರೆಯ ಸ್ಟಿಕ್ಕರನ್ನು ಅಂಗಡಿ, ಮನೆ, ವಾಹನಗಳಿಗೆ ಹಚ್ಚಲು ಅನುಕೂಲ.

ನಿರ್ಧಾರ - ನಿರಾಧಾರ

ಹುಮ್ಮಸ್ಸಿನಿಂದ ಮಾಡಿದ ನಿರ್ಧಾರ
ಆಯಿತು ಎಂದೆನಿಸುವುದು ನಿರಾಧಾರ
ನಿರ್ಧಾರಕ್ಕೆ ಮುಂಚೆ ಬೇಕು ಕೂಲಂಕುಶ ವಿಚಾರ
ನಿರ್ಧಾರ ಆಗದಿರಲು ನಿರಾಧಾರ,
ಬೇಕದಕೆ ಆತ್ಮಬಲದ ಆಧಾರ. - ನಾಗಶೆಟ್ಟಿ ಕೆ. ಶೆಟಕಾರ, ಬೀದರ್



ದಾವಣಗೆರೆಯಲ್ಲಿ ದಿ. 2-12-2001ರಂದು ನಡೆದ ವಾರ್ಷಿಕೋತ್ಸವ ಮತ್ತು ಬಸವ ತತ್ತ್ವ ಸಮಾವೇಶ. ಪೂಜ್ಯ ಮಾತಾಜಿಯವರಿಂದ ಉದ್ಘಾಟನೆ.



ಶರಣ ಸಂಗಮ-ದೇವ(ರವಿ)ವಾರದಂದು ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾದ ಶರಣ ಶರಣೆಯರು.



ಶರಣ ಹಳ್ಳೂರು ಸಿದ್ಧಪ್ಪನವರಿಂದ ಧ್ವಜಾರೋಹಣ



ಶರಣ. ಜಂಬಿಗಿ ಶರಣಪ್ಪನವರಿಂದ ಅಧ್ಯಕ್ಷ ಭಾಷಣ

ಓಂ ಶ್ರೀಗುರು ಬಸವಲಿಂಗಾಯನಮಃ

86666

15ನೆಯ ಶರಣ ಮೇಳಕ್ಕೆ ಶುಭಾಶಯಗಳು



Prop. P.N. Sanmathi

SANMATHI ENTERPRISES

MANUFACTURERS & DEALERS IN RELIGIOUS ITEMS AND POOJA ARTICLES

No. 64, Veetharaga, 7th Main
Banashankari 3rd stage
2nd Phase, Bangalore-560085

Phone : 080-6722521

ಬಸವ ವಚನಾಮೃತ

ಕಾಗೆಯೊಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ !

-ಬ.ವ.ದೀಪ್ತಿ ೪೩೫

ಓಂ ಶ್ರೀಗುರು ಬಸವಲಿಂಗಾಯನಮಃ

86666

15ನೆಯ ಶರಣ ಮೇಳಕ್ಕೆ ಶುಭಾಶಯಗಳು



Prop. K. Chandrasekhar & Sons

K. MALIGAPPA & CO.,

EXCLUSIVE SUITINGS & SHIRTINGS

Raymond - DIGJAM -OCM - DINESH
Wholesale & Retail Showroom

No. 36, Dewan Surappa's Lane-2
Chickpet, Bagalore560053

Phone : 2878511
2253515
Res : 6647691

ಬಸವ ವಚನಾಮೃತ

ಶ್ರೀ ವಿಭೂತಿಯ ಪೂಸದವರ, ಶ್ರೀ ರುದ್ರಾಕ್ಷಿಯ ಧರಿಸದವರ
ನಿತ್ಯ ಲಿಂಗಾರ್ಚನೆಯ ಮಾಡದವರ, ಜಂಗಮವೇ ಲಿಂಗವೆಂದರಿಯದವರ
ಸದ್ಭಕ್ತರ ಸಂಗದಲ್ಲಿ ಇರದವರ, ಎನಗೊಮ್ಮೆ ತೋರದಿರಯ್ಯ ಲಿಂಗದೇವಾ
ಸೆರಗೊಡ್ಡಿ ಬೇಡುವೆ !

-ಬ.ವ.ದೀಪ್ತಿ ೯೫೨

SCAN LINE
Digital Prepress

ONE STOP SHOP FOR ALL YOUR PRINTING SOLUTIONS

Equipped with the sophisticated Prepress Instruments

Creoscitex Dolev 450 Image Setter	Linotype Hell Drum scanner	Xante Colour Laser Pro Printer	HP LaserJet 5000 B/W printer
21"x26"	30"x40"	A3	A3

SERVICES

- Jumbo Scanner Input & Output
- All types of file formats both in Apple Mac & P.C Platforms are accepted for positive output
- System Work, Image manipulation, Colour Correction, Multiple ups and Manual Super Imposing
- Wet proofing and progressives, Xante and HP Laser proofing
- Fast Delivery Out put jobs accepted on Mac and Pc

50/11, 3rd Floor, IInd Main Road, Rajajinagar Industrial Town, Bangalore - 44. ✆:3204144, 3387106
Email : scanl@eth.net

With Best Compliments From

PUNJAB AND SIND BANK
Empowering women with enterprise





PSB Scheme for financing women for selling flower/plan

Objectives of the scheme

The primary objective of the scheme is to provide credit to women engaged in t business of flower/plants selling. There is vast scope of flower and plants selli business in today's world. May it be a corporate office, railway platform or airp or a Birthday or Wedding party, we find the presence of flowers/bouquets. T culture is increasing not only in metros but in urban & semi-urban areas also. T business is of such a nature that women can easily run it without much hass Keeping in view the growing trend of this business PSB has formulated a scheme financing women for selling flowers and plants in this year of Wom Empowerment".

Loan Amount	:	Rs. 25000/-
Repayment of loan	:	In 48 equated monthly instalments.
Margin	:	15%
Rate of Interest	:	As per RBI/HO guidelines issued from time to time
Security	:	Hyp. Of assets created with Bank Loan
Guarantor	:	I) Guarantee of Husband/Father of the party
		ii) One independent guarantor with sufficient means
Sanctioning authority	:	Branch Manager

PUNJAB AND SIND BANK
(A Government of india Undertaking)
Visit us at: www.punjabandsindbank.com
PSB - Where service is a way of life.

ಕಲ್ಯಾಣ ಕಿರಣ CPMG/KA/BGW-50 ಜನವರಿ - 2002
R.NO 19980/70 WPP (W) -17

ಆಚಾರವೇ ಸ್ವರ್ಗ ಅನಾಚಾರವೇ ನರಕ



ಕಾಯಕವೇ ಕೈಲಾಸ - ದಾಸೋಹವೇ ದೇವರು